# ಪ್ರಸಾದ

ದ್ವೈಮಾಸಿಕ

ಸಂಪುಟ ೩೭ ಸಂಚಿಕೆ ೬ ನವೆಂಬರ್–ಡಿಸೆಂಬರ್ ೨೦೨೨



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಕಲಾಮಂದಿರದಲ್ಲಿ ಅಖಿಲ ಭಾರತ ಹಿರಿಯ ನಾಗರಿಕರ ಒಕ್ಕೂಟದ 20ನೇ ರಾಷ್ಟ್ರೀಯ ಹಿರಿಯ ನಾಗರಿಕರ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಕುಸುಮಶೆಟ್ಟಿ, ಶ್ರೀ ಮಲ್ಲಪ್ಪ ಮುದಕವಿ, ಶ್ರೀ ಕೆ.ಟಿ. ವೀರಪ್ಪ, ಶ್ರೀ ವಿಶ್ವಾಸ್‌ರಾವ್ ಭಡಾನೆ, ಡಾ. ರವಿ ಪಾಟೀಲ್, ಶ್ರೀ ಎ.ವೈ. ಬೆಂಡಿಗೇರಿ ಶ್ರೀ ಶ್ರೀಹರಿ ಶಿಧಾಯೆ, ಶ್ರೀಮತಿ ಸುಮಾ, ಡಾ. ನಿರ್ಮಲ ಮೊದಲಾದವರುಗಳಿದ್ದಾರೆ (16 ನವೆಂಬರ್ 2022)



ಕರ್ನಾಟಕ ಸರ್ಕಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ 'ಉನ್ನತ ಶಿಕ್ಷಣದಲ್ಲಿ ಸುಶಾಸನ : ಪರಿಕಲ್ಪನೆ ಮತ್ತು ಅನುಷ್ಠಾನ' ಕುರಿತ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಡಾ. ಅಶ್ವತ್ಥ ನಾರಾಯಣರವರು ಉದ್ಘಾಟಿಸಿದರು. ಪ್ರೊ. ಯಶವಂತ ಡೋಂಗ್ರೆ, ಪ್ರೊ. ಎಸ್.ಎನ್. ಹೆಗಡೆ, ಪ್ರೊ ಶರಣಪ್ಪ ಹಲಸೆ, ಪ್ರೊ. ಹೆಚ್. ರಾಜಶೇಖರ್, ಡಾ. ಎ.ಪಿ. ಜ್ಞಾನಪ್ರಕಾಶ್, ಶ್ರೀ ಎಲ್. ನಾಗೇಂದ್ರ, ಶ್ರೀಮತಿ ವಿ.ಆರ್. ಶೈಲಜಾರವರುಗಳಿದ್ದಾರೆ (3 ಡಿಸೆಂಬರ್ 2022)

# ಪ್ರಸಾದ

**ಸಂಪುಟ 37 : ಸಂಚಿಕೆ 6** **ನವೆಂಬರ್–ಡಿಸೆಂಬರ್ 2022**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ

ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

---

ಮುಖಪುಟ ಚಿತ್ರ

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕದ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು ಉದ್ಘಾಟಿಸಿದರು. ಮೇಯರ್ ಶ್ರೀಮತಿ ಸುನಂದ ಪಾಲನೇತ್ರ ಮತ್ತು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರುಗಳಿದ್ದಾರೆ (18 ಆಗಸ್ಟ್ 2022)


**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಡಾ. ಹೆಚ್. ತಿಪ್ಪೇರುದ್ರಸ್ವಾಮಿ ಅವರ
ಜಡದಲ್ಲಿ ಜಂಗಮ; ಸಹೃದಯಾವಲೋಕನ 11
**ಡಾ. ನೀಲಗಿರಿ ಎಂ. ತಳವಾರ್**

ಶರಣರ ಬೆಳಕಿನಲ್ಲಿ ತಮಂಧದ ಕೇಡ ನೋಡಯ್ಯ 21
**ಡಾ. ಎಂ.ಎಸ್. ಆಶಾದೇವಿ**

ಕನ್ನಡಮ್ಮನ ನಿಶ್ಶಬ್ದದ ಅಳಲನ್ನು ಆಲಿಸೋಣ... 38
**ವೆಂಕಟೇಶ ಕೆ. ಜನಾದ್ರಿ**

ಅವಧೂತರ ಲೋಕ 38
**ಡಾ. ಎನ್.ಎಂ. ಗಿರಿಜಾಪತಿ**

ವಾರ್ತಾವಿಹಾರ 44
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 59

## ಮನವಿ

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

ದಿನಾಂಕ 6.12.2022ರಂದು ಸುತ್ತೂರಿನಲ್ಲಿ ನಡೆದ ಶಿವದೀಪೋತ್ಸವ ಕಾರ್ಯಕ್ರಮದಲ್ಲಿ ಭಕ್ತಸಮೂಹ ತಮ್ಮ ಎಲ್ಲ ಲೌಕಿಕ ಜಂಜಡಗಳನ್ನು ಮರೆತು ಬಹಳ ಭಕ್ತಿಪರವಶರಾಗಿ ಅಲ್ಲಿ ಹಚ್ಚಿಟ್ಟ ದೀಪಗಳ ಬೆಳಕಿನ ನಡುವೆ ಸಂಭ್ರಮಿಸುತ್ತಿದ್ದುದು ಒಂದು ಅವಿಸ್ಮರಣೀಯವಾದ ಸನ್ನಿವೇಶವಾಗಿತ್ತು. ದೀಪವೆಂಬುದು ಭಾರತೀಯರ ಬದುಕಿನಲ್ಲಿ ಒಂದು ವಿಶೇಷವಾದ, ಹಾಗೆಯೇ ಆನುಭಾವಿಕವಾದ ಅರ್ಥವನ್ನು ಸ್ಫುರಿಸುವ ಪರಿ ಅನನ್ಯ. ಬೆಂಕಿ ಮತ್ತು ಬೆಳಕು ಒಂದೇ ಮೂಲದಿಂದ ಬಂದಿದ್ದರೂ, ಬೆಂಕಿಯು ಬಹಿರಂಗದ ಭೌತಿಕ ಬದುಕಿನ ಸ್ತರಕ್ಕೆ ಮಾತ್ರ ಸೀಮಿತವಾಗುತ್ತದೆ; ಆದರೆ, 'ಬೆಳಕು' ಭೌತಿಕ ಸ್ತರದಲ್ಲಿ ಅರಿವಿಗೆ ಬಂದರೂ, ಅದನ್ನೂ ಒಳಗೊಳ್ಳುತ್ತಾ ಮೀರಿ ಹೋದಂತೆ ಅದು ದೃಗ್ಗೋಚರವಲ್ಲದ ಅನುಭಾವಲೋಕಕ್ಕೂ ವಿಸ್ತರಿಸಿ ಮನುಷ್ಯನನ್ನು ವಿಶ್ವಮಾನವನನ್ನಾಗಿಸುತ್ತದೆ. ಆದ್ದರಿಂದಲೇ ಹಿರಿಯರು ಬೆಳಕನ್ನು ಕುರಿತು ಹೀಗೆ ವರ್ಣಿಸಿದ್ದಾರೆ –

> ದೀಪಂ ಜ್ಯೋತಿ ಪರಬ್ರಹ್ಮ ದೀಪಂ ಜ್ಯೋತಿ ಜನಾರ್ದನಃ।
> ದೀಪೋ ಹರತಿ ಮೇ ಪಾಪಂ ಸಂಧ್ಯಾದೀಪಂ ನಮೋಸ್ತು ತೇ ॥
>
> ದೀಪಂ ಜ್ಯೋತಿ ತಮೋಪಹಂ ದೀಪೇನ ಹರತಿ ಪಾಪಾನಿ।
> ದೀಪೇನ ಸಾಧ್ಯತೇ ಸರ್ವಂ ಸಂಧ್ಯಾದೀಪಂ ನಮೋಸ್ತು ತೇ ॥

ಇದನ್ನೇ ಶರಣರು ಹೀಗೆ ಹೇಳಿದ್ದಾರೆ–

> ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
> ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
> ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ
> ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
> ನಮ್ಮ ಕೂಡಲಸಂಗನ ಶರಣರ ಅನುಭಾವದಿಂದ
> ಎನ್ನ ಭವದ ಕೇಡು ನೋಡಯ್ಯಾ

ಇಲ್ಲಿ ಅಜ್ಞಾನ, ಭವ, ಅವಲೋಹ ಇವೆಲ್ಲವೂ ಕೆಟ್ಟದ್ದರ, ಕತ್ತಲೆಯ, ವ್ಯಕ್ತಿಯನ್ನು ಭವಿತನಕ್ಕೆ ತಳ್ಳುವ ನೇತ್ಯಾತ್ಮಕ ಅಂಶಗಳೇ ಆಗಿವೆ. ಇವುಗಳಿಂದ ಬಿಡುಗಡೆ ಪಡೆಯಬೇಕಾದರೆ

ಜ್ಞಾನಜ್ಯೋತಿಯ ಕಿರಣ ಮನುಷ್ಯನ ಅಂತರಂಗಕ್ಕೆ ಸೋಂಕಿ ಮನದ ಮೈಲಿಗೆಯ ತಮಂಧವನ್ನು ಕಳೆದುಕೊಳ್ಳಬೇಕು. ಅದಕ್ಕಾಗಿ ಸಾಧಕನು ತನ್ನ ಎದೆಯ ಕದವನ್ನು ತೆರೆದು 'ಇಂದ್ರಿಯದಾಚೆಗಿನ' ಅಗೋಚರವಾದ ಬೆಳಕನ್ನು ಒಳಗೆ ಬರಮಾಡಿಕೊಳ್ಳ ಬೇಕಾಗುತ್ತದೆ. ಒಮ್ಮೆ ಅಂತಹ ಬೆಳಕನ್ನು ಆವಾಹಿಸಿಕೊಂಡುಬಿಟ್ಟರೆ ಮುಂದೆ ಎಂದೆಂದೂ ತಮಸ್ವರೂಪಿಗಳಾದ ಅರಿಷಡ್ವರ್ಗಗಳ ಬಾಧೆಗೆ ಪಕ್ಕಾಗದೆ ಮನುಷ್ಯ ಅನುಭಾವದ ಬೆಳ್ಳಿಬೆಳಕಿನಲ್ಲಿ ನಿರಂತರವಾಗಿ ಹೊಳೆಯುತ್ತಾನೆ.

ಅಂತಹ ಒಂದು ಅಭೀಪ್ಸೆ ಎಲ್ಲರಲ್ಲಿಯೂ ಸೂಕ್ಷ್ಮರೂಪದಲ್ಲಿ ಸುಪ್ತವಾಗಿ ಇದ್ದೇ ಇರುತ್ತದೆ. ಸೂರ್ಯೋದಯ ಮತ್ತು ಸೂರ್ಯಾಸ್ತಗಳಲ್ಲಿ ಸೂರ್ಯನಮಸ್ಕಾರ ಮಾಡುವಾಗ, ಪೂಜೆಯ ಸಂದರ್ಭದಲ್ಲಿ ಮಂಗಳಾರತಿ ತೆಗೆದುಕೊಳ್ಳುವಾಗ, ಶುಭ ಕಾರ್ಯಗಳನ್ನು ಪ್ರಾರಂಭಿಸುವ ಮೊದಲು ಜ್ಯೋತಿಯನ್ನು ಬೆಳಗುವ ಸಂದರ್ಭಗಳಲ್ಲಿ ಇಂತಹ ಅಭೀಪ್ಸೆಯ ಬಾಹ್ಯಕ್ರಿಯಾರೂಪವು ಅಭಿವ್ಯಕ್ತಿಗೊಳ್ಳುವುದನ್ನು ಕಾಣಲಾಗುತ್ತದೆ.

ಸುತ್ತೂರಿನಲ್ಲಿ ನಡೆದ 'ಶಿವದೀಪೋತ್ಸವ'ವೂ ಇಂತಹ ಒಂದು ಸಾಂಕೇತಿಕವಾದ ಸಾಮೂಹಿಕ ಪ್ರಕ್ರಿಯೆ. 'ಶಿವ' ಎನ್ನುವುದು ಸಾಮಾನ್ಯರ ನಡುವೆ ಪ್ರಚಲಿತವಿರುವ ತ್ರಿಮೂರ್ತಿಗಳಲ್ಲಿ ಒಬ್ಬನಾದ 'ಶಿವ'ನಿಂದ ಹಿಡಿದು ಆಧ್ಯಾತ್ಮಿಕ ನೆಲೆಯ 'ಮಂಗಳ'ವನ್ನು ಕುರಿತಂತೆ ಅನೇಕ ಅರ್ಥಗಳನ್ನು ಒಳಗೊಂಡಿದೆ.

> ಶಿವ ಏವ ಪರಂಜ್ಯೋತಿಃ ಶಿವ ಏವ ಪರಾತ್ಪರಃ।
> ವ್ಯಾಸೋಕ್ತಂ ಯತ್ಪರಂ ಬ್ರಹ್ಮ ಸ್ವಸೂತ್ರೇಷು ಶಿವಃ ಸ್ವಯಂ॥
> (ಕ್ರಿ.ಸಾ. ಶಿವಪದರತ್ನಕೋಶ, ಪು. 683)

ಇದು ಕಾಲದೇಶಗಳನ್ನು ಮೀರಿದ ಅಖಂಡ ಬ್ರಹ್ಮಾಂಡವನ್ನೇ ವ್ಯಾಪಿಸಿರುವ ಸುಪ್ತ ಜ್ಯೋತಿಃಪುಂಜ. ಆ ಬೆಳಕಿನ ಶಕ್ತಿಯನ್ನು ತಮ್ಮೊಳಗೆ ತುಂಬಿಕೊಳ್ಳುತ್ತಾ ನಿರಂತರ ಚಲನಶೀಲವಾಗಿರುವ ಸೂರ್ಯಚಂದ್ರಾದಿ ಗ್ರಹತಾರೆ ನೀಹಾರಿಕೆಗಳು ಜೀವಸಂಕುಲದ ಬದುಕಿನ ಮೇಲೆ ನಿರಂತರವಾಗಿ ಆ ಶಕ್ತಿಯನ್ನು ಧಾರೆ ಎರೆಯುತ್ತಲೇ ಇರುವ ಒಂದು ಮಹಾನ್ ಪ್ರತಿಮೆ. ಆ ವಿರಾಟ್ ಜ್ಯೋತಿಯನ್ನು ಚಿಜ್ಜ್ಯೋತಿಯಾಗಿಸಿಕೊಳ್ಳುವ ಒಂದು ಪ್ರಕ್ರಿಯೆಯೇ ಈ ಶಿವದೀಪೋತ್ಸವ. ಈ ದೃಷ್ಟಿಯಿಂದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ಸಾಧನಾಕ್ಷೇತ್ರವಾಗಿದ್ದ ಸುತ್ತೂರಿನಲ್ಲಿ ನಡೆದ ಈ ಉತ್ಸವಕ್ಕೆ ಒಂದು ವಿಶೇಷವಾದ ಅರ್ಥವೂ ಇದೆ. ಈ ಪರಿಕಲ್ಪನೆಯನ್ನು ಅರಿವಿನ ಸ್ತರಕ್ಕೆ ಇಳಿಸಿಕೊಳ್ಳುವ 'ಸದಾಶಿವ ಪ್ರಜ್ಞೆ' ಸಮಷ್ಟಿ ಬದುಕಿನಲ್ಲಿ ಸದಾ ಜೀವಂತವಾಗಿರಬೇಕು.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**ನಾ**ಡಿನ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾಕ್ಷೇತ್ರಗಳಲ್ಲಿ ಸುತ್ತೂರು ಮಠದ ಅನನ್ಯ ಸೇವೆಯ ಪರಿ ಸರ್ವಮಾನ್ಯವಾಗಿದೆ. ಸಹಸ್ರಾರು ಸಂಖ್ಯೆಯಲ್ಲಿರುವ ನಾಡಿನ ವೀರಶೈವ–ಲಿಂಗಾಯತ ಮಠಗಳು ಧರ್ಮದ ಆಚಾರ, ವಿಚಾರಗಳಿಂದಾಚೆಗೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬೇಕು ಎಂದು ಇನ್ನೂ ಪ್ರಾಥಮಿಕ ಚಿಂತನೆಯನ್ನೂ ನಡೆಸದೆ ಇದ್ದ (ಬೆರಳೆಣಿಕೆಯಷ್ಟು ಮಠಗಳನ್ನು ಹೊರತುಪಡಿಸಿ) ಕಾಲದಲ್ಲಿ ಸುತ್ತೂರು ಶ್ರೀಮಠ ಅಂತಹ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟದ್ದು ನಾಡವರ ಪುಣ್ಯ. ಅದರಲ್ಲೂ ಶ್ರೀಪೀಠದ 23ನೇ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕಾಲಮಾನದಲ್ಲಿ ಶ್ರೀಮಠ ಬೆಳೆದ ರೀತಿ ಒಂದು ಐತಿಹಾಸಿಕ ದಾಖಲೆಯೇ ಆಗಿದೆ. ಅನ್ನ, ವಿದ್ಯೆ, ಆರೋಗ್ಯ ದಾಸೋಹಗಳ ಜೊತೆಗೆ ಸಾಹಿತ್ಯ, ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿದ ಜೆಎಸ್ಎಸ್ ಗ್ರಂಥಮಾಲೆ, ರಂಗಭೂಮಿಯನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿದ ಜೆಎಸ್ಎಸ್ ಕಲಾಮಂಟಪ, ಹಾಗೆಯೇ ಸಂಗೀತ ಸಭಾ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶರಣತತ್ವ ಪ್ರಚಾರ ಸಮಿತಿ – ಹೀಗೆ ಅವರ ವಿಶ್ವಂಭರ ದೃಷ್ಟಿ ಬೆಳೆಯುತ್ತಾ ಹೋಗುತ್ತದೆ. ಇದನ್ನೆಲ್ಲಾ ನೋಡಿದರೆ ಎಂತಹವರಿಗೂ ಅಚ್ಚರಿಯ ಭಾವ ಮೂಡಿ ಪವಾಡಸದೃಶವಾಗಿ ಕಾಣುತ್ತದೆ.

ಈ ಹಿನ್ನೆಲೆಯಲ್ಲಿ ಧರ್ಮ ಮತ್ತು ಸಂಸ್ಕೃತಿಯ ವ್ಯಾಪಕ ಪ್ರಸಾರದ ಅನಿವಾರ್ಯತೆಯನ್ನು ಮನಗಂಡ ಪರಮಪೂಜ್ಯರು ಪ್ರಾರಂಭಿಸಿದ ಪತ್ರಿಕೆಯೇ 'ಪ್ರಸಾದ' (1966). ನಿಯತಕಾಲಿಕ ಎಂದು ಕರೆಸಿಕೊಂಡರೂ ಆರಂಭದಲ್ಲಿ ಇದು ಅನಿಯತಕಾಲಿಕವಾಗಿಯೇ ಪ್ರಕಟವಾಗುತ್ತಿತ್ತು. ಡಾ. ಜೀಶಂಪ, ಶ್ರೀ ಎಸ್. ನಂಜುಂಡಯ್ಯ, ಶ್ರೀ ಎಚ್. ಗಂಗಾಧರನ್ ಮುಂತಾದ ಹಿರಿಯರು ಪ್ರಾರಂಭಿಕ ದಿನಗಳಲ್ಲಿ ಇದರ ಸಂಪಾದಕತ್ವವನ್ನು ವಹಿಸಿಕೊಂಡು ಮುನ್ನಡೆಸಿದರು. ಆಗಿನ ಸಂಚಿಕೆಗಳನ್ನು ನೋಡಿದರೆ ಅಲ್ಲಿನ ಲೇಖನಗಳ ಮೌಲಿಕತೆ ಇಂದಿಗೂ ಮತ್ತೆ ಮತ್ತೆ ಅಧ್ಯಯನ ಮಾಡುವಂತಿವೆ. ಮುಂದಿನ ದಿನಗಳಲ್ಲಿ ಇದು ತ್ರೈಮಾಸಿಕವಾಗಿ, ಆನಂತರ ದ್ವೈಮಾಸಿಕವಾಗಿ ನಿಗದಿತ ಸಮಯಕ್ಕೆ ಸರಿಯಾಗಿ ಪ್ರಕಟವಾಗತೊಡಗಿ, ಅದು ಇಂದಿಗೂ ಹಾಗೆಯೇ ಮುಂದುವರಿಯುತ್ತಿದ್ದು ಎಂಟು

ಸಾವಿರಕ್ಕೂ ಹೆಚ್ಚು ಚಂದಾದಾರರನ್ನು ಹೊಂದಿದೆ. ಪ್ರಾಯಃ ಧಾರ್ಮಿಕ ನಿಯತಕಾಲಿಕೆಯೊಂದು ಇಷ್ಟೊಂದು ಪ್ರಸಾರ ಹೊಂದಿರುವುದು ಅಪರೂಪವೇ ಸರಿ.

ಈ ದ್ವೈಮಾಸಿಕಕ್ಕೆ ಒಂದು ನಿರ್ದಿಷ್ಟ ರೂಪ ಮತ್ತು ಸ್ವರೂಪವನ್ನು ಕೊಟ್ಟವರು ಆಗ ಇದರ ಸಂಪಾದಕರಾಗಿದ್ದ ನಾಡಿನ ಹಿರಿಯ ಸಾಹಿತಿಗಳೂ, ಬಹುಮುಖ ಪ್ರತಿಭಾಶಾಲಿಗಳೂ ಆದ ಶ್ರೀ ಕೆ.ಸಿ. ಶಿವಪ್ಪನವರು. ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕರಾಗಿದ್ದ ಅವರಿಗೆ ಆಡಳಿತ ಜವಾಬ್ದಾರಿಗಳ ಒತ್ತಡ ಹೆಚ್ಚಾದ ಕಾರಣಕ್ಕೋ ಏನೋ, 'ಪ್ರಸಾದ'ಕ್ಕಾಗಿ ಪೂರ್ಣಾವಧಿಯನ್ನು ಮೀಸಲಿಡುವ ವ್ಯಕ್ತಿಯೊಬ್ಬರು ಬೇಕು ಎಂದು ಹುಡುಕುತ್ತಿದ್ದಾಗ ಅವರ ಸಂಪರ್ಕ ನನಗುಂಟಾಯಿತು. ಒಮ್ಮೆ ಅವರು "ನೀವೇ ಬಂದುಬಿಡ್ರಿ, ನಿಮ್ಮ ಬರವಣಿಗೆ ಚೆನ್ನಾಗಿದೆ. ನನಗೂ ಒಂದಿಷ್ಟು ಒತ್ತಡ ಕಡಿಮೆಯಾಗುತ್ತೆ" ಎಂದು ಪ್ರೀತಿಪೂರ್ವಕ ಆಹ್ವಾನ ಕೊಟ್ಟರು. ನಾನು ತಕ್ಷಣ ಏನೂ ಪ್ರತಿಕ್ರಿಯಿಸಲಾರದೆ, 'ನೋಡೋಣ, ಸರ್' ಎಂದು ಹೇಳಿ ಬಂದುಬಿಟ್ಟೆ. ಈ ಸುದ್ದಿ ಹೇಗೋ ಗಾಳಿಯಲ್ಲಿ ಹರಿದಾಡಿತು. ಶಿವಪ್ಪನವರ ಶಿಸ್ತಿನ ಸ್ವರೂಪವನ್ನು ಕಂಡಿದ್ದ ಕೆಲವರು, "ನಿಮ್ಮಂಥ ಸ್ವತಂತ್ರ ಪ್ರವೃತ್ತಿಯವರು ಅವರೊಡನೆ ಹೇಗೆ ಕೆಲಸ ಮಾಡುತ್ತೀರಿ" ಎಂದು ನನ್ನೊಳಗೆ ಭಯದ ಬೀಜವನ್ನು ಬಿತ್ತತೊಡಗಿದರು. ಮತ್ತೆ ಕೆಲವರು ಮಠಮಾನ್ಯಗಳ ಜೊತೆ ಅಂತಹ ನಿಕಟ ಸಂಪರ್ಕವನ್ನು ಹೊಂದಿರದ, ಧರ್ಮದ ಬಗ್ಗೆ ಅಷ್ಟು ಗಂಭೀರವಾಗಿ ಚಿಂತಿಸದ ಇವರು ಮಠದಿಂದ ಪ್ರಕಟವಾಗುವ 'ಪ್ರಸಾದ'ದಂತಹ ಧಾರ್ಮಿಕ ಪತ್ರಿಕೆಯನ್ನು ಹೇಗೆ ನಿಭಾಯಿಸಬಲ್ಲರು ಎಂದು ನನ್ನ ಸಾಮರ್ಥ್ಯದ ಬಗ್ಗೆ ಬೆನ್ನ ಹಿಂದೆ ಅಣಕವಾಡಿದ್ದೂ ಉಂಟು. ಈ ಎರಡಕ್ಕೂ ನನ್ನ ಪ್ರತಿಕ್ರಿಯೆ ಕೇವಲ ಒಂದು ಮುಗುಳ್ನಗು ಮಾತ್ರ ಆಗಿತ್ತು. ಏಕೆಂದರೆ ಅದರಾಚೆಗೆ ಇಂತಹವರು ಯಾವ ಪ್ರತಿಕ್ರಿಯೆಗೂ ಅರ್ಹರಾಗಿರಲಿಲ್ಲ. ಅಂತೂ ಕೆಲವು ದಿನಗಳಲ್ಲಿಯೇ ಪತ್ರಿಕೆಯ ಸಹ–ಸಂಪಾದಕನಾಗಿ 'ಪ್ರಸಾದ' ಬಳಗವನ್ನು ಸೇರಿದೆ. ಅನಂತರದ ದಿನಗಳಲ್ಲಿ ಪತ್ರಿಕೆಯ ಸಂಪಾದಕನಾಗುವ ಅನಿವಾರ್ಯತೆಯೂ ಉಂಟಾಯಿತು.

ನಾನು ಕಳೆದ ಸುಮಾರು ಎರಡು ದಶಕಗಳಿಂದ ನಿರಂತರವಾಗಿ ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಿದ್ದೇನೆ. ಉದ್ದಕ್ಕೂ ನನಗೆ ಮಾರ್ಗದರ್ಶನ ನೀಡುತ್ತಾ ಬಂದವರು ಸನ್ಮಾನ್ಯ ಶ್ರೀ ಕೆ.ಸಿ. ಶಿವಪ್ಪನವರು, ಕಾಲಬದ್ಧ ಕ್ರಿಯಾಯೋಜನೆಗೆ, ನಿರ್ಭಿಡೆಯ ಚಿಂತನೆಗೆ ನನಗೆ ನಿಜಕ್ಕೂ ಪ್ರೇರಣೆಯಾದವರು ಅವರು.

ಧಾರ್ಮಿಕ ಕಕ್ಷೆಯಲ್ಲಿ ರೂಪುಗೊಳ್ಳುವ ಇಂತಹ ಒಂದು (ಇಂತಹ ಹಲವಾರು) ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳನ್ನು ಆಯ್ಕೆ ಮಾಡುವುದು ತುಂಬಾ ಜವಾಬ್ದಾರಿಯುತ ವಾದದ್ದು. ಅದು ಅಸಿಧಾರೆಯ ಮೇಲಿನ ನಡಿಗೆಯೇ ಸರಿ. ಧರ್ಮ ಎಂದಾಕ್ಷಣ ಸಮಾಜದ ಶ್ರೀಸಾಮಾನ್ಯರು (ಇದರಲ್ಲಿ ಅಕ್ಷರಸ್ಥರೂ ಇದ್ದಾರೆ!) ಚಿಂತಿಸುವ ಸಾಂಪ್ರದಾಯಿಕ

ಕ್ರಮ ಒಂದು ರೀತಿಯದು. ಅದು ಬಹುಪಾಲು ಸ್ಥಾವರ ಸ್ವರೂಪದ್ದು. ಬದಲಾದ ಬದುಕಿನ ಸಂಕೀರ್ಣ ಓಘದಲ್ಲಿ ಮುಳುಗುವ, ತೇಲುವ, ಅಂದಂದಿನ ದಂದುಗವೇ ಅಪರಿಹಾರ್ಯವಾಗಿರುವ ಆಧುನಿಕ ವಯೋಮಾನದವರ ಮನದ ಸೂಕ್ಷ್ಮತೆ ಮತ್ತೊಂದು ತೆರನಾದದ್ದು. ಸಮಾಜದ ಬಹುಪಾಲು ಜನ ಧಾರ್ಮಿಕ ಆಚಾರಗಳ ಶಾಸ್ತ್ರದ ಚೌಕಟ್ಟನ್ನು ದಾಟಿ ಹೊರಬರಲಾರದೆ, ಅಥವಾ, ಅದೇ ನಿಜವಾದ ಧರ್ಮ ಎಂದು ಭ್ರಮಿಸುತ್ತಾರೆ. ಇದಕ್ಕೆ ಕೆಲವು ಅಪವಾದಗಳೂ ಇದೆ; ಇವರು ಯಾವಾಗಲೂ ಅಲ್ಪಸಂಖ್ಯಾತರೆ! ಆದರೆ ಅಂತಹ ಕೆಲವರನ್ನು 'ಧಾರ್ಮಿಕ ಭಯೋತ್ಪಾದಕರು' ಎನ್ನುವ ದೃಷ್ಟಿಯಲ್ಲಿ ಕಂಡದ್ದೇ ಹೆಚ್ಚು. ಆ ಕಾರಣಕ್ಕಾಗಿಯೇ ಶರಣಧರ್ಮ ಚಲನಶೀಲವಾಗಲೇ ಇಲ್ಲ. ಒಂದಿಷ್ಟು ಸರ್ಕಾರಿ ಸವಲತ್ತುಗಳನ್ನು ಪಡೆಯಲು ಇದನ್ನು ಅನೇಕ ಪಂಗಡಗಳನ್ನಾಗಿರಿಸಿ ಕೊಂಡು ಕೂಡಲಸಂಗನಿಗೆ ಗುಹೇಶ್ವರನಿಗೆ ತಿಲಾಂಜಲಿ ಇಡುವ ಸ್ಥಿತಿ ತಂದುಬಿಟ್ಟಿದ್ದಾರೆ. ಆದರೆ ಆಧುನಿಕರು ಈ ಚೌಕಟ್ಟನ್ನು ಸೀಳಿಕೊಂಡು ಹೊರಜಗತ್ತಿನ ಅನಂತ ಆಕಾಶವನ್ನು, ಹಾಗೆಯೇ ಅನಂತ ವಾರಿಧಿಯನ್ನು ನೋಡುತ್ತಾ, ಇಡೀ ಬದುಕನ್ನು ಅವುಗಳಿಗೆ ಸಂಕೇತವನ್ನಾಗಿಸಿಕೊಂಡು, 'ಇವ ನಮ್ಮವ, ಇದು ನಮ್ಮದು' ಎನ್ನುವುದನ್ನು ಭಾವಕೋಶದಲ್ಲಿ ತುಂಬಿಕೊಂಡು, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಅಪೂರ್ವ ಸಾಧ್ಯತೆಗಳ ಹುಡುಕಾಟದಲ್ಲಿ ತೊಡಗಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಇದರ ಹಿಂದೆ ಆಧುನಿಕ ಕಾಲದ ಸಂಸಾರವೆಂಬ ಹೆಣದ ವಿಕೃತರೂಪವೂ ಅವರನ್ನು ಗಂಭೀರವಾಗಿ ಕಾಡುತ್ತಿರಬಹುದು. ಈ ಎರಡೂ ತಲೆಮಾರುಗಳ ಚಿಂತನೆಗಳನ್ನು 'ಕೂಡಲಸಂಗಮ' ಮಾಡಿಕೊಂಡು ಸಂಚಿಕೆಯನ್ನು ಹೊರತರುವುದು ಒಂದು ರೀತಿಯ ಸವಾಲಿನ ಕೆಲಸವೇ ಸರಿ.

ಆದರೆ ಇದನ್ನು ಏನೂ ಮಾಡುವ ಹಾಗಿರಲಿಲ್ಲ, ಕೆಲವು ಸಂಪ್ರದಾಯವಾದಿಗಳ ಲೇಖನಗಳನ್ನು ಪ್ರಕಟ ಮಾಡದಿದ್ದರೆ ಸಂಪಾದಕನ ವಿರುದ್ಧ ಶೀತಲ ಯುದ್ಧವೂ ಪ್ರಾರಂಭವಾಗುತ್ತಿತ್ತು. ಆದರೆ ಆಧುನಿಕ ಚಿಂತಕರ ಬಹುಪಾಲು ಲೇಖನಗಳು ಜಡವಾಗಿರದೆ ಹೆಚ್ಚು ಚಿಂತನೆಗೆ ಹಚ್ಚುವಂತಿದ್ದವು. ಅವರು ನಮ್ಮ ಸಾಂಪ್ರದಾಯಿಕ ನಂಬಿಕೆಗಳನ್ನು ನಡಾವಳಿಗಳನ್ನು ಆನುಷಂಗಿಕವಾಗಿ ತೆಗೆದುಕೊಂಡೂ, ಸಾಮಾಜಿಕ ನಡಾವಳಿಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತ ಪ್ರಖರವಾದ ಪ್ರಶ್ನೆಗಳನ್ನು ಧಾರ್ಮಿಕರೆನಿಸಿಕೊಂಡವರ ಮುಂದೆ ಇಡುತ್ತಿದ್ದರು. 12ನೇ ಶತಮಾನದಿಂದಲೂ ಇಲ್ಲಿಯ ತನಕ ಸಾಗರದಷ್ಟು ಸಾಹಿತ್ಯವನ್ನು ಸೃಷ್ಟಿಸಿ, ಪ್ರವಚನಗಳನ್ನು ಮಾಡಿ, ವಚನಗಳನ್ನು ಬಾಯಿಪಾಠ ಮಾಡಿ ಉದ್ಧರಿಸಿ ಚಪ್ಪಾಳೆ ಗಿಟ್ಟಿಸಿ, ಭಕ್ತಿಯೆಂಬುದನ್ನು ತೋರುಂಬ ಲಾಭವಾಗಿಸಿಕೊಂಡು ಬದುಕುವ ನಿಮ್ಮ ಅಂತರಂಗ ಮತ್ತು ಬಾಹ್ಯ ನಡವಳಿಕೆಗಳು ಬೇರೆಯವರಿಗಿಂತ ಹೇಗೆ ಭಿನ್ನ? ಬಸವಣ್ಣನಿಗೆ ದೇವಸ್ಥಾನ ಕಟ್ಟಿಸಿ ಅವನನ್ನು ಸ್ಥಾವರಗೊಳಿಸಿ ಅನ್ಯರಿಗೆ ಪ್ರವೇಶ ಕೊಡದ, ನಿಮ್ಮ ಮನಃಸ್ಥಿತಿ ಎಂತದ್ದು? ಬಾಯಾರಿಕೆ

ತಡೆಯಲಾರದೆ ಸಾರ್ವಜನಿಕ ನಲ್ಲಿಗಳಲ್ಲಿ ನೀರು ಕುಡಿದರೆ ನಲ್ಲಿಯನ್ನು ಸಗಣಿಯಿಂದ ಶುದ್ಧ ಮಾಡುವ ನಿಮ್ಮ ಅಮಾನವೀಯತೆಗೆ ಸಮರ್ಥನೆ ಏನು? ಇತ್ಯಾದಿ ಪ್ರಶ್ನೆಗಳ ಸುನಾಮಿಯನ್ನೇ ಸೃಷ್ಟಿಸಿ ಅದಕ್ಕೆ ಮುಖಾಮುಖಿ ಯಾಗುವ ಪ್ರಾಮಾಣಿಕತೆ ತೋರುತ್ತಿದ್ದರು. ಇದು ಸಂಪ್ರದಾಯವಾದಿಗಳಿಗೆ ಅಹಿತ ಎನಿಸಿದರೂ, ಇಂತಹ ಚಿಂತನೆಗಳು ಇಂದು ಅತ್ಯಗತ್ಯವೂ, ಅನಿವಾರ್ಯವೂ ಆಗಿವೆ.

ಒಟ್ಟಿನಲ್ಲಿ ಈ ಅಂಶಗಳನ್ನು ಸಮನ್ವಯ ಮಾಡಿಕೊಂಡು ಪತ್ರಿಕೆಗೆ ಯಾವುದೇ ಕಪ್ಪುಚುಕ್ಕೆ ಬೀಳದಂತೆ 'ಆರು ಮುನಿದು ನಮ್ಮನೇನು ಮಾಡುವರು' ಎಂದುಕೊಂಡು ಆತ್ಮಸಾಕ್ಷಿಯ ಎಚ್ಚರದಲ್ಲಿ ಕರ್ತವ್ಯವನ್ನು ನಿರ್ವಹಿಸಿಕೊಂಡು ಬಂದಿದ್ದೇನೆ. ಇದೆಲ್ಲಕ್ಕೂ ಪ್ರೇರಣೆ ನೀಡಿ ಪ್ರೋತ್ಸಾಹಿಸಿ ಮುನ್ನಡೆಸಿದವರು ನಮ್ಮ ನಡುವಣ ಬಹು ದೊಡ್ಡಶಕ್ತಿಯಾಗಿರುವ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಎನ್ನುವುದನ್ನು ಇಲ್ಲಿ ವಿಶೇಷವಾಗಿ ಹೇಳಲೇಬೇಕು. ಅವರ ದೂರದೃಷ್ಟಿಯ ಚಿಂತನೆಗಳು, ಕ್ರಿಯಾಯೋಜನೆಯ ಸ್ವರೂಪ, ಅದನ್ನು ಆಗು ಮಾಡುವ ಧೀಶಕ್ತಿಗಳ ವಿರಾಟ್ ಸ್ವರೂಪವನ್ನು ನಾನು ಮತ್ತಾವ ಪೀಠಾಧಿಪತಿಗಳಲ್ಲಿಯೂ ಕಂಡಿಲ್ಲ, ಅವರು ನಮ್ಮ ಕಾಲಮಾನದಲ್ಲಿ ಕಂಡಂತಹ ಒಂದು ವಿಶೇಷ ಅದ್ಭುತ.

2023 ಜನವರಿಯಿಂದ ಪತ್ರಿಕೆ ಮಾಸಿಕವಾಗಿ ತಮ್ಮ ಕೈಸೇರಲಿದೆ. ನನ್ನ ಆತ್ಮಬಂಧುವೂ, ಚಿಂತನಶೀಲರೂ ಆದ ಡಾ. ನಂದೀಶ್ ಹಂಚೆಯವರು ಸಂಪಾದಕರಾಗಿ ಅದರ ಜವಾಬ್ದಾರಿಯನ್ನು ಇನ್ನು ಮುಂದೆ ನಿರ್ವಹಿಸುತ್ತಾರೆ. ಕರ್ತೃತ್ವಶಕ್ತಿಯೇ ಮೈವೆತ್ತಂತಿರುವ ಇಂತಹ ಯುವ ಪೀಳಿಗೆಯನ್ನು ನಾನು ಮನಸಾ ಸ್ವಾಗತಿಸುತ್ತೇನೆ. ಹೊಸ ಸಂಪಾದಕ ಮಂಡಳಿ, ಹೊಸ ಸಲಹಾ ಸಮಿತಿ ಪತ್ರಿಕೆಗೆ ಹೊಸ ಆಯಾಮವನ್ನು ಕೊಡುತ್ತದೆ ಎನ್ನುವುದು ನನ್ನ ನಂಬಿಕೆ.

ಇಷ್ಟು ವರ್ಷಗಳೂ ನನ್ನೊಡನೆ ಸಹಕರಿಸಿ ಪತ್ರಿಕೆಯನ್ನು ಆದ್ಯಂತವಾಗಿ ನೋಡಿ ಪ್ರೀತಿಯಿಂದ ಸಿದ್ಧಮಾಡಿಕೊಡುತ್ತಿದ್ದ, ವಿನಯವಂತಿಕೆಯ ಸಾಕಾರರಾದ ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರಿಗೆ, 'ಶಬ್ದಬ್ರಹ್ಮ' ಎನಿಸಿಕೊಂಡ ಶ್ರೀ ಆರ್.ಎಸ್. ಪೂರ್ಣಾನಂದರವರಿಗೆ, ಸಂಚಿಕೆ ಬಗ್ಗೆ ಸದಾ ಎಚ್ಚರಿಸುತ್ತಿದ್ದ ಲೇಖಕ ಶ್ರೀ ನಗರ್ಲೆ ಶಿವಕುಮಾರರವರಿಗೆ, ಆಡಳಿತಾಧಿಕಾರಿ ಶ್ರೀ ವೀರಭದ್ರಸ್ವಾಮಿ ಯವರಿಗೆ, ಪ್ರೀತಿಯಿಂದ ಸಹಕರಿಸಿದ ಕಚೇರಿಯ ಎಲ್ಲ ಸಿಬ್ಬಂದಿ ವರ್ಗದವರಿಗೆ, ಮುಖ್ಯವಾಗಿ ಲೇಖಕರಿಗೆ, ಓದುಗಬಂಧುಗಳಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ವಂದನೆಗಳು.

**ಪ್ರೊ. ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಜಡದಲ್ಲಿ ಜಂಗಮ; ಸಹೃದಯಾವಲೋಕನ

**ಡಾ. ನೀಲಗಿರಿ ಎಂ. ತಳವಾರ್**

**ಪೀಠಿಕೆ**

**ಕ**ನ್ನಡ ನಾಡಿನಲ್ಲಿ ಶಿವಶರಣರು ನಡೆಸಿದ ಅನುಭಾವಿಕ ಕೃಷಿ ಅನುಪಮವಾದುದು ಮತ್ತು ಅಖಂಡವಾದುದಾಗಿದೆ. ಆ ಕೃಷಿಯ ಭಾಗವಾಗಿ ಬಂದ ವಚನದ ಅಮೃತಫಲ ಜಾಗತಿಕ ಸಾಹಿತ್ಯೇತಿಹಾಸದಲ್ಲಿಯೇ ವಿಶಿಷ್ಟವಾದುದಾಗಿದೆ. ಬಸವಾದಿ ಶಿವಶರಣಶರಣೆಯರು ನಡೆಸಿದ ಸಮಾಜೋಧಾರ್ಮಿಕ ಚಳುವಳಿಯ ಮತ್ತೊಂದು ವಿಶಿಷ್ಟತೆ ಏನೆಂದರೆ ಅದು ಸಾಧಿಸಿದ ಕಾಲ, ದೇಶಾತೀತ ಗುಣ. ಹನ್ನೆರಡನೆಯ ಶತಮಾನದಲ್ಲಾದ ಕಲ್ಯಾಣಕ್ರಾಂತಿಯ ನಂತರ ವಚನಕಾರರು ನಾಡಿನ ಬೇರೆ ಬೇರೆ ಭಾಗಗಳಿಗೆ ಚದುರಿಹೋಗುವಂತಾಗಿ ಅವರ ಚಳುವಳಿ ಸತ್ವ ಕಳೆದುಕೊಂಡಂತೆ ತೋರಿತಾದರೂ ಅದರ ಬೇರುಗಳು ಅತ್ಯಂತ ಆಳಕ್ಕೆ ಇಳಿದಿದ್ದರಿಂದ ಅವು ಪುನಃ ಚಿಗುರೊಡೆದು ಬೆಳೆಯಲು ಸಾಧ್ಯವಾದುದನ್ನು ಚರಿತ್ರೆ ಬಹು ಸ್ಪಷ್ಟವಾಗಿಯೇ ಶ್ರುತಪಡಿಸುತ್ತದೆ. ಅವರು ಚದುರಿಹೋದಲೆಲ್ಲ ಮಠಗಳು ಹುಟ್ಟಿಕೊಂಡವು. ಇವುಗಳು ಯಾವುದೇ ವ್ಯಕ್ತಿ ಹಿತಾಸಕ್ತಿಯಿಂದ ಹುಟ್ಟಲಿಲ್ಲ. ಬದಲಾಗಿ ಸಮಾಜದ ಹಿತಾಸಕ್ತಿ ಮತ್ತು ಒತ್ತಾಸೆಯಿಂದ ಹುಟ್ಟಿಕೊಂಡವು. ಹಾಗಾಗಿಯೇ ಶರಣರ ಚಿಂತನೆಗಳ ಪರಂಪರೆ ಅವಿಚ್ಛಿನ್ನವಾಗಿ ಮುಂದುವರಿಯಲು ಸಾಧ್ಯವಾಯಿತು. ಅದು 15, 16, 17ನೇ ಶತಮಾನಗಳನ್ನು ದಾಟಿ 20, 21ನೇ ಶತಮಾನದಲ್ಲೂ ಮುಂದುವರೆದು; ಕಾಲಾತೀತವಾಗಿ ಬೆಳೆಯುತ್ತಿದೆ ಮಾತ್ರವಲ್ಲ; ನೆರೆಯ ಆಂಧ್ರ, ಮಹಾರಾಷ್ಟ್ರ, ತಮಿಳುನಾಡಿನಲ್ಲಿಯೂ ಭಾರತದಾಚೆಗೂ ಕುಡಿ ಚಾಚುತ್ತಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಶಿವಶರಣರ ಆಶಯಗಳನ್ನು ಕೇಂದ್ರವಾಗಿಟ್ಟುಕೊಂಡು ಹುಟ್ಟಿಕೊಂಡ ಮಠಗಳು ಲೆಕ್ಕಕ್ಕೆ ಸಿಗದಷ್ಟಿವೆ. ಇವುಗಳಲ್ಲಿ ಶರಣಚಳುವಳಿಯ ಬಲ ಕುಂದಿದಂತೆ ಕಂಡುಬರುವುದಾದರೂ ನಾಡಿನ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಅವು ಬೀರುತ್ತ ಬಂದ ಸಕಾರಾತ್ಮಕ ಪರಿಣಾಮವನ್ನು ಕಡೆಗಣಿಸುವಂತಿಲ್ಲ. ಮಠಗಳ ಕೇಂದ್ರವಾಗಿ ಬೆಳೆದು ಬಂದ ವಿರಕ್ತ ಸಂಪ್ರದಾಯದಲ್ಲಿ

ಶಿವಶರಣರ ತತ್ವ–ಆದರ್ಶಗಳು ಮೈದುಂಬಿ ಹರಿದುಬಂದುದರ ಫಲವಾಗಿ ನಾಡಿಗೆ ಆಧ್ಯಾತ್ಮಿಕ ನಾಯಕತ್ವ ದೊರೆಯಿತು. ತೋಂಟದ ಸಿದ್ಧಲಿಂಗಯತಿ, ಸ್ವತಂತ್ರ ಸಿದ್ಧಲಿಂಗೇಶ್ವರ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಘನಲಿಂಗದೇವ, ಶರಣಬಸವೇಶ್ವರ, ಮೈಲಾರದ ಬಸವಲಿಂಗ ಶರಣರು, ಕರಸ್ಥಲದ ನಾಗಿದೇವವಾದಿ ಸಹಸ್ರಾರು ಗುರು ವಿರಕ್ತರು ತಮ್ಮ ತಪೋಬಲದಿಂದ, ಜ್ಞಾನಬಲದಿಂದ ನಾಡಿಗೆ ಬೆಳಕಾಗುತ್ತ ಬಂದ ಇತಿಹಾಸ ಭವ್ಯೋಜ್ವಲವಾದದ್ದು ಮತ್ತು ಅವಿಸ್ಮರಣೀಯವಾದದ್ದು. ವಿಜಯನಗರ ಕಾಲದಲ್ಲಿ ಬಂದ ನೂರೊಂದು ವಿರಕ್ತರ ಗುಂಪಿನ ವರ್ಚಸ್ಸಂತೂ ಚಾರಿತ್ರಿಕ ಮಹತ್ವದ್ದಾಗಿದೆ.

ಈ ವಿರಕ್ತ ಜಂಗಮರ ಸಾಮರ್ಥ್ಯಗಳು ಹಲವು. ಅವರು ಮೂಲತಃ ಶಿವಯೋಗ ಸಾಧಕರು. ಶಿವಶರಣರ ವ್ಯಕ್ತಿಕಲ್ಯಾಣ ಮತ್ತು ಲೋಕಕಲ್ಯಾಣ ತತ್ವಕ್ಕೆ ನಿಷ್ಠರಾದವರು. ಹೀಗಾಗಿ ಸಂಬಂಧಿಸಿದ ಆರೋಗ್ಯವಿದ್ಯೆ, ಅಕ್ಷರವಿದ್ಯೆ, ನ್ಯಾಯದಾನ ಪರಿಣತಿ, ಸಮಾಜ ಸಂಘಟನಾ ಕೌಶಲ, ಧಾರ್ಮಿಕ ಸಾಮರಸ್ಯದ ವಿಶಾಲ ಮನಸ್ಥಿತಿಗಳನ್ನು ಅವರು ಸಾಧಿಸಿಕೊಂಡಿರುತ್ತಿದ್ದರು. ಇದರಿಂದ ಅವರಿಗೆ ಹಲವು ವಿಧದಲ್ಲಿ ಸಮಾಜಸೇವೆ ಸಾಧ್ಯವಾಗುವ ಮೂಲಕ; ಸಮಾಜಕ್ಕೆ ತೀರ ಬೇಕಾದವರಾಗಿರುತ್ತಿದ್ದರು. ಇಷ್ಟರ ಮೇಲೆ ಜ್ಞಾನ–ಯೋಗ ಸಾಧನೆಯಿಂದ ಕಷ್ಟದ ಪರಿಸ್ಥಿತಿಗಳನ್ನು ನಿರ್ವಹಿಸುವ ವಿಶೇಷ ಸಾಮರ್ಥ್ಯ ಹೊಂದಿರುತ್ತಿದ್ದರು. ಇದರಿಂದಾಗಿ ಪವಾಡಪುರುಷರೆಂದು ಜನಮಾನಸದಲ್ಲಿ ವಿಶೇಷ ಗೌರವಕ್ಕೆ ಭಾಜನರಾಗುತ್ತಿದ್ದರು. ಜನರು ಅವರ ಮಾತು ಮಾರ್ಗದರ್ಶನದಂತೆ ನಡೆಯುತ್ತಿದ್ದರು ಎಂದರೆ ಅವರು ಆಧ್ಯಾತ್ಮಿಕ ನಾಯಕರಂತೆ ಇರುತ್ತಿದ್ದರು ಎಂದೇ ಅರ್ಥ.

ಪರಿಸ್ಥಿತಿ ಹೀಗಿರುವಾಗ ಮತ್ತೊಂದು ಕಡೆ ಈ ಗುರು ವಿರಕ್ತರ ಜೀವನ ಉಪದೇಶ–ಸಂದೇಶಗಳನ್ನು ಜನಮಾನಸದಲ್ಲಿ ಪ್ರಸಾರ ಮಾಡುವ ಮಣಿಹದಿಂದ ಕವಿಗಳು ಇವರ ಕಥನಗಳನ್ನು ಚಾರಿತ್ರ್ಯ, ಪುರಾಣಗಳ ರೂಪದಲ್ಲಿ ದಾಖಲಿಸುವ ಪ್ರಯತ್ನ ಮಾಡುತ್ತಾ ಬಂದರು. ಶಿವಕವಿ ಹರಿಹರದೇವನಿಂದಲೇ ಈ ಪರಂಪರೆ ಪ್ರಾರಂಭವಾಯಿತು. ತನಗಿಂತ 50–60 ವರ್ಷ ಮೊದಲು ಬಾಳಿ ಬದುಕಿದ ಹನ್ನೆರಡನೇ ಶತಮಾನದ ಕೆಲವರಾದರೂ ಶಿವಶರಣ ಶರಣೆಯರನ್ನು ಕಂಡ ಹಿರಿಯರು ಹರಿಹರನ ಹಿರಿಯ ಸಮಕಾಲೀನ ರಾಗಿದ್ದರು. ಅವರ ಜೀವನ ಕಥನವನ್ನು ಪ್ರಥಮ ಮಾಹಿತಿಯಾಗಿ ಪಡೆಯುವ ಸುವರ್ಣಾವಕಾಶ ಹರಿಹರನಿಗೆ ಇತ್ತು. ಹಾಗಾಗಿಯೇ ಅವನು ಬಹುಪಾಲು ಶಿವಶರಣ–ಶರಣೆಯರ ಜೀವನವನ್ನು ರಗಳೆಯಲ್ಲಿ ಕಂಡರಿಸುವ ಪ್ರಯತ್ನ ಮಾಡಿದ ಮೊದಲ ಪುಣ್ಯಪುರುಷನಾದ.

**ಹಿನ್ನೆಲೆ ಪ್ರೇರಣೆ**

ಭೀಮಕವಿ, ಸಿಂಗಿರಾಜ, ವಿರೂಪಾಕ್ಷಪಂಡಿತ, ಗುಬ್ಬಿಯ ಮಲ್ಲಣಾರ್ಯ, ಲಕ್ಕಣ್ಣದಂಡೇಶ ಮೊದಲಾದ ಕವಿಗಳು, ಶೂನ್ಯಸಂಪಾದನಕಾರರು ಶರಣರ ಜೀವನಚರಿತ್ರೆ

ನಿರೂಪಕರಾಗಿ ಗಮನಾರ್ಹರಾಗಿದ್ದಾರೆ. ಕನ್ನಡ ಸಾಹಿತ್ಯದ ಸೀಮಾಪುರುಷನೆನಿಸಿಕೊಂಡ ಷಡಕ್ಷರದೇವ ಕೂಡ 'ವೃಷಭೇಂದ್ರ ವಿಜಯ'ವೆಂಬ ಶರಣಜೀವನ ಮಹಾಕಾವ್ಯವನ್ನು ಆಧುನಿಕತೆಗೆ ಸಮೀಪದಲ್ಲಿ ರಚಿಸಿ, ಪ್ರಾಚೀನಕ್ಕೂ ಆಧುನಿಕತೆಗೂ ಕೊಂಡಿಯಾಗಿರುವನು.

ಆಧುನಿಕ ಸಂದರ್ಭದಲ್ಲೂ ಶರಣರ ಜೀವನ ಮತ್ತು ಅವರ ವಚನ ಸಾಹಿತ್ಯವನ್ನು ಪ್ರಸಾರ ಮಾಡುವ ಪ್ರಯತ್ನಗಳು ವ್ಯಾಪಕವಾಗಿಯೇ ನಡೆದವು. ಫ.ಗು. ಹಳಕಟ್ಟಿ, ಶಿ.ಶಿ. ಬಸವನಾಳ, ಎಂ.ಆರ್.ಶ್ರೀ, ರಂಗನಾಥ ದಿವಾಕರ, ಎಸ್.ಸಿ. ನಂದಿಮಠ, ಸಂ.ಶಿ. ಭೂಸನೂರುಮಠ, ಸಿದ್ದಯ್ಯ ಪುರಾಣಿಕ ಅವರ ಸಂಪಾದನಾ ಕಾರ್ಯ ಮತ್ತು ಬರಹಗಳು ಈ ನಿಟ್ಟಿನಲ್ಲಿ ಗಮನಾರ್ಹವಾದವುಗಳಾಗಿವೆ. ಆಧುನಿಕ ಕನ್ನಡ ಸಾಹಿತ್ಯದ ಅತ್ಯಂತ ಜನಪ್ರಿಯ ಸೃಜನಶೀಲ ಪ್ರಕಾರವಾದ ಕಾದಂಬರಿ ಮಾಧ್ಯಮದಲ್ಲಿ ಶಿವಶರಣರ ಶರಣೆಯರ ದೈವೀಜೀವನವನ್ನು ಅತ್ಯಂತ ವ್ಯಾಪಕವಾದ ನೆಲೆಯಲ್ಲಿ ಪ್ರಕಟ ಮಾಡಿದ ಶ್ರೇಯಸ್ಸು ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರಿಗೆ ಸಲ್ಲಬೇಕು. ಹನ್ನೆರಡನೇ ಶತಮಾನದ ಪ್ರಮುಖ ಶಿವಶರಣ ಶರಣೆಯರಲ್ಲದೆ ಅನಂತರ ಬಂದ ಗುರು ವಿರಕ್ತರನ್ನು ಕುರಿತು ಕೂಡ ಅವರು ಕಾದಂಬರಿ ಬರೆದಿದ್ದಾರೆ. ಸೃಷ್ಟಿಯ ಆದಿ, ಮಾನವ ಮಹಾದೇವ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ಶಿವಯೋಗ, ಕಾಯಕ, ದಾಸೋಹ, ಸಮಾನತೆ ಈ ಮೊದಲಾದ ಶರಣ ತತ್ವಜ್ಞಾನವನ್ನು ಅರ್ಥೈಸಿ ಅರಗಿಸಿಕೊಳ್ಳಲಾರದೆ; ಯಾವುದೇ ಶರಣ ಶರಣೆಯರ ಜೀವನಕಥನವನ್ನು ನಿರೂಪಿಸುವುದು ಸಾಧ್ಯವಾಗುವುದಿಲ್ಲ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಈ ದರ್ಶನವನ್ನು ತಮ್ಮ ಬರವಣಿಗೆಯ ಪೂರ್ವಾರ್ಧದಲ್ಲಿ ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಆಳ ಮತ್ತು ವ್ಯಾಪಕವಾಗಿ ಅಧ್ಯಯನ, ಮನನ ಮಾಡಿಕೊಂಡಿದ್ದಾರೆ. ಹಾಗಾಗಿಯೇ ಅವರಿಗೆ ಅಲ್ಲಮ, ಅಕ್ಕಮಹಾದೇವಿ, ಬಸವೇಶ್ವರ ಮೊದಲಾದ ಶರಣ–ಶರಣೆಯರ ಜೀವನವನ್ನು ಆಪ್ತವಾಗಿ ಕಟ್ಟಿಕೊಡಲು ಸಾಧ್ಯವಾಗಿದೆ. ಜೊತೆಗೆ ವಚನಸಾಹಿತ್ಯ ಮತ್ತು ಶರಣರ ಅನುಭಾವಸಾಹಿತ್ಯದಲ್ಲಿ ಅವರು ನಡೆಸಿದ ಸಂಶೋಧನೆ; ಪಡೆದ ಅನುಭವ ಸಿದ್ಧಿ–ಅನುಷ್ಠಾನಗಳ ಕಾರಣದಿಂದಲೂ ಈ ಬಗೆಯ ರಚನೆ ಸುಲಭಸಾಧ್ಯ ಮತ್ತು ಯಶಸ್ವಿಯಾಗಲು ಪ್ರೇರಕಶಕ್ತಿಯಾಗಿದೆ.

ಅಲ್ಲಮಪ್ರಭು (ಪರಿಪೂರ್ಣದೆಡೆಗೆ) ಅಕ್ಕಮಹಾದೇವಿ (ಕದಳಿಯ ಕರ್ಪೂರ) ನಿಜಗುಣ ಶಿವಯೋಗಿ (ಜ್ಯೋತಿ ಬೆಳಗುತಿದೆ) ಬಸವೇಶ್ವರ (ಕರ್ತಾರನ ಕಮ್ಮಟ) ಸಿದ್ಧರಾಮೇಶ್ವರ (ನೆರಳಾಚೆಯ ಬೆಳಗು) ಚೆನ್ನಬಸವಣ್ಣ (ಅವಿರಳಜ್ಞಾನಿ) ಜೇವರ್ಗಿಯ ಷಣ್ಮುಖ ಶಿವಯೋಗಿ (ಜಡದಲ್ಲಿ ಜಂಗಮ) ಹೀಗೆ ಶರಣ ಶರಣೆಯರ ಜೀವನವನ್ನು ಒಂದರಮೇಲೊಂದರಂತೆ ಬರೆಯುವ ಮೂಲಕ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಶಿವಕವಿ ಹರಿಹರನನ್ನು ನೆನಪಿಸಿದ್ದಾರೆ. ಈ ಅರ್ಥದಲ್ಲಿ ಅವರನ್ನು ಅಭಿನವ ಹರಿಹರ ಎಂದು ಕರೆದರೆ ಅತಿಶಯೋಕ್ತಿಯೇನೂ ಆಗುವುದಿಲ್ಲ.

## ಕಾದಂಬರಿಯ ವಸ್ತುವಿವೇಚನೆ

'ಜಡದಲ್ಲಿ ಜಂಗಮ' ಕಾದಂಬರಿಯ ವಸ್ತು ಹದಿನೇಳನೆಯ ಶತಮಾನದ ಕಲಬುರಗಿ ಜಿಲ್ಲೆಯ ಜೇವರ್ಗಿಯ ಷಣ್ಮುಖ ಶಿವಯೋಗಿಗಳ ದೈವೀಜೀವನದ ಕಥನವಾಗಿದೆ. ಷಣ್ಮುಖ ಶಿವಯೋಗಿಗಳು ಹನ್ನೆರಡನೇ ಶತಮಾನದ ಶಿವಶರಣರು ಹೊತ್ತಿಸಿದ ಸಾಮಾಜಿಕ–ಧಾರ್ಮಿಕ ಕ್ರಾಂತಿಯ ಬೆಳಕಾಗಿ ಬಾಳಿದವರು. ಅದರ ಪ್ರಸಾರಕ್ಕಾಗಿ ತಮ್ಮ ಜೀವನ ಮುಡುಪಾಗಿಟ್ಟಿದ್ದವರು. ಅವರ ವಿಶೇಷತೆಯೆಂದರೆ–'ಅಖಂಡೇಶ್ವರ' ಎಂಬ ಅಂಕಿತದಲ್ಲಿ ಅವರು ಹನ್ನೆರಡನೇ ಶತಮಾನದ ಶರಣರು ಬರೆದ ವಚನಗಳ ಲಯ ಮತ್ತು ಆಶಯಗಳಿಗೆ ಅನುರೂಪವಾದ ರೀತಿಯಲ್ಲಿ ವಚನಗಳನ್ನು ಬರೆದಿರುವುದು.

ಡಾ. ತಿಪ್ಪೇರುದ್ರಸ್ವಾಮಿ ಅವರು ಈ ಕೃತಿಯನ್ನು ರಚಿಸಲು ಪ್ರೇರೇಪಿಸಿದವರು – ಜೇವರ್ಗಿಯ ಶ್ರೀ ಷಣ್ಮುಖ ಶಿವಯೋಗೀಶ್ವರ ಮಠಾಧ್ಯಕ್ಷರಾದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು. ಶಿವಶರಣರನ್ನು ಕುರಿತು ತಿಪ್ಪೇರುದ್ರಸ್ವಾಮಿಯವರು ರಚಿಸಿದ ಕಾದಂಬರಿಗಳನ್ನು ಓದಿ ಮೆಚ್ಚಿಕೊಂಡಿದ್ದ ಶ್ರೀಗಳು ಅವರಿಂದ ಷಣ್ಮುಖ ಶಿವಯೋಗಿಗಳ ದೈವೀಜೀವನ ಕಥನವನ್ನು ಬರೆಸಬೇಕೆಂಬ ಸಂಕಲ್ಪ ಮಾಡಿದ್ದೇ ಒಂದು ಅಮೃತಘಳಿಗೆ. ಹೀಗಾಗಿ ಹಲವು ಅಡೆತಡೆಗಳ ನಡುವೆಯೂ ಈ ಕೃತಿ ರೂಪಗೊಳ್ಳಲು ಸಾಧ್ಯವಾಯಿತು. ಇದರ ಮೊದಲ ಮುದ್ರಣ ಬಂದದ್ದು – 1982ರಲ್ಲಿ ಎರಡನೇ ಮುದ್ರಣ ಬಂದಿದ್ದು 1999, ಮೂರನೇ ಮುದ್ರಣ 2020ರಲ್ಲಿ ಬಂದಿದೆ.

ವಿಭೂತಿ, ಅನುಭೂತಿ, ಸಂಭೂತಿ ಎಂಬ ಮೂರು ದಳಗಳ ಈ ಕೃತಿ ರಚನೆಗೊಂಡಿದೆ. ವಿಭೂತಿ ಭಾಗದಲ್ಲಿ ಜೇವರಿಗೆಯಲ್ಲಿ ಹುಟ್ಟಿಕೊಂಡ ಅಖಂಡೇಶ್ವರ ಮಠ, ಮೂಲಚೇತನ ಅಖಂಡೇಶ್ವರ ಶ್ರೀಗಳ ಯೋಗಜೀವನ ಮತ್ತು ಅಲ್ಲಿಯ ಪ್ರಾಕೃತಿಕ ಪರಿಸರದ ವಿವರಣೆಗಳಿವೆ. ಒಬ್ಬ ಶಿವಯೋಗಿಯ ಆಧ್ಯಾತ್ಮಿಕ ಸಾಧನೆಯ ಬಲದಿಂದ; ತಪಃಪ್ರಭಾವದಿಂದ ಶೂನ್ಯ ಪರಿಸರದಲ್ಲಿ ಸಣ್ಣ ಆಶ್ರಮವೊಂದು ಹೇಗೆ ನಾಲ್ಕು ಜನ ಶ್ರದ್ಧಾವಂತರಾದ ಭಕ್ತರ ಉತ್ಸಾಹದಿಂದ ಹಂತಹಂತವಾಗಿ, ಮಠವಾಗಿ ಶ್ರದ್ಧಾಕೇಂದ್ರವಾಗಿ, ಅಕ್ಷರ, ಅನ್ನ, ಜ್ಞಾನ, ಅನುಭಾವ ದಾಸೋಹದ ಚಟುವಟಿಕೆಯಿಂದ ಒಂದು ಹತ್ತಾಗಿ, ಹತ್ತು ನೂರಾಗಿ, ನೂರು ಸಾವಿರವಾಗಿ ಬೆಳೆಯುವಂತೆ ಮಠ ಬೆಳೆದ ಬಗೆಯನ್ನು ಚಿತ್ರಿಸಲಾಗಿದೆ.

ಕಾದಂಬರಿಕಾರರೆ ಹೇಳುವಂತೆ–ಷಣ್ಮುಖ ಶಿವಯೋಗಿಗಳು ಬದುಕಿದ್ದ "ಪರಿಸರವೇ ಬೇರೆ; 17ನೇ ಶತಮಾನ. ಈ ವೇಳೆಗೆ ವೀರಶೈವ, ವ್ಯವಸ್ಥಿತವಾದ ಕಟ್ಟುಪಾಡಿಗೆ ಒಳಗಾಗಿ, ಸಂಪ್ರದಾಯಗಳನ್ನು ಸೃಷ್ಟಿಸಿಕೊಂಡು ಜಡವಾಗಿತ್ತು. ಮೂಲತಃ ಇವರದು ಬಸವಾದಿ ಶರಣರ ಕ್ರಾಂತಿಕಾರಕ ಗುಣವಾದರೂ ಒಂದು ಮಠಕ್ಕೆ ಸ್ವಾಮಿಯಾಗಿ ಆ

ವ್ಯವಸ್ಥೆಯ ಭಾರಕ್ಕೆ ಹೆಗಲು ಕೊಡಬೇಕಾಯಿತು. ಜಡದಲ್ಲಿದ್ದು ಜಂಗಮತ್ವವನ್ನು ಸಾಧಿಸುತ್ತ, ಜಡವ್ಯವಸ್ಥೆಗೆ ಚಲನಶೀಲತೆಯ ಚೈತನ್ಯವನ್ನೀಯುತ್ತ ಈ ಎರಡನ್ನೂ ಇವರು ನಿರ್ವಹಿಸಿದ ಸಾಹಸದ ಕಥೆಯನ್ನು ಇಲ್ಲಿ" (ಮೊದಲ ಮಾತು, ಪು.7) ನಿರೂಪಿಸಲಾಗಿದೆ.

ಷಣ್ಮುಖ ಶಿವಯೋಗಿಗಳನ್ನು ರೂಪಿಸಿದ ಅಖಂಡೇಶ್ವರ ಶಿವಯೋಗಿಗಳ ದೈವೀಕ ವ್ಯಕ್ತಿತ್ವ ಮತ್ತು ಕರ್ತೃತ್ವಶಕ್ತಿಯನ್ನು ಕಾದಂಬರಿಯ ಪ್ರಾರಂಭದ ಭಾಗದಲ್ಲಿ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. "ಪುರಾಣದಲ್ಲಿ, ಪ್ರವಚನದಲ್ಲಿ ಯಾವ ತತ್ವಗಳನ್ನು ಹೇಳಿಕೊಡುತ್ತಿದ್ದರೋ; ಅವನ್ನು ನಿಷ್ಠೆಯಿಂದ ಆಚರಣೆಗೆ ತಂದ ಅವರ ಜೀವನ ತುಂಬ ಗಾಢವಾದ ಪ್ರಭಾವವನ್ನು ಭಕ್ತರ ಮೇಲೆ ಬೀರುತ್ತಿತ್ತು. ಅವರ ಹೆಸರೆತ್ತಿದರೆ ಜನ ಗೌರವದಿಂದ ತಲೆಬಾಗುತ್ತಿದ್ದರು" (ಪು. 27). ಹಾಗಾಗಿಯೇ ಅವರು ಅಲ್ಲಿಯೇ ಪ್ರಮುಖ ರೈತರು, ವ್ಯಾಪಾರಿಗಳು ಸ್ವಯಂಪ್ರೇರಣೆಯಿಂದ ಮಠವೊಂದನ್ನು ನಿರ್ಮಿಸಲು ಮುಂದಾಗುತ್ತಾರೆ ಮತ್ತು ಈ ಪ್ರಸ್ತಾಪವನ್ನು ಅಖಂಡೇಶ್ವರ ಗುರುಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ. ಆಗ ಅವರ ಪ್ರತಿಕ್ರಿಯೆ ಬೇರೆಯೇ ಇರುತ್ತದೆ. "ಸನ್ಯಾಸಿಗೆ ಇದಕ್ಕಿಂತ ಹೆಚ್ಚು ಇರಲೂಬಾರದು" ಎಂದು ನಿರಾಕರಿಸುತ್ತಾರೆ. ಆದರೆ ಭಕ್ತರ ಉತ್ಸಾಹ ನಿಲ್ಲುವುದಿಲ್ಲ. ಮಠ ಕಟ್ಟಲು ಅನುಮತಿಗಾಗಿ ಆಗ್ರಹಿಸುತ್ತಾರೆ. "ಕಲ್ಲಿನಿಂದ ಮಠ ಆಗುವುದಿಲ್ಲ ಚಿದಾನಂದಪ್ಪ; ಮಠ ಆಗುವುದು ನಮ್ಮ ಹೃದಯದಿಂದ. ಉದ್ದ ಅಗಲಗಳಿಂದ ಮಠ ದೊಡ್ಡದಾಗುವುದಿಲ್ಲ; ಅದು ನಮ್ಮ ಮನಸ್ಸಿನ ಹರಹಿನಿಂದ ದೊಡ್ಡದಾಗುತ್ತದೆ. ಎತ್ತರವಾದ ಶಿಖರ ಇಟ್ಟ ಮಾತ್ರಕ್ಕೆ ಬೃಹನ್ಮಠ ಆಗುತ್ತದೆಯೇ? ಎಲ್ಲಿ ವಿಶಾಲ ಹೃದಯ, ದೊಡ್ಡ ಮನಸ್ಸು, ಉನ್ನತವಾದ ನಡೆ, ಮುಗಿಲೆತ್ತರದ ಔದಾರ್ಯ ಇರುತ್ತದೋ, ಅದು ಒಂದು ಗುಡಿಸಿಲಾದರೂ ಅದೇ ನಿಜವಾದ ಮಠ ಎನಿಸಿಕೊಳ್ಳುತ್ತದೆ" (ಪು. 28). ಅಖಂಡೇಶ್ವರ ಶ್ರೀಗಳ ಈ ಮಾತಿನಲ್ಲಿ ನಿಜವಾದ ಮಠದ ಸ್ವರೂಪ, ಅದರ ಅಂತಃಸತ್ವ, ಗುರುಗಳು ಮತ್ತು ಭಕ್ತರು ಹೊಂದಿರಬೇಕಾದ ಮನಸ್ಥಿತಿ ಮತ್ತು ಅವರ ಸಾಧನೆಯ ಮೇಲೆ ಮಠದ ಅಸ್ತಿಭಾರ ನಿಂತಿರುತ್ತದೆ ಎಂಬ ಮಾತುಗಳಲ್ಲಿ ಒಂದು ಮಠದ ನಿರ್ಮಾಣದ ಹಿಂದಿರುವ ತಾತ್ವಿಕತೆಯನ್ನು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಅತ್ಯಂತ ಮಾರ್ಮಿಕವಾಗಿ ಮನನೀಯವಾಗಿ ವಿವರಿಸಿದ್ದಾರೆ.

ಅಖಂಡೇಶ್ವರರ ಉತ್ತರಾಧಿಕಾರಿಯಾಗಿ ಷಣ್ಮುಖ ಶಿವಯೋಗಿಗಳು ನೇಮಿಸಲ್ಪಡುತ್ತಾರೆ. ಹೀಗೆ ಉತ್ತರಾಧಿಕಾರಿಯಾಗುವವರು ಹೊಂದಿರಬೇಕಾದ ವಿದ್ಯೆ, ಗಮಕ, ಪುರಾಣಪ್ರವಚನಕಲೆ, ಶಿವಯೋಗಸಾಧನೆ, ಜನರೊಂದಿಗೆ ಬೆರೆಯುವ ಗುಣ, ಅವರ ಕಷ್ಟಸುಖಗಳಿಗೆ ಸ್ಪಂದಿಸುವ ಗುಣ, ಶುದ್ಧಚಾರಿತ್ರ್ಯ ನೇಮ, ವ್ರತ, ನಿಷ್ಠೆ, ಗುರುಭಕ್ತಿ – ಇತ್ಯಾದಿಗಳನ್ನು ತಿಪ್ಪೇರುದ್ರಸ್ವಾಮಿಯವರು ಹಂತ ಹಂತವಾಗಿ ಬಾಲಕ, ಯುವಕ ಷಣ್ಮುಖಸ್ವಾಮಿಯ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಮಠದ ಉತ್ತರಾಧಿಕಾರಿಗೆ ಗುರುಗಳು ಷಟ್‌ಚಕ್ರ ನಿರೂಪಣಾ, ಹಠಯೋಗ ಪ್ರದೀಪಿಕೆ, ಪ್ರಭುಲಿಂಗಲೀಲೆಯಂಥ ಗ್ರಂಥಗಳ

ಅಧ್ಯಯನ ಮನನ ಮಾಡಿಸುತ್ತಿದ್ದರು ಎಂಬ ವಿವರಗಳು ಸೂಕ್ತವಾಗಿ; ಪ್ರಾಸಂಗಿಕವಾಗಿ ಕಾದಂಬರಿಯಲ್ಲಿ ಹೆಣಿಗೆಗೊಂಡಿವೆ. ಪತಂಜಲಿಯ ಯೋಗಸೂತ್ರದ ಪ್ರಸ್ತಾಪ; ಷಟ್‌ಚಕ್ರಗಳ ವಿವರ; ಆ ಮೂಲಕ ಯೋಗಸಾಧನೆ ಕುರಿತು ಗುರು–ಶಿಷ್ಯರು ನಡೆಸುವ ಸಂವಾದಗಳು ಕಾದಂಬರಿಯ ಒಟ್ಟು ಆಶಯದ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿ ವಿನ್ಯಾಸಗೊಂಡಿವೆ. ಆತ್ಮತತ್ವ ವಿಚಾರ, ಇಷ್ಟಲಿಂಗ ಉಪಾಸನೆ, ಮಂತ್ರಶಕ್ತಿ, ಶಿವಶರಣರ ವಚನಗಳ ಬಗೆಗೂ ಇಲ್ಲಿ ಚರ್ಚೆ; ಚಿಂತನೆ ನಡೆಸಲಾಗಿದೆ.

ಷಣ್ಮುಖ ಶಿವಯೋಗಿ ಸಾಧನೆ, ವಚನಗಳ ಅಧ್ಯಯನ ಮಾಡುತ್ತ ವಚನಗಳನ್ನು ರಚಿಸುವ ಹಂತಕ್ಕೆ ಬೆಳೆದುದನ್ನು; ಉತ್ತರಾಧಿಕಾರಿಗೆ ನಡೆಸುವ ಪಟ್ಟಾಧಿಕಾರ ವಿಧಿಯನ್ನು; ಷಣ್ಮುಖನು ಶಿವಯೋಗಿಯಾಗಿ ಬೆಳೆದ ರೀತಿಯನ್ನು ಸಾಧ್ಯಂತವಾಗಿ ಇಲ್ಲಿ ನಿರೂಪಿಸಲಾಗಿದೆ. "ಬೆಳಗ್ಗೆ ಮತ್ತು ರಾತ್ರಿ ದೀರ್ಘಕಾಲ ಇಷ್ಟಲಿಂಗ ಪೂಜೆ, ಇಷ್ಟಲಿಂಗದ ಕನ್ನಡಿಯ ಮೂಲಕ ತನ್ನ ಅಂತರಂಗದ ಆವಿಷ್ಕಾರ, ಯೋಗಶಕ್ತಿಗಳ ಪರಿಷ್ಕಾರ, ಪ್ರಾಣಲಿಂಗದ ಸಾಕ್ಷಾತ್ಕಾರ ನಡೆಯುತ್ತಿತ್ತು. ಭಾವಲಿಂಗದ ಅನುಭವದಲ್ಲಿ ನಿಂತು ಇವೆಲ್ಲವನ್ನು ಒಳಗೊಳ್ಳುತ್ತಿತ್ತು. ಮಧ್ಯಾಹ್ನವೆಲ್ಲ ಅಧ್ಯಯನ, ಸಂಜೆ ಸಂಚಾರ ಜೊತೆಗೆ ಭಕ್ತರಿಗೆ ದರ್ಶನ" – ಎಂಬ ವಿವರದಲ್ಲಿ ಜಂಗಮರೊಬ್ಬರ ದಿನಚರಿಯನ್ನು ತಿಪ್ಪೇರುದ್ರಸ್ವಾಮಿ ಯವರು ಕೊಟ್ಟಿರುವುದು ಕಂಡುಬರುತ್ತದೆ.

ಎರಡನೆಯದಾದ ಅನುಭೂತಿ ಅಧ್ಯಾಯದಲ್ಲಿ ಷಣ್ಮುಖ ಶಿವಯೋಗಿಗಳು ಪರಿವ್ರಾಜಕರಾಗಿ ನಾಡಿನಲ್ಲಿ ಆಧ್ಯಾತ್ಮಿಕ ಸಂಚಾರ ನಡೆಸಿದ ವಿವರಗಳು ಚಿತ್ರವತ್ತಾಗಿ ನಿರೂಪಿಸಲ್ಪಟ್ಟಿವೆ. ಒಂದು ದಿನ ಕಳೆದ ಮೇಲೆ ಸಿಕ್ಕ ಊರೊಂದರ ಹಿರಿಯರು ತಮ್ಮ ಮನೆಯಲ್ಲಿ ಉಳಿದುಕೊಳ್ಳಲು ಶಿವಯೋಗಿಗಳನ್ನು ಆಮಂತ್ರಿಸುತ್ತಾರೆ– ಆಗ ಅವರು"ಇಲ್ಲಾ ಗೌಡ್ರೇ ಹಾಗೆ ಆಹ್ವಾನಗಳನ್ನು ಒಪ್ಪಿಕೊಳ್ಳುತ್ತ ಸುಖಭೋಗಗಳಿಗೆ ಒಳಗಾಗುವುದು ಪರಿವ್ರಾಜಕ ವ್ರತಕ್ಕೆ ಹೊರತಾದುದು. ಒಂದೆರಡು ಮನೆಯಲ್ಲಿ ಕಂತೆಭಿಕ್ಷೆ, ಶಯನಕ್ಕೆ ಊರ ಮುಂದಿನ ದೇವಾಲಯ" (ಪು. 131) ಎನ್ನುವಲ್ಲಿ ಪರಿವ್ರಾಜಕನ ಸಾಧನೆಯ ನಿಯಮಗಳು ನಿರೂಪಿಸಲ್ಪಟ್ಟಿವೆ.

ಸಂಚಾರದ ಹಿಂದಿನ ರಾತ್ರಿ ಗುರುಗಳಾದ ಅಖಂಡೇಶ್ವರರು ಷಣ್ಮುಖ ಶ್ರೀಗಳಿಗೆ ಸಂಚಾರದ ಆಗು–ಹೋಗುಗಳನ್ನು, ನಿಯಮಗಳನ್ನು ವಿವರಿಸಿರುತ್ತಾರೆ. "ನಿನ್ನ ಪ್ರಯಾಣದಲ್ಲಿ ಅನೇಕ ರೀತಿಯ ಅನುಭವಗಳು ಎದುರಾಗುತ್ತವೆ; ಕೆಲವು ಕಡೆ ಅನಿರೀಕ್ಷಿತ ಆಹ್ವಾನ ಬರಬಹುದು; ಇನ್ನು ಕೆಲವು ಕಡೆ ನೀನೇ ಹೋಗಿ ಕಂತೆಭಿಕ್ಷೆ ಮಾಡಬೇಕಾಗಬಹುದು. ಒಮ್ಮೊಮ್ಮೆ ನೀನು ಬೇಡಿದರೂ ಭಿಕ್ಷೆ ಸಿಗದೇ ಉಪವಾಸವೇ ಇರಬೇಕಾಗಬಹುದು. ಎಲ್ಲವನ್ನು ಸಮಚಿತ್ತದಿಂದ ಭಾವಿಸು" (ಪು. 132) ಎಂಬ ಗುರುಗಳ ಅನುಭವವಾಣಿ ಶ್ರೀಗಳಿಗೆ ದಾರಿದೀಪವಾಗುತ್ತದೆ.

ಸಂಚಾರದ ಈ ಅವಧಿಯಲ್ಲಿ ಷಣ್ಮುಖ ಶಿವಯೋಗಿಗಳು ಜನ ಸೇರಿದಾಗ, ಅಥವಾ ರಾತ್ರಿ ಉಳಿದುಕೊಂಡ ಊರಲ್ಲಿ ಬಸವತತ್ವ ಪ್ರಸಾರ ಮಾಡುವ ಕಾಯಕವನ್ನು ಅಂದರೆ ಶರಣರ ವಚನಗಳನ್ನು, ಜೀವನ, ಸಂದೇಶಗಳನ್ನು ಪ್ರಸಾರ ಮಾಡುತ್ತಿದ್ದರು. ಅವರ ಪ್ರಸನ್ನ–ಪ್ರಸಾದವಾಣಿಯಿಂದ ಜನ ಮತ್ತಷ್ಟು ಆಕರ್ಷಿತರಾಗುತ್ತಿದ್ದರು. ಕಲಬುರಗಿ ಪ್ರಾಂತ್ಯದಲ್ಲಿ ಮುಸ್ಲಿಂ ಸಮುದಾಯದವರೂ ಅಧಿಕವಾಗಿದ್ದುದರಿಂದ ಧಾರ್ಮಿಕ ಸಾಮರಸ್ಯದ ವಿಚಾರ ಪ್ರಚಾರವಾಗುವುದು ಅಗತ್ಯವಿತ್ತು. ಷಣ್ಮುಖ ಶಿವಯೋಗಿಗಳು ಪ್ರಸಂಗ ಬಂದಾಗೆಲ್ಲ ಈ ಸಮುದಾಯದವರೊಂದಿಗೂ ಯಾವುದೇ ಭೇದ ಮಾಡದೆ ಆತ್ಮೀಯತೆಯಿಂದ ಬೆರೆತು ಭಾವೈಕ್ಯತೆಯನ್ನು ಪೋಷಿಸುತ್ತಿದ್ದರು.

ಈ ಸಂಚಾರದಲ್ಲಿ ಕಾಡು ಮೇಡು ದಾಟಿ ಹೋಗಬೇಕಾಗಿತ್ತು. ಎಷ್ಟೋ ವೇಳೆ ಕಾಡಲ್ಲೇ ಉಳಿಯಬೇಕಾಗಿತ್ತು. ವನ್ಯಮೃಗಗಳು ಇವರಿಗೆ ಏನೂ ತೊಂದರೆ ಕೊಡದೆ ಇದ್ದುದನ್ನು ತಿಳಿದು ಜನ ಬೆರಗುಗೊಳ್ಳುತ್ತಿದ್ದರು. ಈ ಪ್ರಸಂಗಗಳೇ ಮುಂದೆ ಪವಾಡಗಳಾಗಿ ಬೆಳೆಯುತ್ತಿದ್ದವು. ಆದರೆ ಪವಾಡಗಳ ಬಗ್ಗೆ ಶ್ರೀಗಳ ವಿಚಾರವೇ ಬೇರೆಯಾಗಿತ್ತು – "ಪವಾಡಗಳಂತಹ ಘಟನೆಗಳು ಘಟಿಸಬಹುದು. ಆದರೆ ಅದರಿಂದ ಸಾಧಕನ ಯೋಗ್ಯತೆ ಹೆಚ್ಚುವುದಿಲ್ಲ. ಶರಣರು ಅದನ್ನು ಯೋಗ್ಯತೆಯ ಒರೆಗಲ್ಲೆಂದು ನಂಬಿದವರಲ್ಲ" – ಎಂಬುದು ಅವರಿಗೆ ಮನವರಿಕೆಯಾಗಿತ್ತು ಎಂಬುದು ಗಮನಾರ್ಹವಾದ ಸಂಗತಿ. ಜಾತಿ ತಾರತಮ್ಯ, ಅಸ್ಪೃಶ್ಯತೆ ಭಾರತೀಯ ಸಮಾಜಕ್ಕೆ ಅಂಟಿಕೊಂಡ ಬಹುದೊಡ್ಡ ಕಳಂಕ. ಇದನ್ನು ಹೊಡೆದೋಡಿಸಲು ಬಸವಾದಿ ಶರಣರು ಕೈಗೊಂಡ ಸಹಜ ಯೋಜನೆಗಳನ್ನು ಷಣ್ಮುಖ ಶ್ರೀಗಳು ಮುಂದುವರಿಸಿದ್ದರು. ಹೀಗೆ, ಒಂದು ಊರಿನಲ್ಲಿ ಉಳಿದುಕೊಂಡು ಪ್ರವಚನ ಮಾಡುತ್ತಿದ್ದಾಗ ಅಲ್ಲಿ ಅಂತ್ಯಜರು, ಸ್ತ್ರೀಯರು ಅವರ ಕಣ್ಣಿಗೆ ಬೀಳುವುದಿಲ್ಲ. ಇದರಿಂದ ಅವರಿಗೆ ಅತೃಪ್ತಿ ಉಂಟಾಗುತ್ತದೆ. ಸೂಕ್ಷ್ಮವಾಗಿ ಸಭೆಯನ್ನು ಅವಲೋಕಿಸಲಾಗಿ ದೂರದಲ್ಲಿ ಹಿಂದೆ ಅಸ್ಪೃಶ್ಯ ವರ್ಗಕ್ಕೆ ಸೇರಿದ ಕೆಲವರು ಕುಳಿತಿರುವುದು ಕಂಡುಬರುತ್ತದೆ. ಕೊನೆಗೆ ಶ್ರೀಗಳೇ ಅವರತ್ತ ನಡೆದು ಅವರ ಯೋಗಕ್ಷೇಮ ವಿಚಾರಿಸಿ ಪ್ರತಿ ದಿನವೂ ಪ್ರವಚನಕ್ಕೆ ಬರುವಂತೆ ಹೇಳುತ್ತಾರೆ. ಇದರಿಂದ ಇಲ್ಲಿ ಸೇರಿದ್ದ ಕೆಲವರಿಗೆ ಅಸಮಾಧಾನ ಉಂಟಾಗುತ್ತದೆಯಾದರೂ ಶ್ರೀಗಳು ಅದಕ್ಕೆ ತಲೆಕೆಡಿಸಿಕೊಳ್ಳದೆ ದಲಿತ ಕಾಳಜಿಯಲ್ಲಿ ಮುಂದುವರೆಯುತ್ತಾರೆ. ಬಸವಣ್ಣನ ಹೆಸರು ಹೇಳಿ ಜಾತಿ ತಾರತಮ್ಯ ಮಾಡುವವರನ್ನು ಕಂಡು ಶ್ರೀಗಳು ಕೋಪಗೊಂಡು – "ಬಸವಣ್ಣ ಜಂಗಮಪ್ರಾಣಿ ಅಂತ ಹೇಳ್ತಾ ಪ್ರಸಾದ ಹೊಡಿಯೋಕೆ ಬರ್ತದೆ. ಅವನು ಹೇಳಿದ್ದನ್ನು ಆಚರಿಸೋಕೆ ಬರೋದಿಲ್ಲವೇ?" ಎಂದು ನೇರವಾಗಿ ಹೇಳಿ ಸವರ್ಣೀಯರ ಅದರಲ್ಲೂ ಲಿಂಗವಂತರ ಆತ್ಮಸಾಕ್ಷಿಯನ್ನು ಎಚ್ಚರಿಸುತ್ತಿದ್ದರು. 'ಕೊಲ್ಲುವವನೇ ಮಾದಿಗ ಹೊಲಸು ತಿಂಬುವನೇ ಹೊಲೆಯ' ಮೊದಲಾದ ಸಾಮಾಜಿಕ ಸಮಾನತೆಯ ಬಸವಣ್ಣನವರ ಮಾತುಗಳು ಅವರಿಗೆ ಆದರ್ಶವಾಗಿದ್ದವು. ಕೆಲವರು ಷಣ್ಮುಖ ಶಿವಯೋಗಿಗಳ

ಸಮಾನತೆಯ ಆಚರಣೆಗಳನ್ನು ಒಪ್ಪಿಕೊಳ್ಳುತ್ತಿದ್ದರು. ಇನ್ನು ಕೆಲವು ಸನಾತನವಾದಿಗಳು ವಿರೋಧಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ "ಅಣ್ಣನ ಆದರ್ಶಗಳು ಕಾರ್ಯಗತವಾಗಲು ಈ ಐನೂರು ವರ್ಷಗಳು ಸಾಕಾಗಲಿಲ್ಲ. ಅದಕ್ಕೆ ಇನ್ನೂ ಕಾಲ ಬರಬೇಕೆಂದು ಕಾಣುತ್ತದೆ. ಅದಕ್ಕಾಗಿ ಕಾಯುತ್ತೇನೆ. ಕಾಡಿನಲ್ಲಿ ಏಕಾಂಗಿಯಾಗಿ ಕುಳಿತು ತಪಸ್ಸು ಮಾಡುತ್ತೇನೆ" ಎಂದು ದೃಢ ನಿರ್ಧಾರ ಮಾಡುತ್ತಾರೆ. ಇದು ಷಣ್ಮುಖ ಶ್ರೀಗಳು ಬಸವಣ್ಣನವರ ಸಮಾನತೆ ತತ್ವದ ಬಗೆಗೆ ಇಟ್ಟುಕೊಂಡಿದ್ದ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ.

ಕುಷ್ಠರೋಗಪೀಡಿತನಾದ ಸೋಮಪ್ಪನನ್ನು ಷಣ್ಮುಖ ಶ್ರೀಗಳು ತಮ್ಮ ಯೋಗದ ಸ್ಪರ್ಶದಿಂದ ಗುಣಪಡಿಸಿದ ಸುದ್ದಿ ಸುತ್ತಮುತ್ತೆಲ್ಲಾ ಹರಡುತ್ತದೆ ಮತ್ತು ಭಯಾನಕ ಕಾಯಿಲೆಯಿಂದ ಗುಣಮುಖನಾದ ಸೋಮಪ್ಪ ಷಣ್ಮುಖ ಸ್ವಾಮಿಗಳಿಗೆ ಮಠ ಕಟ್ಟಿಸಲು ಮುಂದಾಗುತ್ತಾನೆ. ಆದರೆ ಶ್ರೀಗಳು ಇದನ್ನು ಒಪ್ಪುವುದಿಲ್ಲ. "ನಿಮಗೆ ಮಠ ಬೇಕಿಲ್ಲ. ಆದರೆ ನಿಮ್ಮ ಹೆಸರಿನಲ್ಲಿ ಅದು ಸಾಂಸ್ಕೃತಿಕ ಕೇಂದ್ರವಾಗಿ ಬಡಬಗ್ಗರಿಗೆ ಆಶಯವಾಗಬೇಕು ಎಂಬುದು ನನ್ನ ಆಸೆ. ಅದಕ್ಕೆ ತಾವು ಸಮ್ಮತಿಸಬೇಕು" ಎಂದು ವಿನಂತಿಸಿಕೊಳ್ಳುತ್ತಾನೆ. ಹೀಗೆ ಆ ಊರಿನ ಜನರು ಶ್ರೀಗಳ ಬಗೆಗೆ ಅಖಂಡವಾದ ಭಕ್ತಿಯನ್ನು ಹೊಂದಿರುತ್ತಾರಾದರು ಶ್ರೀಗಳು ಅಲ್ಲಿ ಉಳಿಯುವುದಿಲ್ಲ; ಮುಂದಿನ ಊರಿಗೆ ಪ್ರಯಾಣ ಬೆಳೆಸುತ್ತಾರೆ. ಹೀಗೆ ಊರೂರು ಸುತ್ತುತ್ತಾ ಸಮಾನತೆಯ ಸಂದೇಶವನ್ನು ಸಾರುತ್ತಾ ಶಿಕ್ಷಣದ ಅರಿವು ಮೂಡಿಸುತ್ತಾ, ಮೌಢ್ಯದ ಬಗೆಗೆ ಜಾಗೃತಿ ಮೂಡಿಸುತ್ತಾ, ಕಲ್ಬುರ್ಗಿಯ ಶರಣಬಸವೇಶ್ವರ ಮಠ, ಇಸ್ಲಾಂ ಸಮುದಾಯದ ಮಸೀದಿ ಇವುಗಳಿಗೆ ಭೇಟಿ ಇತ್ತು; ತಮ್ಮ ಕನಸಿನ ಕಲ್ಯಾಣದ ಕಡೆಗೆ ಸಾಗುತ್ತಾರೆ. ಕಲ್ಯಾಣದ ಬಳಿಯಿರುವ ತಾಂಬಳ ಕಲ್ಲುಕುಟಿಗೆಗಳಲ್ಲಿ ದೀರ್ಘಕಾಲ ನೆಲೆನಿಂತು ಬಸವತತ್ವ ಪ್ರಸಾರ ಮಾಡಿ ಮುಂದೆ ಶ್ರೀಶೈಲಕ್ಕೆ ತೆರಳಿ ಮಲ್ಲಿಕಾರ್ಜುನನ ಸಾನ್ನಿಧ್ಯದಲ್ಲಿ ಕೆಲಕಾಲ ಕಳೆದು ಅನಂತರ ಕನ್ಯಾಕುಮಾರಿಯ ಕಡೆಗೆ ಪ್ರಯಾಣ ಬೆಳೆಸುತ್ತಾರೆ. ಅಲ್ಲಿಂದ ಪಶ್ಚಿಮ ಕರಾವಳಿಗೆ ಸಂಚರಿಸಿ ಮತ್ತೆ ಕನ್ನಡ ನಾಡನ್ನು ಪ್ರವೇಶಿಸಿ; ನಿಜಗುಣ ಶಿವಯೋಗಿಗಳ ತಪೋಭೂಮಿಯಾದ ಶಂಭುಲಿಂಗನ ಬೆಟ್ಟ, ಮಲೆ ಮಹದೇಶ್ವರ ಬೆಟ್ಟಗಳನ್ನು ಸಂದರ್ಶಿಸಿ; ಪುನಃ ಯಾತ್ರೆ ಮುಂದುವರಿಸಿ ಹರಿಹರದ ಮಾರ್ಗವಾಗಿ ಹಂಪಿಯನ್ನು ತಲುಪಿ, ಕೆಲಕಾಲ ಅಲ್ಲಿ ನೆಲೆಸಿದ್ದು; ಪುನಃ ಯಾತ್ರೆ ಮುಂದುವರಿಸಿ ಜೇವರ್ಗಿಯನ್ನು ತಲುಪುತ್ತಾರೆ. ಇಲ್ಲಿಗೆ ಅನುಭೂತಿ ಎಂಬ ಅಧ್ಯಾಯ ಮುಗಿದು ಸಂಭೂತಿ ಎಂಬ ಅಧ್ಯಾಯ ಪ್ರಾರಂಭವಾಗುತ್ತದೆ.

ಈ ಅಧ್ಯಾಯದಲ್ಲಿ ಷಣ್ಮುಖ ಶಿವಯೋಗಿಗಳ ವಚನ ರಚನೆಯ ಪ್ರಮಾಣ ಹೆಚ್ಚಾದುದನ್ನು ಮತ್ತು ಅವರು  ಜೇವರ್ಗಿಯ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಲಾದ ವಿವರಗಳನ್ನು ಕಟ್ಟಿಕೊಡಲಾಗಿದೆ. ಕ್ರಮೇಣ ಷಣ್ಮುಖ ಶಿವಯೋಗಿಗಳು

ಮಠದ ಬೆಳವಣಿಗೆಯತ್ತ ಗಮನಹರಿಸುತ್ತಾರೆ. ಮಠವೆಂದರೆ ಕೇವಲ ಭೌತಿಕವಾದ ಕಟ್ಟಡವಲ್ಲ, ಅದು ಅಲ್ಲಿರುವ ಸ್ವಾಮಿ ಹಾಗೂ ಭಕ್ತರ ಆಂತರಿಕ ಚೇತನದ ಊರ್ಧ್ವಮುಖ ಬೆಳವಣಿಗೆಗೆ ಸಾಕ್ಷಿ ಎಂಬುದು ಷಣ್ಮುಖ ಶಿವಯೋಗಿಗಳ ನಂಬಿಕೆಯಾಗಿತ್ತು. ಮತ್ತು ಅವರು "ಸ್ಥಾವರದ ಒಳಗಿದ್ದು ಜಂಗಮನಾಗಬೇಕು" ಎಂಬ ಅಖಂಡೇಶ್ವರರ ಮಾತಿನಂತೆ ನಡೆದುಕೊಳ್ಳುತ್ತಿದ್ದರು. "ಮಠಗಳಿರುವುದು ಸ್ವಾಮಿಗಳ ಪ್ರತಿಷ್ಠೆಗಲ್ಲ; ಸಮಷ್ಟಿಯ ಒಳಿತಿಗಾಗಿ" ಅವರು ಏರುವ ಸಿಂಹಾಸನ ರತ್ನಖಚಿತ ಸಿಂಹಾಸನವಲ್ಲ;..... ಅದು ಶೂನ್ಯ ಸಿಂಹಾಸನ..... ಜಡ ವ್ಯವಸ್ಥೆಯಲ್ಲಿಯೂ ಚಲನಶೀಲತೆಯ ವಿಕಾಸವನ್ನು ತರುವುದರ ರಹಸ್ಯವನ್ನು ಇಲ್ಲಿ ಕಾಣಬೇಕು. (ಪು. 316) "ಮಠ ಎನ್ನುವುದು ಊರೊಟ್ಟಿನ ಒಳಿತಿಗಾಗಿ ಇರುವ ಕೇಂದ್ರ. ಎಲ್ಲರನ್ನೂ ಆಕರ್ಷಿಸಿ ಕಾರ್ಯೋನ್ಮುಖಗೊಳಿಸುವ ಶಕ್ತಿಯ ಆಗರ" ಎಂಬ ಮಾತುಗಳಲ್ಲಿ ಮಠದ ಬಗೆಗಿನ ಷಣ್ಮುಖ ಶ್ರೀಗಳ ಚಿಂತನೆ ಮನನೀಯವಾಗಿ ಮೂಡಿ ಬಂದಿದೆ. ಮಠಗಳಲ್ಲಿ ಕೇವಲ ಪ್ರವಚನ ನಡೆಸಿದರೆ ಸಾಲದು; ಅವು ಶಿಕ್ಷಣ ಪ್ರಸಾರದ ಕೇಂದ್ರಗಳು ಆಗಬೇಕು ಎಂದು ಶ್ರೀಗಳು ಉಚಿತ ಪ್ರಸಾದದ ನಿಲಯದೊಂದಿಗೆ, ಉಚಿತ ಶಿಕ್ಷಣವನ್ನು ಪ್ರಾರಂಭಿಸುತ್ತಾರೆ. ಇಲ್ಲಿ ಮುಖ್ಯವಾಗಿ ಬಡವರು, ಕೂಲಿಕಾರ್ಮಿಕರು ಮತ್ತು ಅಸ್ಪೃಶ್ಯರ ಮಕ್ಕಳಿಗೆ ಸಮಾನ ನೆಲೆಯಲ್ಲಿ ಶಿಕ್ಷಣವನ್ನು ಕೊಡುವ ಮೂಲಕ ಬಸವಾದಿ ಶರಣರ ಆಶಯಗಳನ್ನು ಶ್ರೀಗಳು ಅನುಷ್ಠಾನ ಮಾಡುವುದು ಗಮನಾರ್ಹವಾಗಿ ಕಾಣುತ್ತದೆ. ಶ್ರೀಗಳ ಸಮಾನತೆಯ ದೃಷ್ಟಿ, ದಯೆ, ಅಂತಃಕರಣ, ದೂರದೃಷ್ಟಿಯಿಂದಾಗಿ ಜೇವರ್ಗಿಯ ಮಠ ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿ ಸುತ್ತಲು ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡ ವಿವರಗಳು ಇಲ್ಲಿ ನಿರೂಪಿತವಾಗಿವೆ.

ಕಾದಂಬರಿಯ ಉತ್ತರಾರ್ಧದಲ್ಲಿ ಷಣ್ಮುಖ ಶಿವಯೋಗಿಗಳ ಆಧ್ಯಾತ್ಮಿಕ, ಸಾಮಾಜಿಕ ಕಲ್ಯಾಣದ ಭಾಗವಾಗಿ ಪ್ರಾಸಂಗಿಕವಾಗಿ ಅವರ ಹತ್ತು ಹಲವು ಯೋಜನೆಗಳನ್ನು ಸೇರಿಸಲಾಗಿದೆ ಮತ್ತು ಷಣ್ಮುಖ ಶಿವಯೋಗಿಗಳು ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿದ ವಿವರಗಳು ಬಂದಿವೆ.

ಆದಿಯಿಲ್ಲದ ಬಯಲು, ಅನಾದಿಯಿಲ್ಲದ ಬಯಲು
ಶೂನ್ಯವಿಲ್ಲದ ಬಯಲು, ನಿಶ್ಶೂನ್ಯವಿಲ್ಲದ ಬಯಲು
ಸುರಾಳವಿಲ್ಲದ ಬಯಲು, ನಿರಾಳವಿಲ್ಲದ ಬಯಲು
ಅಖಂಡೇಶ್ವರನೆಂಬ ಬಯಲಿನ ಬಯಲು
ಮಹಾಘನ ಬರಿಯ ಬಯಲೊಳಗೆ
ಸಾವಯವವಿಲ್ಲದ ಬಯಲು, ನಿರವಯವಿಲ್ಲದ ಬಯಲು
ಎಚ್ಚರವಡಗಿ ನಾನೆತ್ತ ಹೋದೆನೆಂದರಿಯೆನು

ಎಂಬ ಬಯಲ ಭಾವದ ವಚನದೊಂದಿಗೆ ಷಣ್ಮುಖ ಶಿವಯೋಗಿಗಳ ದೈವೀಜೀವನ ಬಯಲಾಗುತ್ತದೆ. ಅಲ್ಲಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

- ಜೇವರ್ಗಿಯ ಷಣ್ಮುಖ ಶಿವಯೋಗಿಗಳ ದೈವೀಜೀವನದ ಮೂಲಕ; ಮಠದ ಜಂಗಮನೊಬ್ಬನು ಹೇಗಿರಬೇಕು ಎಂಬುದನ್ನು ಕಾದಂಬರಿಯಲ್ಲಿ ವಿವರಿಸಲಾಗಿದೆ.
- ಪ್ರಾಸಂಗಿಕವಾಗಿ ಅಲ್ಲಲ್ಲಿ ಬಸವಾದಿ ಶಿವಶರಣರ ತತ್ವಗಳ ಜಿಜ್ಞಾಸೆ ಮನನೀಯವಾಗಿ ನಿರೂಪಿಸಲ್ಪಟ್ಟಿದೆ.
- ಔಚಿತ್ಯಕ್ಕೆ ಕುಂದುಬಾರದ ರೀತಿಯಲ್ಲಿ ಇತಿಹಾಸದೊಂದಿಗೆ ತಕ್ಕಮಟ್ಟಿನ ಕಾಲ್ಪನಿಕತೆಯು ಬೆರೆತುಕೊಂಡು ಕಾದಂಬರಿಯ ಶಿಲ್ಪ ಬಂಧುರವಾಗಿ ನಿರ್ಮಿತವಾಗಿದೆ.
- ಕಾದಂಬರಿಯ ವಸ್ತು, ಪಾತ್ರ ಮತ್ತು ಸ್ಥಳ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ್ದಾಗಿದೆ. ಆದರೆ ಅಲ್ಲಲ್ಲಿ ಪಾತ್ರಗಳ ಸಂಭಾಷಣೆಯಲ್ಲಿ ಮೈಸೂರು ಪ್ರಾಂತ್ಯದ ಭಾಷೆ ಸ್ವಲ್ಪಮಟ್ಟಿಗೆ ಇಣುಕಿಹಾಕಿರುವುದು ಕಾದಂಬರಿಯ ಮೂಲ ಧಾಟಿಗೆ ಸ್ವಲ್ಪ ವ್ಯತಿರಿಕ್ತವೆನಿಸುತ್ತದೆ.
- ಕಥೆಯ ಅನುಕ್ರಮವಾದ ಬೆಳವಣಿಗೆಗೆ ಶರಣ ತತ್ವದಲ್ಲಿನ ನಿಷ್ಠೆ ಮತ್ತು ಅದರ ಪ್ರಸಾರದಲ್ಲಿ ಕಂಡುಬರುವ ಉತ್ಸಾಹ, ಸಂದಿಗ್ಧತೆಯಿಲ್ಲದ ಬರವಣಿಗೆ, ವಸ್ತುವಿಗೆ ಅನುರೂಪವಾದ ಅನುಭಾವಿಕತೆಗಳಿಂದಾಗಿ ಕಾದಂಬರಿ ಸಹೃದಯನಲ್ಲಿ ಯಶಸ್ವಿಯಾಗಿ ಸಂವಹನಗೊಳ್ಳುತ್ತದೆ.

ಮೇಲೆ ಸೂಚಿಸಿದ ಸಣ್ಣ ಮಿತಿಯೊಂದನ್ನು ಹೊರತುಪಡಿಸಿದರೆ ಇಡೀ ಕಾದಂಬರಿ ತನ್ನ ಆಧ್ಯಾತ್ಮಿಕ ಹದಗಾರಿಕೆಯಿಂದ ನಿರೂಪುಗೊಂಡಿರುವುದು ಗಮನ ಸೆಳೆಯುತ್ತದೆ.

□

ಭಕ್ತರ ಭಾವದಲ್ಲಿ ಸುಳಿವ ಸುಳುಹು,
ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು, ನೀನೆಯಯ್ಯಾ !
ಸೂರ್ಯನ ಬೆಳಗಿನೊಳಗೆ ಸಚರಾಚರಪ್ರಾಣಿಗಳು ಸುಳಿವಂತೆ,
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ.
ಅಮರೇಶ್ವರಲಿಂಗದ ಒಡಲು ಸಂಗನಬಸವಣ್ಣನೆಂಬುದನು
ಮಡಿವಾಳಮಾಚಿತಂದೆಗಳೆ ಬಲ್ಲರು ಕಾಣಾ ಸಂಗನಬಸವಣ್ಣ.

**– ಆಯ್ದಕ್ಕಿ ಮಾರಯ್ಯ**

# ಶರಣರ ಬೆಳಕಿನಲ್ಲಿ ತಮಂಧದ ಕೇಡ ನೋಡಯ್ಯ

**ಡಾ. ಎಂ.ಎಸ್. ಆಶಾದೇವಿ**

**ಶ**ರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವನ್ನು ನೀಡಿರುವುದಕ್ಕಾಗಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಬೆಂಗಳೂರು ಶಾಖೆಯ ಹಾಗೂ ಕದಳಿ ವೇದಿಕೆಯ ಸಮಸ್ತರಿಗೂ ನನ್ನ ಕೃತಜ್ಞತೆಗಳು. ಎನಗಿಂತ ಕಿರಿಯರಿಲ್ಲ ಎನ್ನುವ, ಎಲ್ಲ ಹಿರಿಯರ ಹಾರೈಕೆ ಇದು ಎನ್ನುವ ವಿನಯದಲ್ಲಿ ಇದನ್ನು ಸ್ವೀಕರಿಸಿದ್ದೇನೆ.

ಶರಣ ಚಳುವಳಿಯು ಹುಟ್ಟಿದ್ದು ಸಮುದಾಯವು ತೀವ್ರವಾದ ಬಿಕ್ಕಟ್ಟಿನಲ್ಲಿದ್ದಾಗಲೇ. ವೈದಿಕತೆಯು ಜನಸಮುದಾಯವನ್ನು, ಅವರ ಜೀವಚೈತನ್ಯವನ್ನು, ಅವರ ಹಕ್ಕುಗಳನ್ನು, ಬದುಕಿನ ಅನಂತ ಅವಕಾಶಗಳನ್ನು ಎಲ್ಲವನ್ನೂ ಕಿತ್ತುಕೊಂಡು ಅವರ ಬದುಕನ್ನೇ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಸರ್ವನಾಶ ಮಾಡುತ್ತಿದ್ದ ಸಂದರ್ಭದಲ್ಲಿ ಶರಣರು ಇಡೀ ಸಮುದಾಯವನ್ನು 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎನ್ನುವ ಆತ್ಯಂತಿಕ ಮಾನವೀಯ ನೆಲೆಯ ಕಡೆಗೆ ಚಲಿಸುವಂತೆ ಮಾಡಿದರು. ನಾಗರಿಕತೆಯ ಇತಿಹಾಸದಲ್ಲೇ ಮನುಷ್ಯ ಘನತೆ ಮತ್ತು ಮನುಷ್ಯ ಪ್ರೀತಿಯ ತಳಹದಿಯಲ್ಲಿ ಇಷ್ಟು ಉತ್ಕಟವಾಗಿ ಘಟಿಸಿದ ಚಳುವಳಿ ಇನ್ನೊಂದಿರಲಾರದು. ಇದನ್ನೊಂದು ಮಹಾ ಪ್ರಯಾಣ, ಆದರೆ ಈ ಮಹಾಪ್ರಯಾಣ ಚೇತೋಹಾರಿಯಾದ, ಮನುಷ್ಯ ಮನುಷ್ಯರನ್ನು ಬೆಸೆಯುವ ಪ್ರಯಾಣ, ಇದು ಆತ್ಮಶೋಧದ ಪ್ರಯಾಣ, ಶೋಷಕರು ಮತ್ತು ಶೋಷಿತರು ಇಬ್ಬರೂ ಒಟ್ಟಾಗಿ ನಡೆಯಬೇಕಾದ ಅರಿವಿನ ಪ್ರಯಾಣ, ಗಂಡು ಮತ್ತು ಹೆಣ್ಣು ಇಬ್ಬರೂ ಜೊತೆಜೊತೆಯಾಗಿ ನಡೆದ ಪ್ರಯಾಣ, ರಾಜಪ್ರಭುತ್ವವನ್ನು ಜನಪ್ರಭುತ್ವದ ಕಡೆಗೆ ಸೆಳೆದ ಪ್ರಯಾಣ, ಭಕ್ತರ ಏಕಾಂತ ಮತ್ತು ಲೋಕಾಂತಗಳನ್ನು ಬೆಸೆದ ಪ್ರಯಾಣ, ಲೌಕಿಕವನ್ನು ಧಿಕ್ಕರಿಸದ, ಆಧ್ಯಾತ್ಮವನ್ನು ಬಿಡದ ಪ್ರಯಾಣ, ಮೌಲ್ಯವ್ಯವಸ್ಥೆಯ ದೌರ್ಬಲ್ಯಗಳು, ಕೊರತೆಗಳನ್ನು ಧಿಕ್ಕರಿಸುವ ವಿರುದ್ಧ ದಿಕ್ಕಿನ ಪ್ರಯಾಣ, ಜನ ಸಾಮಾನ್ಯರನ್ನು ಒಳಗೊಳ್ಳದ ಶಿಷ್ಟ ಕಾವ್ಯಕ್ಕೆ ಪರ್ಯಾಯವಾಗಿ ಕಾವ್ಯವನ್ನು

---

**ದಿನಾಂಕ 22, 23 ಅಕ್ಟೋಬರ್ 2022 ರಂದು ಶಿವರಾತ್ರೀಶ್ವರ ಕೇಂದ್ರ ಹಾಗೂ ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ, ಜಯನಗರ 8ನೇ ಬ್ಲಾಕ್, ಬೆಂಗಳೂರು ಇಲ್ಲಿ ನಡೆದ 6ನೇ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ**

ಅರಮನೆಯಿಂದ ಜನಬೀದಿಯ ಕಡೆಗೆ ತಂದ ಅಪ್ಪಟ ಕಾವ್ಯದ ಪ್ರಯಾಣ. ಈ ಪಟ್ಟಿ ಕೊನೆಯಿಲ್ಲದಂತೆ ಬೆಳೆಯುತ್ತಲೇ ಹೋಗಬಹುದು. ಈ ಅಂಶವೇ ಶರಣ ಚಳುವಳಿಯ ಅನನ್ಯತೆಯನ್ನು, ಅದರ ಕಾಲಾತೀತ ಶಕ್ತಿ ಸೌಂದರ್ಯಗಳನ್ನು ಧ್ವನಿಸುತ್ತದೆ. ಶರಣ ಚಳುವಳಿಯ ಬಗ್ಗೆ ಚರ್ಚಿಸುವಾಗಲೆಲ್ಲ, ಕವಿ ಯೇಟ್ಸ್‌ನ ಮಾತೊಂದು ನೆನಪಾಗುತ್ತದೆ

> The centre cannot hold.
> Best lack all conviction,
> While the worst are full
> of passionate intensity

ಸೆಕೆಂಡ್ ಕಮಿಂಗ್ ಎನ್ನುವ ಈ ಕವಿತೆಯಲ್ಲಿ, ಕವಿ ಕೊನೆಗೆ ಎರಡನೆಯ ಅವತಾರವೊಂದು ಬಂದು ಲೋಕವನ್ನು ಅದರ ಕಾರ್ಪಣ್ಯಗಳಿಂದ ಕಾಪಾಡಬಹುದು ಎನ್ನುವ ಆಶಾವಾದವನ್ನು ವ್ಯಕ್ತಪಡಿಸುತ್ತಾನೆ. ಈ ಸಂದರ್ಭದಲ್ಲಿ ವಚನವನ್ನೇ ಉದಾಹರಿಸ ಬಹುದಾಗಿದ್ದರೂ ಯೇಟ್ಸ್‌ನ ಕವಿತೆಯನ್ನು ಉಲ್ಲೇಖಿಸುವುದಕ್ಕೆ ಕಾರಣವೆಂದರೆ, ಸಮಕಾಲೀನ ಸಂದರ್ಭವನ್ನು ಈ ಸಾಲುಗಳು ಇಡಿಯಾಗಿ ಧ್ವನಿಸುತ್ತವೆ ಎನ್ನುವುದು.

ಈ ನಮ್ಮ ಕಾಲ, ನಿಜಕ್ಕೂ ತಲ್ಲಣಗಳ ಕಾಲ, ಅನೇಕ ವಿಕಾರಗಳು, ವಿಪರ್ಯಾಸಗಳು, ದುರಂತಗಳು ನಮ್ಮ ಕಾಲವನ್ನು ನಾಗರಿಕತೆಯ ಇತಿಹಾಸದಲ್ಲೇ ಅತ್ಯಂತ ವಿಷಮ ಕಾಲವಾಗಿಸಿವೆ. ಮನುಷ್ಯನ ಕ್ರೌರ್ಯ, ಅಸಹಿಷ್ಣುತೆಗಳು ಹಿಂದೆ ಎಂದೂ ಈ ಪ್ರಮಾಣದಲ್ಲಿರಲಿಲ್ಲವೇನೋ ಎಂದು ಭಾಸವಾಗುತ್ತಿದೆ. ದುಷ್ಟ ಶಕ್ತಿಗಳು ವಿಜೃಂಭಿಸುತ್ತಿರುವ ಸಮಕಾಲೀನ ಸನ್ನಿವೇಶದಲ್ಲಿ ಶಿಷ್ಟ ಶಕ್ತಿಗಳು ಅಸಹಾಯಕವಾಗುತ್ತಿವೆಯೇನೋ ಎನ್ನುವ ಪ್ರಶ್ನೆ ಮತ್ತು ಆತಂಕ ನಾಡಿನ ಪ್ರಜ್ಞಾವಂತರನ್ನು ಕಾಡುತ್ತಿದೆ. 'ಸರ್ವ ಜನಾಂಗದ ಶಾಂತಿಯ ತೋಟವನ್ನು, ಹಿಂದೂ ಮುಸಲ್ಮಾನ ಪಾರಸಿಕ ಜೈನರುದ್ಯಾನವನ್ನು ರಣ ರಂಗವಾಗಿಸದೇ ಉದ್ಯಾನವಾಗಿಯೇ ಉಳಿಸಬೇಕಾದ ಜವಾಬ್ದಾರಿ ನಮ್ಮೆದುರಿಗಿದೆ. ಕೂಡಿಸಬೇಕಾದ ಧರ್ಮ ಮತ್ತು ಧಾರ್ಮಿಕತೆಗಳು ಮನುಷ್ಯರನ್ನು ಹಿಂದೆಂದೂ ಕಾಣದ ರೂಪ ಮತ್ತು ಪ್ರಮಾಣದಲ್ಲಿ ಒಡೆಯುತ್ತಿರುವ ವಿಷಮ ಸನ್ನಿವೇಶದಲ್ಲಿ ವಚನಕಾರರನ್ನು ನಾವು ಕಣ್ಣೆತ್ತಿ ನೋಡುವುದರಿಂದ ಮಾತ್ರ ಸಮಸ್ಯೆ ಪರಿಹಾರವಾಗಲಾರದು. ಆ ಕಣ್ಣಿನ ನೋಟವನ್ನೇ ನಾವು ನಮ್ಮದಾಗಿಸಿಕೊಳ್ಳಬೇಕು.

ಭಾರತೀಯ ಸಮುದಾಯದ ಮೂಲಶಕ್ತಿಸ್ವರೂಪವೇ ಅದರ ಬಹುತ್ವದ್ದು. ಈ ಬಹುತ್ವವನ್ನು ಉಳಿಸಿಕೊಳ್ಳುವುದೆಂದರೆ 'ಒಳಗೊಳ್ಳುವ' (inclusive) ದಾರಿಯನ್ನು ಒಪ್ಪುವುದು ಎಂದು. ಶರಣ ಚಳುವಳಿಯು ಇದನ್ನು ತಾತ್ವಿಕವಾಗಿಯೂ ಪ್ರಾಯೋಗಿಕ ವಾಗಿಯೂ ಸ್ಥಾಪಿಸಲು ಯತ್ನಿಸಿತು ಎನ್ನುವುದೇ ಇದರ ಹೆಗ್ಗಳಿಕೆ. ನೋಯುವ ಹಲ್ಲಿಗೆ ನಾಲಿಗೆ ಮತ್ತೆ ಮತ್ತೆ ಮರಳುತ್ತದೆ. ನಾವಾದರೂ ಶರಣ ಚಳುವಳಿಗೆ ಮತ್ತೆ

ಮತ್ತೆ ಮರಳುತ್ತಲೇ ಇದ್ದೇವೆ. ಏಕೆಂದರೆ ಇದು ಕೇವಲ ಸಿದ್ಧಾಂತಗಳನ್ನು ಕಟ್ಟಿ ಕೊಡಲಿಲ್ಲ, ಉಪದೇಶಾಮೃತದಲ್ಲಂತೂ ಶರಣ ಚಳುವಳಿಗೆ ಯಾವ ನಂಬಿಕೆಯೂ ಇರಲಿಲ್ಲ. 'ಲೀಲೆಯಲಿ ಯಾವುದೂ ವಿಫಲಮಲ್ಲ' ಎನ್ನುವುದು ಕೇವಲ ಒಂದು ರಮ್ಯ ಹೇಳಿಕೆಯಾಗಿ ಉಳಿದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಪ್ರತಿ ಜೀವಿಯನ್ನೂ ಜಗತ್ತಿನ ಅನನ್ಯ ಸೃಷ್ಟಿ ಎನ್ನುವಂತೆ ನೋಡಲು ಹಂಬಲಿಸಿದವರು ಶರಣರು. ಆದ್ದರಿಂದಲೇ ಇಡೀ ಶರಣ ಚಳುವಳಿಯನ್ನು 'ವ್ಯಕ್ತಿ ವಿಶಿಷ್ಟ ಸಿದ್ಧಾಂತ'ದ ಹಿನ್ನೆಲೆಯಲ್ಲಿಯೂ ನೋಡಲು ಸಾಧ್ಯವಿದೆ. ಸಕಲ ಜೀವಾತ್ಮರಿಗೂ ಲೇಸನೇ ಬಯಸುವವನು ಶರಣ ಎನ್ನುವಾಗ ನಾಗರಿಕ ಮನುಷ್ಯರ ವ್ಯಾಖ್ಯಾನವನ್ನೇ ಇವರು ಮಂಡಿಸುತ್ತಿದ್ದಾರೆ ಎನ್ನಿಸುತ್ತದೆ. ನಾಗರಿಕತೆಯು ಕಟ್ಟುತ್ತಲೇ ಬಂದಿರುವ ಎಲ್ಲ ಸಾಮಾಜಿಕ ಸಂಸ್ಥೆಗಳನ್ನೂ ಶರಣರು ನಿಷ್ಠುರವಾದ ವಿಮರ್ಶೆಗೆ ಒಳಗುಮಾಡುತ್ತಾರೆ. ಎಲ್ಲೆಲ್ಲಿ ಮನುಷ್ಯರನ್ನು ತರತಮಗಳಿಗೆ ಒಳಗುಮಾಡಲಾಗುತ್ತದೆಯೋ ಅಂಥ ಎಲ್ಲವನ್ನೂ ಇವರು ನಿರಾಕರಿಸುತ್ತಾರೆ. ದಾಂಪತ್ಯವಾಗಲಿ, ಪ್ರಭುತ್ವವಾಗಲಿ, ಜಾತಿ ವ್ಯವಸ್ಥೆಯಾಗಲಿ, ವರ್ಗ ವ್ಯವಸ್ಥೆಯಾಗಲಿ, ಗಂಡಾಳಿಕೆಯಾಗಲೀ ಯಾವುದನ್ನೂ ಇವರು ಒಪ್ಪಿದವರೇ ಅಲ್ಲ. "ಅನೀ ಬಿಜ್ಜಳಂಗಂಜುವೆನೇ ಅಯ್ಯಾ" ಎನ್ನುವ ಮಾತು ಕೇವಲ ಬಸವಣ್ಣನವರು ಉದ್ವೇಗದ, ಆತಂಕದ ಒಂದು ಘಳಿಗೆಯಲ್ಲಿ ಎಳೆದ ಉದ್ಗಾರವಲ್ಲ, ಅವರು ಕಟ್ಟಿ ಬೆಳೆಸಿದ ಹಾದಿ ಅದು. ಪ್ರಜಾಪ್ರಭುತ್ವ, ವಿಕೇಂದ್ರೀಕರಣ ವಚನಕಾರರು ಕಂಡ ಕನಸನ್ನು ನನಸಾಗಿಸಿಕೊಳ್ಳಲು ನಡೆಸಿದ ಐತಿಹಾಸಿಕ ಹೋರಾಟಗಳು.

ಮನುಷ್ಯರನ್ನು ಅವರ ಸಹಜ ದೌರ್ಬಲ್ಯಗಳ ಜೊತೆಯಲ್ಲಿಯೇ ಗುರುತಿಸುತ್ತಾ ಅದನ್ನು ದಾಟುವ ಪರಿಯನ್ನೂ ಚಿಂತಿಸಿದವರು. ಪಶುತ್ವದ ಹಂತದಿಂದ ಪಶುಪತಿಯ ನೆರವಿನಿಂದ ನಮ್ಮನ್ನು ನಾವೇ ಉದ್ಧರಿಸಿಕೊಳ್ಳಬೇಕಾದ ಕಡುಕಷ್ಟದ ದಾರಿಯು ಎಲ್ಲರ ದಾರಿಯೂ ಆಗಬೇಕೆನ್ನುವುದನ್ನು ಅಂತಃಕರಣದಲ್ಲಿ ಕಟ್ಟಲು ಹೊರಟವರು. ಗುರುವಿನ ನಾಯಕನ ಅಧಿಕಾರ ಸ್ಥಾನವನ್ನು ಸಾಮೂಹಿಕ ನಾಯಕತ್ವದ ಜನಪರ ನೆಲೆಗೆ ತರುವುದು ಸಾಧ್ಯವಾದದ್ದು ಶರಣ ಚಳುವಳಿಯಲ್ಲಿ ಮಾತ್ರ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಗುಲಾಮಿ ಸಂಸ್ಕೃತಿಯ ಕಡೆಗೆ ಸಾಗುತ್ತಿರುವ ನಮಗೆ ಹನ್ನೆರಡನೆಯ ಶತಮಾನವು ಈ ವಿಷಯದಲ್ಲಿ ಎಚ್ಚರಿಕೆಯನ್ನೂ ಕೊಡುತ್ತಿದೆ, ಮಾರ್ಗದರ್ಶನವನ್ನೂ ಮಾಡುತ್ತಿದೆ.

ಶರಣ ಚಳುವಳಿಯನ್ನು ಒಂದು "ಸ್ಫೋಟ" ಎಂದೂ ಕರೆಯಬಹುದು. ಯಾವುದೇ ಕ್ರಾಂತಿಯೂ ಒಂದು ಸ್ಫೋಟವೇ. ನಾಗರಿಕತೆಯ ಇತಿಹಾಸದಲ್ಲಿ ಇಂಥ ಹಲವು ಸ್ಫೋಟಗಳನ್ನು ಗುರುತಿಸಬಹುದು. ಆದರೆ ಶರಣ ಕ್ರಾಂತಿಯು ನಿಸ್ಸಂದೇಹವಾಗಿ 'ನಭೂತೋ' ಎನ್ನುವ ಸ್ವರೂಪದ್ದು. ಸಮುದಾಯವು ಅನಾಗರಿಕತೆಯ, ಅಮಾನವೀಯತೆಯ ದಾರಿಯಲ್ಲಿ ನಡೆಯುತ್ತಿರುವಾಗ ಮರಳಿ ಸಮುದಾಯವನ್ನು ಮಾನವೀಯತೆಯ ಹಾದಿಗೆ ಕರೆದೊಯ್ಯುವ ಪ್ರಯತ್ನವನ್ನೇ ಕ್ರಾಂತಿ ಎಂದು

ಕರೆಯಬಹುದು. ಶರಣ ಕ್ರಾಂತಿ ಹೀಗೆ ತನ್ನ ಸಮುದಾಯವನ್ನು ಮಾನವೀಯಗೊಳಿಸುವ ಅಸಾಧಾರಣ ಪ್ರಯತ್ನ ಎನ್ನಿಸುತ್ತದೆ. ಮಹತ್ವದ ಮಾತೆಂದರೆ, ಶರಣರಿಗೆ, ಅದರ ಮುಂದಾಳುಗಳಿಗೆ ಜನಸಾಮಾನ್ಯರಿಗೆ ಇದರ ಅಗತ್ಯ, ಮಹತ್ವವನ್ನು ಮನದಟ್ಟುಮಾಡಿಸಲು ಸಾಧ್ಯವಾದದ್ದು. ಶರಣ ಕ್ರಾಂತಿಯು ಆಶಯಗಳನ್ನು ಮಾತ್ರ ಪ್ರತಿಪಾದಿಸಲಿಲ್ಲ, ಅದರ ಪ್ರಾಯೋಗಿಕ ನೆಲೆಗಳನ್ನೂ ಅಷ್ಟೇ ತೀವ್ರವಾಗಿ, ಪ್ರಾಮಾಣಿಕವಾಗಿ ಶೋಧಿಸಿತು. ಆದ್ದರಿಂದಲೇ ಇದೊಂದು ಅನನ್ಯವಾದ ಕ್ರಾಂತಿ.

ಮನುಕುಲದ ಇತಿಹಾಸದಲ್ಲಿಯೇ ಸ್ವಾತಂತ್ರ್ಯಕ್ಕಾಗಿ ನಡೆಸುವ ಹೋರಾಟಗಳನ್ನು ಜೀವನ್ಮರಣದ ತೀವ್ರತೆಯ ಹೋರಾಟಗಳು ಎಂದು ಹೇಳಲಾಗುತ್ತದೆ. ಶರಣ ಚಳುವಳಿಯು ಭೌಗೋಳಿಕ, ದೈಹಿಕ ಸ್ವಾತಂತ್ರ್ಯಕ್ಕಾಗಿ ಅಲ್ಲ, ಅದು ಮನುಷ್ಯನ ಆತ್ಮಗೌರವದ ಪ್ರಶ್ನೆಯನ್ನು ಆತ್ಯಂತಿಕವೆಂದು ಭಾವಿಸಿ ಅದಕ್ಕಾಗಿ ನಡೆಸಿದ ಉತ್ಕಟ ಹೋರಾಟ.

ನನಗೆ ಶರಣ ಚಳುವಳಿಯು ಗಾಂಧಿ ಮತ್ತು ಅಂಬೇಡ್ಕರ್ ಅವರ ಸಮೀಕರಣದಂತೆ ಕಾಣಿಸುತ್ತದೆ. ಈ ಇಬ್ಬರೂ ಕಟ್ಟಲು ಬಯಸಿದ ಆರೋಗ್ಯಪೂರ್ಣ, ಮಾನವೀಯ, ಸ್ವಾವಲಂಬಿ ಸಮುದಾಯದ ಸಮಗ್ರ ಕಲ್ಪನೆಯೊಂದು ಹನ್ನೆರಡನೆಯ ಶತಮಾನದ ಶರಣರಲ್ಲಿ ಒಡಮೂಡಿತ್ತು. ಅನಾರೋಗ್ಯಕರವಾದ, ಅಮಾನವೀಯವಾದ ನೆಲೆಯಲ್ಲಿ ಮನುಷ್ಯ ಸಮಾಜವನ್ನು ಒಡೆದವರು, ದಮನಕ್ಕೊಳಗಾದವರು ಇಬ್ಬರೂ ಬದಲಾಗಬೇಕಾದ ಪರಿವರ್ತನಶೀಲತೆಯನ್ನು ಈ ಇಬ್ಬರೂ ಪ್ರತಿನಿಧಿಸಿದರಷ್ಟೇ. ಸ್ವತಃ ಬಸವಣ್ಣನವರು ಈ ಎರಡೂ ಪಾತ್ರಗಳನ್ನು ಅತ್ಯಂತ ಸ್ಪಷ್ಟವಾಗಿ ನಿರೂಪಿಸುತ್ತಾರೆ. ಅಪ್ಪನು ನಮ್ಮ ಡೋಹರ ಕಕ್ಕಯ್ಯ ಎನ್ನುವ ಒಂದು ಮಾತೇ, ಶರಣ ಚಳುವಳಿಯ ಘೋಷ ವಾಕ್ಯದಂತೆ ಭಾಸವಾಗುತ್ತದೆ. ಮೇಲ್ಜಾತಿಯವರಿಗೆ ಇರಬೇಕಾದ ವಿನಯ, ಕೆಳ ಜಾತಿಯವರಿಗೆ ಇರಬೇಕಾದ ಆತ್ಮಪ್ರತ್ಯಯ ಈ ಎರಡರ ಪ್ರಾತ್ಯಕ್ಷಿಕೆಯನ್ನೇ ಬಸವಣ್ಣ ಇಲ್ಲಿ ನೀಡುತ್ತಿದ್ದಾನೆ. ಮೇಲ್ಜಾತಿಯವರಿಗೆ ವಿನಯವನ್ನು ಸಾಧಿಸಿಕೊಳ್ಳುವುದು ಎಷ್ಟು ಕಷ್ಟದ್ದೋ ಅಷ್ಟೇ ಕಷ್ಟದ್ದು ಕೆಳಜಾತಿಯವರಿಗೆ ಕಳೆದೇಹೋಗಿರುವ ಆತ್ಮಪ್ರತ್ಯಯವನ್ನು ಪಡೆದುಕೊಳ್ಳುವುದು. ಬಸವಣ್ಣನವರು ಇದನ್ನು ನಾಟಕೀಯವಾಗಿಯೂ ಪರಿಣಾಮಕಾರಿಯಾಗಿಯೂ ಸಾಧಿಸುವ ಪರಿ ಅಪೂರ್ವವಾಗಿದೆ. ತಾನು ವಿನಯವನ್ನು ಆವಾಹಿಸಿಕೊಳ್ಳುತ್ತಲೇ, ಅದನ್ನು ತನ್ನ ಸಂವೇದನೆಯಾಗಿಸಿಕೊಳ್ಳುತ್ತಲೇ ಎದುರಿಗಿರುವ ದಲಿತರಿಗೆ, ಅದಕ್ಕೆ ಪ್ರತಿಯಾಗಿ ಅವರು ತಮ್ಮ ಸಂವೇದನೆಯನ್ನು ಬದಲಿಸಿಕೊಳ್ಳಬೇಕಾದ ಸೂಚನೆಯನ್ನು ಬಸವಣ್ಣ ಇಲ್ಲಿ ನೀಡುತ್ತಿರುವುದು ಯಾವ ಕಾಲಕ್ಕೂ ಮಾದರಿಯೇ. ಈ ಘಟ್ಟದಲ್ಲಿ ಬಸವಣ್ಣನವರಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಮೇಳೈಸಿರುವುದು ನಮ್ಮ ಗಮನಕ್ಕೆ ಬರುತ್ತದೆ.

ಗಾಂಧೀಜಿಯವರನ್ನು ಬೆಳಗಾವಿ ಅಧಿವೇಶನದ ಮುನ್ನಾದಿನ ಸಂದೇಶಕ್ಕಾಗಿ

ಕೇಳಿದಾಗ, ಅವರು, ನಿಮ್ಮ ಹನ್ನೆರಡನೆಯ ಶತಮಾನದ ಶರಣರು ಕೊಟ್ಟ ಸಂದೇಶಕ್ಕಿಂತ ದೊಡ್ಡ ಸಂದೇಶವನ್ನು ನಾನೇನು ಕೊಡಬಲ್ಲೆ ಎನ್ನುತ್ತಾರೆ. ಅಂಬೇಡ್ಕರ್ ಅವರ ಕೊನೆಯ ದಿನಗಳಲ್ಲಿ, ನನ್ನಗೆ ವಚನ ಚಳುವಳಿಯ ಬಗ್ಗೆ ಹಿಂದೆಯೇ ಗೊತ್ತಾಗಿದ್ದರೆ ನಾನು ಬೌದ್ಧ ಧರ್ಮಕ್ಕೆ ಹೋಗುತ್ತಲೇ ಇರಲಿಲ್ಲವೇನೋ ಎನ್ನುವ ಮಾತನ್ನಾಡುತ್ತಾರೆ. ಈ ಎರಡೂ ಅಭಿಪ್ರಾಯಗಳು ಶರಣ ಚಳುವಳಿಯನ್ನು ಕುರಿತ ಹೆಗ್ಗಳಿಕೆ ಎಂದು ಮಾತ್ರ ನೋಡುವುದು ಕಿರೀಟಕ್ಕೆ ಮತ್ತೊಂದು ಗರಿಯನ್ನು ಸಿಕ್ಕಿಸಿಕೊಟ್ಟ ಹಾಗೆ. ನಿಜವೆಂದರೆ, ಇದು ಸಮಕಾಲೀನ ಸಂದರ್ಭದಲ್ಲಿ ಶರಣ ಚಳುವಳಿಯ 'ಎರಡನೆಯ ಆಗಮನ' ವನ್ನು ಧ್ವನಿಸುತ್ತಿದೆ.

ಈ ಅಂಶವನ್ನು ಉಲ್ಲೇಖಿಸುವುದಕ್ಕೆ ಕಾರಣ ಮತ್ತು ಉದ್ದೇಶಗಳೆರಡೂ ಇವೆ. ಸಮಕಾಲೀನ ಭಾರತವು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಎದುರಿಸುವ ಸಮರ್ಥ ಮಾದರಿಯೊಂದು ಶರಣ ಚಳುವಳಿಯಲ್ಲಿದೆ. ಕೇವಲ ವಿಚಾರಗಳಿಂದ, ಕನಸುಗಳಿಂದ ಯಾವ ಪರಿವರ್ತನೆಯೂ ಘಟಿಸದು. ಅದನ್ನು ಸಾಧಿಸಿಕೊಳ್ಳಬೇಕಾದ ಪ್ರಾಯೋಗಿಕತೆ ಯನ್ನು ವಚನಕಾರರು ಉದ್ದಕ್ಕೂ ದಣಿವರಿಯದ ಬದ್ಧತೆ ಮತ್ತು ಕಾಳಜಿಯಲ್ಲಿ ಪ್ರಯೋಗಿಸುತ್ತಲೇ ಹೋದರು. ಶ್ರಮ ಸಂಸ್ಕೃತಿಯನ್ನು ಒಪ್ಪಿ, ಅದಕ್ಕೆ ಅಧಿಕೃತತೆಯನ್ನು ನೀಡುವುದು ಇದರ ಮೊದಲ ಹೆಜ್ಜೆ, ಮೊದಲ ಘಟ್ಟ ಎನ್ನುವುದರಲ್ಲಿ ವಚನಕಾರರಿಗೆ ಯಾವ ಅನುಮಾನಗಳೂ ಇರಲಿಲ್ಲ. ಜಾತಿಗಳ ಸ್ಥಾನದಲ್ಲಿ ವೃತ್ತಿಯನ್ನು ಸ್ಥಾಪಿಸುವುದು ಇವರಿಗೆ ಸಾಧ್ಯವಾಯಿತು ಎನ್ನುವುದು ಇವರ ಪ್ರಯತ್ನದ ಪ್ರಾಮಾಣಿಕತೆ, ತೀವ್ರತೆಯನ್ನು ಹೇಳುತ್ತದೆ. ಇಷ್ಟೇ ಮುಖ್ಯವಾದದ್ದು, ಮನುಷ್ಯನ ಆಳದಲ್ಲಿ ಎಲ್ಲ ಕಾಲಕ್ಕೂ ಆತ್ಮಗೌರವವನ್ನು ಕುರಿತಂತೆ ಇರುವ ಅರಿವು. ಅದನ್ನು ಮುಚ್ಚುವ, ಪಕ್ಕಕ್ಕೆ ಸರಿಸುವ ಪ್ರಯತ್ನಗಳಲ್ಲಿ ಆ ಸಮುದಾಯದವರು ಕಳೆದುಕೊಂಡ ಆತ್ಮವಿಶ್ವಾಸವನ್ನು, ಆ ವೃತ್ತಿಗಳನ್ನು ಗೌರವಿಸುವ ಮೂಲಕ ಪುನರುಜ್ಜೀವಿಸುವ ಪ್ರಯತ್ನ ಮಾಡಿದರು.

ಈ ಹಂತದಲ್ಲಿ ನಾವು ಗಮನಿಸಲೇಬೇಕಾದ ಮುಖ್ಯವಾದ ಸಂಗತಿಯೊಂದಿದೆ. ಪತಿತರನ್ನು ಉದ್ಧಾರ ಮಾಡುತ್ತಿದ್ದೇವೆ ಎನ್ನುವ ಅಹಂಕಾರಕ್ಕಾಗಲೀ, ಇವರು ನಮ್ಮನ್ನು ಉದ್ಧಾರ ಮಾಡುತ್ತಿರುವ ಅವತಾರಪುರುಷರು, ನಮ್ಮ ಬದುಕು ವ್ಯಕ್ತಿತ್ವದಲ್ಲಿ ಆಗುವ ಬದಲಾವಣೆಗಳು ಇವರ ಕೃಪೆ, ಆಶೀರ್ವಾದ ಎನ್ನುವ, ದೀನ ನಾನು ದಾನಿ ನೀನು ಎನ್ನುವ ಭಾವವಾಗಲೀ ಮೂಡದಂತೆ ನೋಡಿಕೊಳ್ಳುವಲ್ಲಿ ಶರಣರು ಪಡೆದ ಯಶಸ್ಸು ನಿಜಕ್ಕೂ ಅಸಾಧಾರಣವಾದುದು. ಇದು ಅತ್ಯಂತ ಕಷ್ಟದ, ಸೂಕ್ಷ್ಮವಾದ ಸವಾಲು. ಇಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಆ ಕಡೆಯವರ ಅಹಂಕಾರ ಮತ್ತು ಈ ಕಡೆಯವರ ಉಪಕೃತಭಾವ ಎರಡೂ ಚಳುವಳಿಯನ್ನು ಹಾದಿ ತಪ್ಪಿಸಬಹುದು, ತಾವು ಕಾರುಣ್ಯದ ಕೂಸುಗಳಲ್ಲ ಎನ್ನುವ ಆತ್ಮವಿಶ್ವಾಸವನ್ನು ಅವರಲ್ಲಿ ಮೂಡಿಸುವುದು ಬಹು ದೊಡ್ಡ ಸವಾಲು. ಈ

ಸವಾಲಿನಲ್ಲಿ ಅವರು ಗೆದ್ದದ್ದರಿಂದಲೇ ನೂರಾರು ಕೆಳಜಾತಿಯ ವಚನಕಾರರು ಮತ್ತು ವಚನಕಾರ್ತಿಯರು ತಲೆಯೆತ್ತಿ, ದನಿಯೆತ್ತಿ ಮಾತನಾಡಿದ್ದೇ ಸಾಕ್ಷಿ. ಕುಂದುಕೊರತೆಗಳನ್ನು ನಿಸ್ಸಂಕೋಚವಾಗಿ ಎತ್ತಿ ತೋರಿಸುವುದು ಇವರಿಗೆ ಸಾಧ್ಯವಾಗಿದ್ದು, ಅವರ ಮನೋವಿನ್ಯಾಸದಲ್ಲಾದ ಬದಲಾವಣೆಯಿಂದ.

ಇದನ್ನೇ ಇನ್ನೊಂದು ನೆಲೆಯಿಂದ ನೋಡಿದಾಗ, ಶರಣ ಚಳುವಳಿಯ ಇನ್ನೊಂದು ಬಹು ಮುಖ್ಯವಾದ ಸಾಧನೆಯನ್ನು ಹೇಳುತ್ತದೆ. ಅದು ಸಾಮೂಹಿಕ ನಾಯಕತ್ವ ಮತ್ತು ವಿಕೇಂದ್ರೀಕರಣವನ್ನು ಇವರು ಜಾರಿಗೆ ತಂದ ಬಗೆ, ಬಸವಣ್ಣ ಇದರ ಪ್ರಶ್ನಾತೀತ ನಾಯಕ ನಿಜ. ಆದರೆ ಮಿಕ್ಕವರು ನಾಯಕರಲ್ಲ ಎನ್ನುವ ಭಾವ ಯಾರಿಗೂ ಬರದಂತೆ ನೋಡಿಕೊಳ್ಳುವುದು ಕತ್ತಿಯಂಚಿನ ದಾರಿಯ ಪಯಣ. ಅನುಭವ ಮಂಟಪವು ಒಂದು ಮುಕ್ತ ವೇದಿಕೆಯಾಗಿ ಎಲ್ಲ ವಿಚಾರಗಳ, ಭಿನ್ನಾಭಿಪ್ರಾಯಗಳ ಚರ್ಚೆಗೆ ಅಲ್ಲಿ ಅವಕಾಶವಿತ್ತು ಎನ್ನುವುದೇ ಅವರ ತೆರೆದ ಮನಸ್ಸನ್ನು, ಅವರಲ್ಲಿದ್ದ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುತ್ತದೆ.

ಶರಣ ಚಳುವಳಿಗೂ ವಚನಗಳಿಗೂ ಇರುವುದು ಅದ್ವೈತದ ಸಂಬಂಧ. ಆದ್ದರಿಂದಲೇ ವಚನ ಸಾಹಿತ್ಯವನ್ನು ಉಪ ಉತ್ಪನ್ನ ಎಂದು ಹೇಳಲು ನನಗೆ ಹಿಂಜರಿಕೆಯಾಗುತ್ತದೆ. ಶರಣ ಕ್ರಾಂತಿಯ ವಿಚಾರಗಳನ್ನು, ಕನಸುಗಳನ್ನು ಮಾತ್ರ ವಚನಗಳು ಹೇಳುತ್ತಿಲ್ಲ. ಆಲೋಚನೆಗಳು ಮತ್ತು ಅಳವಡಿಕೆಗಳ ಸಾಕಾರರೂಪವಾಗಿ ವಚನಗಳಿವೆ. ಸ್ತ್ರೀವಾದಿಗಳು ಬರವಣಿಗೆಯೂ ಕ್ರಾಂತಿ ಎಂದು ನಂಬುವಂತೆ ವಚನ ಸಾಹಿತ್ಯವು ಕ್ರಾಂತಿಯ ಉಪ ಉತ್ಪನ್ನವಲ್ಲ, ಕ್ರಾಂತಿಯ ದಾರಿಯೇ ಆಗಿದೆ. ವಚನಗಳನ್ನು ಶುದ್ಧ ಕಾವ್ಯದ ಮಾದರಿಯಾಗಿಯೂ ನೋಡಲು ನಾನು ಸಿದ್ಧಳಿದ್ದೇನೆ. ಆದರೆ ಶರಣ ಕ್ರಾಂತಿ ಮತ್ತು ವಚನಗಳ ನಡುವಿನ ಸಂಬಂಧ ಮಾತ್ರ ಅವಿನಾಭಾವದ್ದು.

ವಚನಕಾರರ 'ಸಂಸಾರ'ವನ್ನು ಕುರಿತ ಆಲೋಚನೆಗಳು ಹೆಣ್ಣನ್ನು ಒಳಗೊಳ್ಳುತ್ತಲೇ ಅದನ್ನೂ ಮೀರಿದ್ದಾಗಿವೆ. ಅರ್ಥಪೂರ್ಣ ಬದುಕಿನ ಪರಿಕಲ್ಪನೆಯನ್ನು ಬದಲಿಸಿದವರು ವಚನಕಾರರು. ಲೌಕಿಕವನ್ನು ಕ್ಷಣಿಕ, ಕುದ್ರ ಎಂದು ಪರಿಗಣಿಸಿದ ಸ್ಥಾಪಿತ ನಿಲುವನ್ನು ಬುಡಮೇಲು ಮಾಡಿದವರು ಇವರು. ಸ್ವರ್ಗ ಮತ್ತು ನರಕದ ಕಲ್ಪನೆಗಳನ್ನು ಕಾಣದ ಲೋಕಗಳಿಂದ ಭವದಲ್ಲಿನ ಮನುಷ್ಯರ ಬದುಕು, ವ್ಯಕ್ತಿತ್ವಕ್ಕೆ ಯಶಸ್ವಿಯಾಗಿ ಹೊಂದಿಸಿದರು. ಕಾಯಕವನ್ನು ಕೇಂದ್ರವಾಗಿ ಹೊಂದಿದ, 'ಸತಿಪತಿಯರೊಂದಾದ ನೆಲೆಯನ್ನು ಎತ್ತಿ ಹಿಡಿದ, ಇಹದ ಪರಿಮಳದ ಹಾದಿಯನ್ನು ಅಧಿಕೃತಗೊಳಿಸಿದ ಹೆಗ್ಗಳಿಕೆ ವಚನಕಾರರದ್ದು. ವೈರಾಗ್ಯವೇ ಅಂತಿಮ ಮಾದರಿಯಾಗಿದ್ದ, ಆದರ್ಶವಾಗಿದ್ದ ಸನ್ನಿವೇಶವನ್ನು ಬುಡಮೇಲು ಮಾಡಿ ಅದರ ಜಾಗದಲ್ಲಿ 'ಸಂಸಾರ'ವನ್ನು ಸ್ಥಾಪಿಸಿದರು. ತನ್ನ ಅನ್ನವನ್ನು ತಾನು ದುಡಿದು ತಿನ್ನುವ, ಇತರರಿಗೆ ಕೇಡು ಸುಖ ದಾಂಪತ್ಯವನ್ನು ಸಾಧಿಸಿಕೊಂಡ, ಇತರರನ್ನು

ಶೋಷಿಸದ ತನ್ನ ಶೋಷಣೆಯನ್ನು ಸಹಿಸದ ಮೂಢನಂಬಿಕೆಗಳಿಲ್ಲದ ಸಾಂಸಾರಿಕ ಬದುಕು ಎಲ್ಲವನ್ನೂ ನಿರಾಕರಿಸುವ ವೈರಾಗ್ಯದ ಬದುಕಿಗಿಂತ ಶ್ರೇಷ್ಠ ಎಂದು ಪ್ರತಿಪಾದಿಸಿದ್ದು ಕನ್ನಡ ಜಗತ್ತಿನ ಲೋಕಮೀಮಾಂಸೆಯನ್ನೇ ಬದಲಿಸುವಷ್ಟು ಶಕ್ತವಾದದ್ದು ಎನ್ನುವುದೇ ಇದರ ಐತಿಹಾಸಿಕ ಮಹತ್ವ.

ವಚನಕಾರ್ತಿಯರ ಒಟ್ಟೂ ಪ್ರಯತ್ನವು, ಗಂಡು ಇಲ್ಲದ, ಸಲ್ಲದ ಅಧಿಕಾರವನ್ನು ಹೆಣ್ಣಿನ ಮೇಲೆ ಚಲಾಯಿಸುವುದನ್ನು ನಿಯಂತ್ರಿಸುವುದು ಇದರ ಉದ್ದೇಶ ಎನ್ನಿಸುತ್ತದೆ. ಹೆಣ್ಣನ್ನು ಭೋಗದ ವಸ್ತು ಎಂದು ನೋಡುವ ಪಿತೃಸಂಸ್ಕೃತಿಯ ಸ್ವಯಂದತ್ತ ಧಿಮಾಕನ್ನು ಇದು ಧಿಕ್ಕರಿಸುತ್ತದೆ. ಅದನ್ನೊಂದು ನೈತಿಕ ನೆಲೆ ಎಂದು ಪ್ರತಿಪಾದಿಸುವುದನ್ನು ಒಂದು ಕಾರ್ಯತಂತ್ರವಾಗಿಯೂ ನೋಡಲು ಸಾಧ್ಯವಿದೆ ಎನ್ನುವುದು ವಚನಕಾರ್ತಿಯರ ಬೌದ್ಧಿಕ ಪ್ರಖರತೆಯ ಸೂಚನೆ.

ಅಕ್ಕನಲ್ಲಿ ಲೌಕಿಕ ಮತ್ತು ಅಲೌಕಿಕಗಳ ಅಖಂಡ ಸೆಳೆತ ಉದ್ದಕ್ಕೂ ಇದೆ. ಇವುಗಳ ಸಹ ಅಸ್ತಿತ್ವವೇ ಅವಳ ವ್ಯಕ್ತಿತ್ವದ ಅಸಾಧಾರಣ ಗುಣಲಕ್ಷಣ ಅನ್ನಿಸುತ್ತದೆ. ಅಥವಾ ಇದನ್ನು ಹೀಗೂ ನೋಡಬಹುದು. ಇಹ ಪರಗಳನ್ನು ಭವದಲ್ಲೇ ಸಾಕ್ಷಾತ್ಕರಿಸಿಕೊಳ್ಳಲು ಹಂಬಲಿಸಿದ ವಚನಕಾರರ ಆಶಯಗಳಿಗೆ ಪೂರಕವಾಗಿಯೂ ಅಕ್ಕನ ಬದುಕನ್ನು ನೋಡಲು ಸಾಧ್ಯ. ಕೊನೆಗೂ ಹೆಣ್ಣಿನ ಆಯ್ಕೆಯ ಬದುಕಿನ ಹಕ್ಕನ್ನು ಅದರ ಸಹಜತೆ, ವಿಸ್ತಾರ ಮತ್ತು ಶಕ್ತಿಯಲ್ಲಿ ಪಡೆದ ಹೆಣ್ಣು ಅಕ್ಕ.

ಹೆಣ್ಣು ಅಥವಾ ಲಿಂಗ ತಾರತಮ್ಯದ ಪ್ರಶ್ನೆಯಷ್ಟೇ ಗಂಭೀರವಾಗಿ ಮತ್ತು ಮುಖ್ಯವಾಗಿ ಜಾತಿಯ ಪ್ರಶ್ನೆ, ಧರ್ಮ ಹಾಗೂ ಪುರೋಹಿತಶಾಹಿಯ ಕ್ರೌರ್ಯ ಮತ್ತು ನಿರಂಕುಶ ಹಿಡಿತ, ವರ್ಗ ಮತ್ತು ಪ್ರಭುತ್ವದ ಜನವಿರೋಧಿ ನಿಲುವುಗಳು, ಮೂಢನಂಬಿಕೆಗಳು ಇವೆಲ್ಲವೂ ಶರಣ ಕ್ರಾಂತಿಯನ್ನು ರೂಪಿಸಿವೆ. ಹೀಗೆ ಹೇಳುತ್ತಿರುವಾಗ, 'ಹಂದೆಯಲ್ಲ' ಎಂದು ಹೇಳಲು ಸಾಧ್ಯವಾದದ್ದು ಈ ಕ್ರಾಂತಿಯ ಕಾಲದಲ್ಲಿ ಎನ್ನುವುದು ನಮ್ಮ ಹೆಮ್ಮೆ ಎನ್ನುವುದೂ ಅಷ್ಟೇ ನಿಜ. ಹೆಣ್ಣಿನ ಪ್ರಶ್ನೆಯೇ ಮೂಲಕೇಂದ್ರವಾದ ಚಳುವಳಿ ಯಾವುದಾದರೂ ಇದೆಯೆ? ಇಲ್ಲ. ಹಾಗಿರಬೇಕಿತ್ತು ಎನ್ನುವುದು ಆರೋಪವಲ್ಲ. ಹಾಗಿದ್ದಿದ್ದರೆ ಹೆಣ್ಣಿನ ಸ್ಥಿತಿಗತಿಗಳಲ್ಲಿ ಸ್ವಲ್ಪವಾದರೂ ಬದಲಾವಣೆ ಇರುತ್ತಿತ್ತೇನೋ ಎನ್ನುವ ಹಳಹಳಿಕೆಯ ಕನವರಿಕೆ ಮಾತ್ರ.

'ನನಗಿಂತ ಮೊದಲೆ ಬದಲಾದ ಬಂಡೆಯ ಕಂಡೆ' ಎನ್ನುತ್ತಾರೆ ಕೆ.ಎಸ್.ನ. ಶತಮಾನಗಳಿಂದ ತನ್ನ ಪ್ರಭುತ್ವವನ್ನು ಯಶಸ್ವಿಯಾಗಿ ಸ್ಥಾಪಿಸಿಕೊಂಡ ಪಿತೃಸಂಸ್ಕೃತಿಯನ್ನು ಮೀರುವುದು ಸುಲಭವಲ್ಲ. ಎಲ್ಲರಿಗೂ ಏಕಕಾಲಕ್ಕೆ ಸಾಧ್ಯವಾಗಲಾರದು. ಹೆಣ್ಣಿಗೆ ಹೊರಲೋಕವನ್ನಲ್ಲ, ತನ್ನ ಒಳಲೋಕವನ್ನು ಬದಲಿಸಿಕೊಳ್ಳುವುದೇ ಆತ್ಯಂತಿಕ ಸವಾಲಿನ ಪ್ರಶ್ನೆ. ಹೆಣ್ಣು ತನ್ನ 'ಸ್ವಪ್ರತಿಮೆ'ಯನ್ನು 'ಸ್ವಗ್ರಹಿಕೆ'ಯನ್ನು ಬದಲಿಸಿಕೊಳ್ಳದೆ ಲೋಕವನ್ನು

ತಾನು ನೋಡುವ ಮತ್ತು ಲೋಕ ತನ್ನನ್ನು ನೋಡುವ ಬಗೆಯನ್ನು ಬದಲಿಸಲಾರಳು. ಇದೊಂದು ಕತ್ತಿಯಂಚಿನ ದಾರಿಯ ಪಯಣ. ಏಳುಬೀಳುಗಳ ಈ ಪಯಣದಲ್ಲಿ ನಿಟ್ಟುಸಿರು ಇರದಿದ್ದೀತೆ? ವಚನಕಾರ್ತಿಯರ ನಿಟ್ಟುಸಿರು ಕೂಡ ಅಲ್ಲಲ್ಲಿ ನಮಗೆ ಕಾಣಿಸುತ್ತದೆ ಮತ್ತು ಕೇಳಿಸುತ್ತದೆ.

ಇದು ಶರಣ ಚಳುವಳಿ ಮಹಿಳೆಯರಿಗೆ ಕೊಟ್ಟ ಆತ್ಮವಿಶ್ವಾಸ ಮತ್ತು ಕಾಯಕ ಪ್ರಜ್ಞೆಯ ಫಲ. ವೇಶ್ಯಾವೃತ್ತಿಯನ್ನೂ ಒಂದು ವೃತ್ತಿಘನತೆಯಲ್ಲಿ ಪ್ರತಿಪಾದಿಸಲು ಸಾಧ್ಯವಾದದ್ದು ಈ ಕಾಲಘಟ್ಟದಲ್ಲಿ. ಗಂಡಿನ ಸಲುವಾಗಿಯೇ ರೂಪಿತವಾದ ವೇಶ್ಯಾವೃತ್ತಿಯನ್ನು ಅತ್ಯಂತ ಹೀನಾಯವಾಗಿ ಕಾಣುವ ವಿಪರ್ಯಾಸವನ್ನು, ಅದರ ಹಿಂದಿನ ಹುನ್ನಾರವನ್ನು, ಅಮಾನವೀಯತೆಯನ್ನು ಶರಣ ಚಳುವಳಿ ಶಕ್ತವಾಗಿ ಅನಾವರಣಗೊಳಿಸಿತು. ಆದ್ದರಿಂದಲೇ ಅಕಾರಣವಾಗಿ ಪಾಪಪ್ರಜ್ಞೆಯಲ್ಲಿ ನರಳುತ್ತಿದ್ದ ಹೆಣ್ಣುಮಕ್ಕಳು ಅದರಿಂದ ಹೊರಬಂದು ಆತ್ಮವಿಶ್ವಾಸದ ಪ್ರಭೆಯಲ್ಲಿ ಮಿಂದರು. ತನಗೆ ಅನ್ನದ ದಾರಿಯಾದ ವೃತ್ತಿಯ ಬಗ್ಗೆ ಅವರಿಗೆ ಪ್ರೀತಿ ಮತ್ತು ಕೃತಜ್ಞತೆಗಳು ಮಾತ್ರವಲ್ಲದೆ, ಲೋಕ ಮತ್ತು ಮೌಲ್ಯ ವ್ಯವಸ್ಥೆಯನ್ನು ಕಟುವಾದ ವಿಮರ್ಶೆಗೂ ಒಳಪಡಿಸಲು ಸಾಧ್ಯವಾಯಿತು. ಇವರು ಬಳಸಿದ ಅಂಕಿತಗಳು ಇದರ ಸ್ಪಷ್ಟ ಸೂಚನೆಗಳು. ಇದರರ್ಥ ವೇಶ್ಯಾವೃತ್ತಿಯನ್ನು ಸಮರ್ಥಿಸಬೇಕೆಂದಲ್ಲ. ಆದರೆ ಹೆಣ್ಣನ್ನು ಶೋಷಣೆಯ ಆತ್ಯಂತಿಕತೆಯಲ್ಲಿ ಇಂಥ ದುರಂತಕ್ಕೆ ತಳ್ಳಿದಾಗಲೂ ಹೆಣ್ಣು ಅದಕ್ಕೂ ತಂದುಕೊಡುವ ಘನತೆ ಎಲ್ಲ ಕಾಲಕ್ಕೂ ಒಂದು ಪಾಠ, ಸೂಳೆ ಸಂಕವ್ವ 'ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ' ಎಂದು ಹೇಳುವಲ್ಲಿ ಅವಳ ವೃತ್ತಿ ನೈತಿಕತೆ, ವ್ಯಕ್ತಿಗತ ನೈತಿಕತೆ ಎರಡೂ ಅಖಂಡವಾಗಿ ಸೇರಿ ಅವಳ ವ್ಯಕ್ತಿತ್ವವನ್ನು ಎತ್ತರಕ್ಕೆ ಏರಿಸುತ್ತವೆಯಲ್ಲ ಇದೇ ಶರಣ ಚಳುವಳಿಯ ಅಪ್ಪಟ ಕ್ರಾಂತಿ, ಮೈಲಿಗೆಯನ್ನೂ ಮಡಿ ಮಾಡಿದ ನಿಜ ಪವಾಡ ಇದು. ಜಗತ್ತಿನ ಯಾವ ಕ್ರಾಂತಿಯಲ್ಲೂ ಇಂಥದನ್ನು ಕಾಣುವುದು ಅಸಾಧ್ಯ.

ಈ ಪ್ರಶ್ನೆಯೇ ಸಾಂಪ್ರದಾಯಿಕ ನೆಲೆಯನ್ನು ಮೀರುವುದು ಎಷ್ಟು ಕಷ್ಟ ಎನ್ನುವುದನ್ನು ಸೂಚಿಸುತ್ತದೆ. ಪುರುಷಾಹಂಕಾರವನ್ನು ಮೀರಿಸುವ ಎನ್ನುವುದಕ್ಕಿಂತ ಪುರುಷಾಹಂಕಾರಕ್ಕೆ ಕಾರಣವೇ ಇಲ್ಲ ಎನ್ನುವುದನ್ನೇ ಈ ಎಲ್ಲ ವಚನಕಾರ್ತಿಯರು ಕಾಣಿಸಿದ್ದು, ಗಂಡು ಒಂದು ಮಾನದಂಡವಾಗಬೇಕಾದ ಅಗತ್ಯವೇ ಇಲ್ಲ. ಅಕ್ಕ, ನೀಲಮ್ಮ, ಮುಕ್ತಾಯಕ್ಕ, ಅಕ್ಕಮ್ಮ, ಸೂಳೆ ಸಂಕವ್ವ, ಅಮುಗೆ ರಾಯಮ್ಮ, ಕದಿರೆ ರೆಮ್ಮವ್ವ ಇವರ ಸಾಧನೆ ಅವರ ವ್ಯಕ್ತಿಗತವಾದ ನೆಲೆಯದ್ದೆಷ್ಟೋ ಅಷ್ಟೇ ಅವುಗಳಿಗೆ ಸಾಮುದಾಯಿಕ ಮತ್ತು ಪ್ರಾತಿನಿಧಿಕ ಮಹತ್ವವೂ ಇದೆ. ಹೆಣ್ಣು ನಡೆಯಬೇಕಾದ ದಾರಿಯನ್ನು ಕಟ್ಟಿ ಬೆಳೆಯಿಸಿದವರು ಇವರು. ಈ ದೃಷ್ಟಿಯಿಂದ ಇವರು 'ಮೊದಲಗಿತ್ತಿ'ಯರು.

ನಿಜವೆಂದರೆ ವ್ಯಕ್ತಿಸ್ವಾತಂತ್ರ್ಯವನ್ನು ಅದರ ಆತ್ಯಂತಿಕ ನೆಲೆಯಲ್ಲಿ ಒಪ್ಪಿ ಪ್ರತಿಪಾದಿಸಿದ

ವಚನಕಾರರು ಗಂಡ ಹೆಂಡತಿ ಇಬ್ಬರೂ ಒಂದೇ ರೀತಿಯಲ್ಲಿ ಆಲೋಚಿಸುವುದನ್ನು ಒಂದು ಆದರ್ಶವಾಗಿ ಮಂಡಿಸಿದರು ಎಂದು ಹೇಳಲಾಗದು. ಪರಸ್ಪರ ಗೌರವದಲ್ಲಿ ಗಂಡ ಹೆಂಡತಿ ಬದುಕಬೇಕು ಎನ್ನುವುದನ್ನು ಇವರು ಹೇಳಿದರು. ಯಾರೂ ಯಾರ ಮೇಲೂ ಯಾಜಮಾನಿಕೆ ನಡೆಸದೇ ಅವರವರ ಸ್ಪೇಸ್‌ನ್ನು ಕೊಡಬೇಕಾದ್ದೇ ಬಹುಶಃ ವಚನಕಾರರ ನಿಲುವು. ಇಂದಿನ ಸಾಂಸಾರಿಕ ವಿಘಟನೆಯು ಬದಲಾಗಲೇಬೇಕಾದ ಮೌಲ್ಯವ್ಯವಸ್ಥೆಯು ಹಾಯಬೇಕಾದ ಅಗ್ನಿದಿವ್ಯದಂತೆ ಕಾಣಿಸುತ್ತದೆ. ವಿಚಾರಗಳ ಭಿನ್ನತೆಯನ್ನಿಟ್ಟುಕೊಂಡೂ ಬದುಕಬಹುದಾದ ಮನೋವಿನ್ಯಾಸದ ಸೃಷ್ಟಿಯೇ ವಿಘಟನೆಯನ್ನು ದಾಟಲು ಇರುವ ದಾರಿ.

ಕನ್ನಡಕ್ಕೆ ಮಾತ್ರವಲ್ಲ ವಿಶ್ವಕ್ಕೇ ಈ ದೃಷ್ಟಿಯಿಂದ ವಚನಕಾರ್ತಿಯರು ಅಭೂತಪೂರ್ವವಾದ ಮಾದರಿಯೊಂದನ್ನು ಕಟ್ಟಿಕೊಟ್ಟಿದ್ದಾರೆ. ಮುಟ್ಟಿದ್ದೆಲ್ಲ ಚಿನ್ನವಾಗುವ ಮಿಥ್‌ನಂತೆ (myth) ವಚನಕಾರ್ತಿಯರು ಮಿಡಿದದ್ದೆಲ್ಲ ಕಾವ್ಯವಾದಂತೆ ಭಾಸವಾಗಿ, ಅವರ ವಚನಗಳನ್ನು ಓದಿದಷ್ಟೂ ಬೆರಗು ಹುಟ್ಟುತ್ತದೆ. ಅನುಭವದ ಹೊಸತನ, ಅದಕ್ಕೆ ಒದಗಿ ಬಂದ ಹೊಸ ಭಾಷೆ, ತೀವ್ರತೆ ಮತ್ತು ಪಾರದರ್ಶಕ ಪ್ರಾಮಾಣಿಕತೆಯಿಂದಾಗಿ ಮತ್ತು ಕನ್ನದ ಅದೃಷ್ಟವೋ ಎನ್ನುವಂತೆ ಇವರಲ್ಲಿದ್ದ ಪ್ರತಿಭೆ ಎಲ್ಲವೂ ಸೇರಿ ಅಪ್ಪಟ ಕಾವ್ಯವೊಂದು ಸೃಷ್ಟಿಯಾಯಿತು. ಭಾಷೆಯನ್ನು ಕುರಿತಂತೆ ಹೆಣ್ಣಿಗೆ ವಿಧಿಸಲಾಗಿದ್ದ ಎಲ್ಲ ಬಗೆಯ ನಿರ್ಬಂಧಗಳನ್ನು ಅನಾಯಾಸವಾಗಿ ಮೀರಿದ ವಚನಕಾರ್ತಿಯರು ಅನುಭವದ ಅಭಿವ್ಯಕ್ತಿಯ ವಿಷಯದಲ್ಲೂ ಇದ್ದು ಇದೇ ಮಾದರಿಯನ್ನು ಅನುಸರಿಸಿದರು. ಆದ್ದರಿಂದಲೇ ವಚನಕಾರ್ತಿಯರಿಗೆ 'ಗಂಡು ಭಾಷೆ'ಯನ್ನು 'ಹೆಣ್ಣು ಭಾಷೆ'ಯಾಗಿ ರೂಪಾಂತರಿಸಿಕೊಳ್ಳಲು ಸಾಧ್ಯವಾಯಿತು.

'ಸಮಕಾಲೀನ ಸ್ತ್ರೀವಾದಿ ಚಿಂತನೆಗಳು ಈಗಷ್ಟೇ ತಲುಪುತ್ತಿರುವ ನಿಲುವು ಮತ್ತು ಧೋರಣೆಗಳಿಗೆ ಹನ್ನೆರಡನೆಯ ಶತಮಾನದ ವಚನಕಾರ್ತಿಯರು ತಲುಪಿದ್ದರು ಎನ್ನುವುದೊಂದು ಅಭೂತಪೂರ್ವ ಸಂಗತಿ. ನೀಲಮ್ಮ ಪ್ರಮಾಣು' ಎನ್ನುತ್ತಾಳೆ. ಇದು 'ಸ್ತ್ರೀವಾದಿ ಚಿಂತನೆ ಪ್ರತಿಪಾದಿಸುವ' ಸ್ವ ಅಧಿಕೃತತೆಗೆ ಸಂವಾದಿಯಾಗಿದೆ. ಅರುಹನರಿಯಲು ಕುರುಹು ಮರೆಯಲೇಬೇಕು ಎನ್ನುವುದಾಗಲೀ, ನನ್ನನಾರೂವರಿಯರು ಎನ್ನುವುದಾಗಲೀ, ಎನ್ನ ಕಟ್ಟೊಳಗಣ ಕಟ್ಟಿಗೆಯ ನಾನೇ ಮುರಿಯಬೇಕು ಎನ್ನುವುದಾಗಲೀ ವಚನಕಾರ್ತಿಯರ ಬೌದ್ಧಿಕ ಪಾರಮ್ಯವನ್ನು, ಸ್ಪಷ್ಟತೆಯನ್ನು, ಮನೋವಿನ್ಯಾಸದ ಪಲ್ಲಟವನ್ನು ಸಜ್ಜುಗೊಳಿಸಿ ಕೊಂದ ಭಾವಲೋಕವನ್ನು ಸಂಕೇತಿಸುತ್ತವೆ. ಸ್ತ್ರೀವಾದಿ ಚಿಂತನೆಗಳು ಕಲಿಯಬೇಕಾದ ಪಾಠಗಳಾಗಿ, ಪ್ರಾಯೋಗಿಕ ಮಾದರಿಗಳಾಗಿ ವಚನಕಾರ್ತಿಯರಿದ್ದಾರೆ.

ಕೊನೆಯಲ್ಲಿ ನಾವೆಲ್ಲರೂ ಹಾಕಿಕೊಳ್ಳಬೇಕಾದ ಅಪ್ರಿಯ ಪ್ರಶ್ನೆಯೊಂದಿದೆ. ವಚನ ಚಳುವಳಿಯ ಬಗ್ಗೆ ಇನ್ನಿಲ್ಲದ ಪ್ರೀತಿ, ಅಭಿಮಾನದಿಂದ ನಾವು ಮಾತನಾಡುತ್ತೇವೆ.

ವಚನ ಪರಂಪರೆಯ ಉತ್ತರಾಧಿಕಾರಿಗಳೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ನಾವು ಅದರ ಉತ್ತರದಾಯಿತ್ವವನ್ನು ಹೊತ್ತಿದ್ದೇವೆಯೆ? ಉತ್ತರಾಧಿಕಾರಿಗಳ ಹೊಣೆಯನ್ನು ನಾವು ಸಮರ್ಪಕವಾಗಿ ನಿಭಾಯಿಸಿಲ್ಲ ಎನ್ನುವುದಕ್ಕೆ ನಮ್ಮ ಸಮಕಾಲೀನ ಸಂದರ್ಭಗಳೇ ಸಾಕ್ಷಿಯಾಗಿವೆ. ಜಾತಿಯ ವಿಷವನ್ನು ವೃತ್ತಿಯ ಅಮೃತವಾಗಿ ಪರಿವರ್ತಿಸಿದ ಶರಣರ ಎದುರಿಗೆ, ಇನ್ನೂ ಜಾತಿವ್ಯವಸ್ಥೆಯನ್ನು ಬೇಕಾಗಿ, ಬೇಡವಾಗಿ ಬೆಂಬಲಿಸುತ್ತಿರುವ ನಾವು ಕುಬ್ಜರಾಗಿಬಿಟ್ಟಿದ್ದೇವೆ. ಆತ್ಮಶೋಧ, ಆತ್ಮಪರಿವರ್ತನೆ ಮತ್ತು ಆತ್ಮಗೌರವಗಳು ಶರಣರ ಮೂಲಮಂತ್ರಗಳು. ಇವುಗಳ ಜೊತೆ ಜೀವ ಕೊರಳ ಸಖ್ಯವನ್ನು ಬೆಳೆಯಿಸಿ ಕೊಳ್ಳುವುದು ಈ ಹೊತ್ತಿನ ಅಗತ್ಯವೂ ಹೌದು, ಅನಿವಾರ್ಯತೆಯೂ ಹೌದು.

ದಲಿತರ ಮತ್ತು ಮಹಿಳೆಯರ ಸವಾಲುಗಳು ಪರಿಹಾರ ಕಾಣದ ಹೊರತು, ಮತಾಂಧತೆ ಮತ್ತು ಅದರ ಕ್ರೌರ್ಯದ ನೂರು ರೂಪಗಳು ನಿವೃತ್ತವಾಗದ ಹೊರತು ಈ ಜಗತ್ತಿನಲ್ಲಿ ಶಾಂತಿ ಸಮಾಧಾನಗಳು ನೆಲೆಸುವುದು ಸಾಧ್ಯವಿಲ್ಲ. ಶರಣರ ಪರಂಪರೆ ಯವರು ನಾವು ಎಂದು ಇನ್ನಿಲ್ಲದ ಹೆಮ್ಮೆ, ಸಂತೋಷಗಳಿಂದ ಘೋಷಿಸಿಕೊಳ್ಳುವ ನಾವು ಇಂದು ಮಾತಿನಿಂದ ಕೃತಿಗೆ ಇಳಿಯಬೇಕಾದ ತುರ್ತಿದೆ. ಎದೆಯ ದನಿಯ ಶರಣ ಧರ್ಮವನ್ನು ಜನರ ಧರ್ಮವಾಗಿಸುವ ಜರೂರಿದೆ. ಸಮುದಾಯದ ಪ್ರತಿ ನಮ್ಮ ನೈತಿಕ ಜವಾಬ್ದಾರಿಯನ್ನು ಇನ್ನಾದರೂ ನಾವು ಹೊರಬೇಕು.

ತುಸು ಭಾವುಕವಾಗಿ ನನ್ನ ಮಾತುಗಳನ್ನು ಮುಗಿಸುವುದಾದರೆ, ಅಸಹಿಷ್ಣುತೆಯ, ಅಮಾನವೀಯತೆಯ ರೋಗಕ್ಕೆ ತುತ್ತಾಗಿರುವ ಮಾನವ ಸಮುದಾಯಕ್ಕೆ ಸಹಿಷ್ಣುತೆ ಮತ್ತು ಪ್ರೀತಿಯೇ ಮದ್ದು. ಈ ಮದ್ದು ಶರಣ ಚಳುವಳಿಯಲ್ಲಿದೆ. ಆದರೆ, ಮದ್ದನ್ನು ಮೊದಲು ನಾನು, ನಾವು ಕುಡಿದು ಆಮೇಲೆ ಬೇರೆಯವರಿಗೆ ಕೊಡಬೇಕು.

□

ಶಿವನೆ ಶಿವಭಕ್ತನಾಗಿ ಬಂದ ಲೋಕಹಿತಾರ್ಥ
ಶಿವನೆ ಶಿವರಹಸ್ಯವ ಬೋಧಿಸಲೆಂದು ಗುರುವಾಗಿ ಬಂದು
ಲಿಂಗದ ಕಳೆಯನರುಹಿದ ಲೋಕಹಿತಾರ್ಥ
ಶಿವನೆ ಚರವೇಷದಲ್ಲಿ ಬಂದು
ಅಂಗ ಮೊದಲು, ಮನವೆ ಕಡೆಯಾದ ಪದಾರ್ಥ
ದಾಸೋಹದಲ್ಲಿ ಸವೆಯಲೆಂದು ಬಂದ ಲೋಕಹಿತಾರ್ಥ
ಶಿವನೆ ಮಂತ್ರತಂತ್ರಯಂತ್ರೋಪಕರಣವಾಗಿ ಬಂದ ಲೋಕಹಿತಾರ್ಥ
ಇದರಂಗಸಂಗವ ಲಿಂಗಸಂಗಿಗಳು ಬಲ್ಲರು
ಅನಂಗಸಂಗಿಗಳೆತ್ತ ಬಲ್ಲರಯ್ಯಾ
ಅಮರೇಶ್ವರಲಿಂಗದನುವನರಿದ ಸಂಗನಬಸವಣ್ಣಾ ?

**– ಆಯ್ದಕ್ಕಿ ಮಾರಯ್ಯ**

# ಕನ್ನಡಮ್ಮನ ನಿಶ್ಯಬ್ದದಳಲನ್ನು ಆಲಿಸೋಣ...

**ವೆಂಕಟೇಶ ಕೆ. ಜನಾದ್ರಿ**

**ಕ**ನ್ನಡಮ್ಮ ಚಿಂತಾಕ್ರಾಂತಳಾಗಿ ತನ್ನ ಮಕ್ಕಳೊಡನೆ ಸುಖಿಯಾಗಿ ಕಾಲ ಕಳೆಯಬೇಕಿದ್ದ ಕನ್ನಡಮ್ಮನ ಮನೆಯಲ್ಲಿಂದು ನೆಮ್ಮದಿ ಇಲ್ಲ. ಕನ್ನಡಮ್ಮನ ಕಣ್ಣಲ್ಲಿ ಕಂಡು ಕಾಣದಂತ ಜಿನುಗು ಹನಿಗಳಲ್ಲಿ ಅಪಾರ ನೋವು ಮಡುಗಟ್ಟಿದೆ. ಆಕೆಯ ನಿಶ್ಯಬ್ದದಳಲನ್ನು ಕೇಳಿಸಿಕೊಳ್ಳುವವರಾರು? ಕರ್ನಾಟಕದ ರಾಜ್ಯೋತ್ಸವದ ಸಂದರ್ಭದಲ್ಲಿ ಹಲವರು ಈ ನಾಡು, ನುಡಿ, ಕನ್ನಡದ ಸ್ಥಿತಿಗತಿ ವಿಷಯ ಚರ್ಚೆಗೆ ಬಂದಾಗ ಈ ನಾಡಿನ ಏಕೀಕರಣದಿಂದಲೇ ಮಾತನ್ನು ಆರಂಭಿಸುತ್ತಾರೆ. ಈ ನಾಡಿನ ಕನ್ನಡಿಗರಲ್ಲಿ ಮಾತಿಗೇನೂ ಕೊರತೆ ಇಲ್ಲ. ಕನ್ನಡ ನಾಡನ್ನು, ಭಾಷೆಯನ್ನು ಕಟ್ಟಿ ಬೆಳೆಸುವಲ್ಲಿ ನುಡಿಗಿಂತ ನಡೆ ಇಂದು ಬಹಳ ಅವಶ್ಯಕವಿದೆ. ಕನ್ನಡಮ್ಮನ ಮನೆಯ ಮಕ್ಕಳ ಸಂಭ್ರಮವೇ ಆಗಬೇಕಿದ್ದ ರಾಜ್ಯೋತ್ಸವದ ಸಂದರ್ಭದಲ್ಲಿ ನಾಡಿನ ಕನ್ನಡದ ಪರಂಪರೆಯನ್ನು ಅವಲೋಕಿಸ ಬೇಕಾಗುತ್ತದೆ.

ನನ್ನ ದೃಷ್ಟಿಯಲ್ಲಿ **“ಕರ್ನಾಟಕ ಏಕೀಕರಣವೆಂದರೆ, ಅದು ಏಕೀಕರಣವಷ್ಟೇ ಅಲ್ಲ ಕರ್ನಾಟಕದ ಮತ್ತು ಕನ್ನಡದ ಸುಧಾರಣೀಕರಣ”**ವೆಂದು ನಾ ಭಾವಿಸುವೆ. ಇಲ್ಲಿ ಕೇವಲ ಕನ್ನಡ ನಾಡಿನ ಭೂಪ್ರದೇಶವನ್ನು ಕನ್ನಡ ಭಾಷೆಯ ಆಧಾರದ ಮೇಲೆ ಒಗ್ಗೂಡಿಸುವುದಲ್ಲ. ಒಂದು ನಾಡೆಂದರೆ ಅದು ಕೇವಲ ಭೌತಿಕ ಭೂಪ್ರದೇಶವಲ್ಲ. ಅಲ್ಲಿ ಒಂದಿಷ್ಟು ಮನಸ್ಸುಗಳಿವೆ, ಒಂದಿಷ್ಟು ಬದುಕುಗಳಿವೆ. ಇವುಗಳಿಂದೊಡಗೂಡಿದ ಒಂದು ಪರಂಪರೆಯೇ ಇದೆ. ಅದು ಭಾಷೆಯಿಂದ, ಭಾವೈಕ್ಯತೆಯಿಂದ, ಸಂಸ್ಕೃತಿಯಿಂದ, ಪರಂಪರೆಯಿಂದ ಎಲ್ಲಾ ಕನ್ನಡದ ಮನಸ್ಸುಗಳನ್ನು ಸಮಗ್ರವಾಗಿ ಒಗ್ಗೂಡಿಸುವಿಕೆಯಾಗಿದೆ. ಗಟ್ಟಿಯಾಗಿಡಿದಿಟ್ಟುಕೊಂಡಿದೆ. ಇಂತಹ ಒಂದು ಒಗ್ಗೂಡುವಿಕೆಗೆ ಏಕೀಕರಣದ ರೂವಾರಿಗಳು ಅವಿರತ ಪ್ರಯತ್ನಪಟ್ಟು ಈ ನಾಡನ್ನು ಸುಂದರವಾಗಿ ರೂಪಿಸಿದ್ದಾರೆ. ಅವರೆಲ್ಲರ ಒಟ್ಟು ಪರಿಶ್ರಮ ಫಲವೆಲ್ಲವೂ ಸತ್ಪಾತ್ರಕ್ಕೆ ಸಲ್ಲಬೇಕಲ್ಲವೇ? ಆದರೆ ಇಂದು ಆಂಗ್ಲ ಭಾಷೆಯ ಪ್ರಭಾವ ಮತ್ತು ಆರ್ಭಟಗಳ ಮಧ್ಯೆ ಕನ್ನಡ ನಲುಗುತ್ತಲಿದೆ. ಕನ್ನಡಮ್ಮ ಚಿಂತಿತಳಾಗಿದ್ದಾಳೆ, ಗದ್ಗದಿತಳಾಗಿದ್ದಾಳೆ. ತನ್ನ ಮತ್ತು ತನ್ನ ಮಕ್ಕಳ ಈ ಬಗೆಯ

ಶೋಚನೀಯತೆಗೆ ಅಕ್ಷರಶಃ ಕಣ್ಣೀರಾಗಿದ್ದಾಳೆ. ಶಬ್ದವಿಲ್ಲದ ಆ ಅಮ್ಮನಳಲು ಯಾರಿಗೆ ಕೇಳುತ್ತಿದೆ? ಕೇಳಿಸಿಕೊಳ್ಳಬೇಕಾದವರು ಏನು ಮಾಡುತಿದ್ದಾರೆ? ಗೊತ್ತಿಲ್ಲ.

ಕನ್ನಡ ನಾಡು ಉದಯಿಸಿದಾಗಲೇ ಕಾವ್ಯಾನಂದರು **"ಹೊತ್ತಿತೋ ಹೊತ್ತಿತೋ ಕನ್ನಡ ದೀಪ, ಮುಗಿಯಿತೋ ಮುಗಿಯಿತು ಶತಮಾನಗಳ ಶಾಪ"** ಎಂದು ಕನ್ನಡದ ದೀಪವನ್ನು ಹೊತ್ತಿಸುವ ಮೂಲಕ ಶತಶತಮಾನಗಳ ಶಾಪವಳಿಯಿತೆಂದು ಮನದುಂಬಿ, ಭಾವದುಂಬಿ ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. ಹಾಗೇ ಪ್ರಜ್ವಲಿಸುತ್ತಿರುವ ಕನ್ನಡದ ದೀಪವನ್ನು ಆರದಂತೆ ನೋಡಿಕೊಳ್ಳುವ ಜಾಗೃತತನವನ್ನು ಉಳಿಸಿಕೊಳ್ಳುವುದು ನಮ್ಮ ಇಂದಿನ ಸವಾಲು. ಒಂದರ್ಥದಲ್ಲಿ ಕನ್ನಡವನ್ನು ಆಂಗ್ಲ ಭಾಷೆ ಆಪೋಷನ ತೆಗೆದುಕೊಂಡುಬಿಟ್ಟಿದೆ. ಒಂದೊಮ್ಮೆ ನನಗನಿಸುತ್ತದೆ ಶಿಶುನಾಳ ಷರೀಫರು **"ಕೋಡಗನ ಕೋಳಿ ನುಂಗಿತ್ತ"** ಎಂದಂತೆ ಒಂದು ಕೋಳಿ ತನಗಿಂತ ದೊಡ್ಡದಾದ ಕೋಡಗನನ್ನೇ ನುಂಗಿಬಿಡುವಂಥ ಭಾವ. ವಾಸ್ತವದಲ್ಲಿ ಇದು ಸಾಧ್ಯನಾ? ಎಂಬ ಬೆರಗು ನಮ್ಮನ್ನಾವರಿಸುತ್ತೆ. ಆ ಒಂದು ಬೆರಗಿನೊಂದಿಗೆ ಅವಲೋಕಿಸಿದಾಗ, ಕೇವಲ ಐದು ನೂರು ವರ್ಷದ ಇತಿಹಾಸವಿರುವ ಆಂಗ್ಲ ಭಾಷೆಯು ಎರಡು ಸಾವಿರ ವರ್ಷಕ್ಕೂ ಹೆಚ್ಚಿನ ಭವ್ಯ ಪರಂಪರೆಯ ಕನ್ನಡ ಭಾಷೆಯನ್ನು ನುಂಗಿ ತೇಗುತ್ತಿದೆಯೆಂದರೆ ಆಂಗ್ಲ ಭಾಷೆಯೆಂಬ ಶರೀಫರ ಕವಿತೆಯಲ್ಲಿಯ ಕೋಳಿಯು ಕನ್ನಡ ಭಾಷೆಯೆಂಬ ದೊಡ್ಡ ಕೋಡಗನನ್ನೇ ನುಂಗಿಬಿಟ್ಟಿರುವಂತೆ ತೋರುವುದಿಲ್ಲವೇ? ನೋಡಿ, ಆಂಗ್ಲ ಭಾಷೆಯ ಪ್ರಭಾವ ಹೇಗಿದೆ! ಎಂಬ ದಿಗ್ಭ್ರಮೆಯಾಗುತ್ತದೆ. ಇದಕ್ಕೆಲ್ಲಾ ಕಾರಣ ಈ ನಾಡ ನೇತಾರರ ಮತ್ತು ಕನ್ನಡಿಗರ ಇಚ್ಛಾಶಕ್ತಿಯ ಕೊರತೆಯೊಂದಿಗೆ ಸಹನೆಯೆಂಬ ಉದಾರತೆ ಆಗಿರಬಹುದು. ಈ ಉದಾರತೆಯೇ ಆಂಗ್ಲ ಮತ್ತು ಇತರ ಭಾಷೆಗಳಿಗೆ ಕನ್ನಡವೆಂಬ ಪದಾರ್ಥ ಆಹಾರವಾಗಿಬಿಟ್ಟಿದೆ. ಇಂಥ ಸಂದರ್ಭದಲ್ಲಿ ಸಹನೆ ನಮ್ಮ ದೌರ್ಬಲ್ಯವಲ್ಲವೆಂದು ತೋರಿಸಬೇಕಾದ ಅನಿವಾರ್ಯತೆಯಿದೆ. ಏಕೆಂದರೆ ಇಂಥ ಸಹನೆಯಿಂದ ಪ್ರಯತ್ನವೆಲ್ಲವೂ ನಿಶ್ಫಲವಾಗಬಾರದಲ್ಲವೇ? ಮಕ್ಕಳ ಸಹನೆ ಅಮ್ಮನ ಮನಕ್ಕೆ ಸಾರ್ಥಕ್ಯವಾಗಬೇಕೇ ಹೊರತು ಅದು ಆಕೆಯ ಅಳಲಿಗೆ ಕಾರಣವಾಗಬಾರದೆಂಬ ನಿತ್ಯಸತ್ಯವನ್ನು ಕನ್ನಡಮ್ಮನ ಮಕ್ಕಳಿಂದು ಅರಿತು ನಡೆಯಬೇಕಿದೆ. ಹಾಗಾದಾಗ ಕನ್ನಡಮ್ಮನ ಮೊಗದಲ್ಲೊಂದು ಹೂ ನಗೆ ಅರಳಿಸಲು ಸಾಧ್ಯ.

ನಿಜಾಮರ ಕಾಲದ ಹೈದ್ರಾಬಾದ್ ಕರ್ನಾಟಕ ಭಾಗದ (ಇಂದಿನ ಕಲ್ಯಾಣ ಕರ್ನಾಟಕ) ಭಾಲ್ಕಿ ಮುಂತಾದ ಸ್ಥಳಗಳಲ್ಲಿ ಕೆಲವು ಮಠ, ಶಿಕ್ಷಣ ಸಂಸ್ಥೆಗಳವರು ನಡೆಸುತ್ತಿದ್ದ ಶಾಲೆಗಳ ಮುಂದೆ ಉರ್ದು ಮಾಧ್ಯಮದಲ್ಲಿ ಶಿಕ್ಷಣವೆಂದು ಫಲಕಗಳನ್ನು ಹಾಕಿ, ಒಳಗಡೆ ಕನ್ನಡ ಮಾಧ್ಯಮದಲ್ಲಿ ಪಾಠ ಮಾಡಲಾಗುತ್ತಿತ್ತಂತೆ. ಆದರೆ ಇಂದು ಹೊರಗಡೆ ಕನ್ನಡ ಮಾಧ್ಯಮದ ಫಲಕಗಳನ್ನು ಹಾಕಿ ಒಳಗಡೆ ಆಂಗ್ಲ ಮಾಧ್ಯಮದಲ್ಲಿ ಪಾಠ

ನಡೆಸುತ್ತಿದ್ದಾರೆ. ಪ್ರತಿಯೊಬ್ಬ ಕನ್ನಡಿಗ ಮತ್ತು ವ್ಯವಸ್ಥೆ ಇಂಥ ಅವ್ಯವಸ್ಥೆಗೆ ನಾಚಬೇಕು. ಇತ್ತೀಚಿಗೆ ಕರ್ನಾಟಕದಲ್ಲಿಯೇ ಕನ್ನಡ ಶಾಲೆಗಳನ್ನು ಮುಚ್ಚುವ ಸರ್ಕಾರದ ನೀತಿಯನ್ನು ಪತ್ರಿಕೆಗಳಲ್ಲಿ ಓದಿ ಖೇದವಾಯಿತು. ಹಿಂದೆ ನಮ್ಮ ಬಾಲ್ಯದ ದಿನಗಳಲ್ಲಿ ಸರ್ಕಾರಿ ಶಾಲೆಗಳು ಹೇಗಿದ್ದವು!? ಅಲ್ಲಿ ಕೇವಲ ಅಕಾಡೆಮಿಕ್ ಶಿಕ್ಷಣವಲ್ಲದೇ ಒಂದು ಬದುಕನ್ನು, ಸಂಸ್ಕೃತಿಯನ್ನು ರೂಪಿಸುವಂಥ ವ್ಯವಸ್ಥೆ ಇರುವ ವಿದ್ಯಾ ದೇವಾಲಯಗಳಾಗಿದ್ದವು. ಆದರಿಂದು ಏನಾಗಿವೆ? ಹೊರಗಡೆ ಕೇವಲ ತೋರಿಕೆಗೆ ನನ್ನಮ್ಮ ಕನ್ನಡಮ್ಮ ಆದರೆ ಒಳಗೆ ಇಂಗ್ಲೀಷಮ್ಮ, ಮರಾಠಮ್ಮ, ತೆಲಗಮ್ಮ, ತಮಿಳಮ್ಮ...

ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ನಾನು ಆಂಗ್ಲ ಭಾಷೆಯ ವಿರೋಧಿಯಲ್ಲ. ಆಂಗ್ಲ ಅಥವಾ ಬೇರೊಂದು ಭಾಷೆ ಬೇಡವೇ ಬೇಡವೆಂದಾಗಲೀ, ದೂರುವುದಾಗಲೀ, ದ್ವೇಷಿಸುವುದಾಗಲೀ ನಾನು ಮಾಡುತ್ತಿಲ್ಲ. ಅದು ನನ್ನ ಉದ್ದೇಶವೂ ಅಲ್ಲ. ಆಂಗ್ಲ ಮತ್ತು ಇತರೆ ಭಾಷೆಗಳನ್ನು ಉದ್ಯೋಗದ ಅಥವಾ ಹೊಟ್ಟೆಪಾಡಿನ ಅವಶ್ಯಕತೆಯ ಭಾಷೆಯಾಗಿ ಬಳಸೋಣ, ಆದರೆ ಅವುಗಳ ಭರಾಟೆಯಲ್ಲಿ ಮಾತೃಭಾಷೆಯನ್ನು ಕನ್ನಡಮ್ಮನನ್ನು ಮರೆತುಬಿಡುವುದು, ಉದಾಸೀನ ಮಾಡುವುದು ಯಾವ ನ್ಯಾಯ? ಕನ್ನಡ ನಮ್ಮ ಬದುಕಿನ ಭಾಷೆ, ನಮ್ಮ ನೆಲದ ಭಾಷೆ, ಎಲ್ಲಕ್ಕಿಂತ ಹೆಚ್ಚಾಗಿ ಅದು ನಮ್ಮ ತಾಯಿ ಭಾಷೆ, ಅಮ್ಮನ ಭಾಷೆ, ಆಕೆಯೇ ನಮ್ಮಮ್ಮ. ಆದರೆ ಆಂಗ್ಲದ ಭರಾಟೆಯಲ್ಲಿ ನಮ್ಮಮ್ಮ ಕನ್ನಡಮ್ಮ ನಲುಗುತ್ತಿದ್ದಾಳೆ, ಮರುಗುತ್ತಿದ್ದಾಳೆ. ಇದು ಕನ್ನಡದ, ಕನ್ನಡಿಗರ, ಕರ್ನಾಟಕದ ಮೇಲಾಗುತ್ತಿರುವ ದೊಡ್ಡ ಬಿಕ್ಕಟ್ಟು. ಈ ನಿಟ್ಟಿನಲ್ಲಿ ಕನ್ನಡದ ಮನಸ್ಸುಗಳು ಸ್ವಲ್ಪವೇ ಸ್ವಲ್ಪ ಯೋಚಿಸಿದರೆ ಸಾಕು. ನಮ್ಮಮ್ಮನ ಮನದೊಳಗೊಂದು ಸಂತಸದ ಅಲೆಯನ್ನು ತೇಲಿಸಬಹುದು. ಆಕೆಯ ಕಣ್ಣಾಲೆಯಲ್ಲಿರುವ ನೋವಿನ ಜಿನುಗನ್ನು ಚಿಮ್ಮಿ, ಸಂತಸದ ಬೆಳಕೊಂದು ಮೂಡಿಸೋಣ.

**"ಕತ್ತಲೆಯನ್ನು ದೂಷಿಸುವ ಬದಲು ಒಂದು ಹಣತೆಯನ್ನು ಬೆಳಗಿಸು"** ಎಂಬ ಮಾತೊಂದಿದೆ. ಅವ್ಯವಸ್ಥೆಯನ್ನು, ದುರವಸ್ಥೆಯನ್ನು ದೂಷಿಸುವ ನಾವು ಅದರ ಸರಿಪಡಿಸುವಿಕೆಯತ್ತ ಏಕೆ ಚಿಂತಿಸಬಾರದು? ಯಾರದೋ, ಯಾವುದೋ ಪ್ರಭಾವದಲ್ಲಿ ನಮ್ಮ ಭಾಷೆ ಮಸುಕಾಗಿದ್ದರೆ, ಕತ್ತಲೆಯನ್ನು ಕಳೆಯಲು ಹಣತೆಯನ್ನು ಬೆಳಗಿಸುವ ಮಾದರಿಯಲ್ಲಿ ಮುಸುಕಿದ ಆ ಮಸುಕಿನ ತೆರೆಯನ್ನು ಸರಿಸಲು ನಾವೇಕೆ ಪ್ರಯತ್ನಿಸಬಾರದು? ಏಕೆಂದರೆ ಕನ್ನಡ ಮಾತೃಭಾಷೆಯೆಂದ ಮೇಲೆ ಕನ್ನಡವನ್ನು ಪ್ರೀತಿಸಬೇಕಾಗಿದ್ದು, ಮಮತೆ ತೋರಿಸಬೇಕಾಗಿದ್ದು ಅವಳ ಮಕ್ಕಳಾದ ನಮ್ಮೆಲ್ಲರ ಆದ್ಯ ಕರ್ತವ್ಯವಲ್ಲವೇ? ಕನ್ನಡದ ಅಮ್ಮ ನಮ್ಮ ಬಾಯಿಗಿಡುವ ತುತ್ತು ಬೇಕು, ಅವಳು ಕುಡಿಸುವ ನೀರು ಬೇಕು, ಹಾಯಾಗಿರಲು ಆ ಅಮ್ಮನ ಮಡಿಲು ಬೇಕು. ಆದರೆ ಅಮ್ಮನನ್ನು ಗೌರವಿಸಲು ನಮಗೆ ಮನಸ್ಸಿಲ್ಲ. ಕನ್ನಡದ ಅಮ್ಮನನ್ನು ಪ್ರೀತಿಸಲು, ಗೌರವಿಸಲು

ಒಪ್ಪಿಕೊಳ್ಳಲು ಸುತ್ತೋಲೆಗಳೇಕೆ ಬೇಕು? ಕನ್ನಡ ಕಾವಲು ಸಮಿತಿಯಾಗಲಿ, ರಕ್ಷಣಾ ವೇದಿಕೆಯಾಗಲಿ ಏಕೆ ಬೇಕು? ಕನ್ನಡವನ್ನು ಬಳಸುವುದು ಮತ್ತು ಬೆಳೆಸುವುದು ನಮ್ಮ ಇಚ್ಛಾಶಕ್ತಿಯನ್ನು ಅವಲಂಬಿಸಿದೆ. ಜೊತೆಗೆ ಆಂಗ್ಲ ಭಾಷೆಯನ್ನು ಒಬ್ಬ ಮಿತ್ರ, ಬಂಧುವಿನಂತೆ ಪರಿಗಣಿಸುವ ಸಹೃದಯತೆ ಸಹ ಇಂದೆಮಗೆ ಇರಬೇಕಾಗಿದೆ. ಆಗ ನಮ್ಮನ್ನು ಸಾಕಿ ಸಲುಹಿದ ಕನ್ನಡಮ್ಮನ ಶ್ರಮ ಸತ್ಪಾತ್ರಕ್ಕೆ ಸಲ್ಲಿದಂತಾಗುತ್ತದೆ. ಇಲ್ಲವಾದರೆ, **"ಕನ್ನಡದ ಅನ್ನ ಬೇಕು, ಕನ್ನಡದ ನೆಲ ಬೇಕು, ಕನ್ನಡದ ನೀರು ಗಾಳಿಯೆಲ್ಲವ ಸವಿದು, ಕನ್ನಡಮ್ಮನನ್ನೇ ತಿಂದು ತೇಗಿ ಅನ್ಯಭಾಷೆಯನ್ನೊಗಳುವ ಭಂಡನಿಗೇನೆಂಬೆ ವೆಂಕಟಾದ್ರಿ"** ಎಂಬಂತಾಗುತ್ತದೆ.

ವಿಶೇಷವಾಗಿ ಗಡಿಭಾಗದ ನಮ್ಮ ಯುವಕರು ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಹುಡುಗಿಯರನ್ನು ಮದುವೆಯಾಗಿರುವ ಸಂದರ್ಭದಲ್ಲಿ ಆ ಯುವಕನ ಕೈಹಿಡಿದ ಆ ಹುಡುಗಿಯ ತಾಯಿ ಅಂದರೆ ತೆಲುಗಿನ, ಮರಾಠಿಯ ಅತ್ತೆಯೇ ಇವರಿಗೆ ತಾಯಿಯಾಗಿಬಿಟ್ಟಿದ್ದಾಳೆ. ಕನ್ನಡದ ಹುಡುಗನ ನಿಜವಾದ ಅಮ್ಮ **"ಕನ್ನಡದ ಅಮ್ಮ"** ಇಂದು ಅನಾಥಾಲಯ ಸೇರಿದ್ದಾಳೆ. ಇದು ಒಂದು ಕೌಟುಂಬಿಕ ದೃಷ್ಟಿಯಿಂದ ಆಗಿರುವ ಪಲ್ಲಟ ಮಾತ್ರವಲ್ಲ ಭಾಷೆಯ ದೃಷ್ಟಿಯಿಂದಲೂ ಅವಲೋಕಿಸಿದರೆ ಇಂದು ನಮ್ಮ ಕನ್ನಡ ಭಾಷೆಗೆ ಆಗಿರುವ ಅನಾಥ ಸ್ಥಿತಿಯನ್ನು ಈ ಕನ್ನಡದ ಅನಾಥ ಅಮ್ಮಂದಿರು ಪ್ರತಿನಿಧಿಸುತ್ತಾರೆ. ನಮ್ಮ ಕನ್ನಡದ ಅಮ್ಮ ಈ ನಾಡಿನಲ್ಲಿ ನಿತ್ಯ ಪೂಜೆಗೆ ಭಾಜನಳಾಗಬೇಕು, ನಿತ್ಯ ಉತ್ಸವ ಅವಳಿಗಿರಬೇಕು. ಅದಕ್ಕೆ **"ನಿತ್ಯೋತ್ಸವ ನಿನಗೆ ನಿತ್ಯೋತ್ಸವ"** ಎಂದು ನಿತ್ಯೋತ್ಸವದ ಕವಿ ನಿಸಾರರು ಸಂಭ್ರಮಿಸಿದ್ದಾರೆ. ಈ ನಿತ್ಯೋತ್ಸವ ಕೇವಲ ಹಾಡಿನಲ್ಲಿಯೇ ಉಳಿಯದೇ ನಿತ್ಯದ ವಾಸ್ತವ ಉತ್ಸವವಾಗಬೇಕು. ಕನ್ನಡಮ್ಮ ಆ ಉತ್ಸವದಲ್ಲಿ ಸಂಭ್ರಮ ಪಡುತ್ತಿರಬೇಕು.

ಕವಿ ಹುಯಿಲಗೋಳ ನಾರಾಯಣರಾವ್‌ರವರು **"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು"** ಎಂದಿದ್ದಾರೆ. ಅವರು **"ಉದಯವಾಯಿತು ನಮ್ಮ ಚೆಲವ ಕನ್ನಡ ನಾಡು"** ಎನ್ನಲಿಲ್ಲ. ಏಕೆಂದರೆ ಈ ನಾಡು ಉದಯವಾಗುತ್ತಿರುವುದು ಮತ್ತು ಅಭಿವೃದ್ಧಿ ಹೊಂದುತ್ತಿರುವುದು ಒಂದು ನಿರಂತರ ಕ್ರಿಯೆ. ಅದು ಸತತ ಪ್ರಕ್ರಿಯೆಯಾದ ಕಾರಣ ಅವರು ಉದಯವಾಯಿತು ಎನ್ನದೇ **"ಉದಯವಾಗಲಿ"** ಎಂದಿರುತ್ತಾರೆ. ಕನ್ನಡ ನಾಡು ಪ್ರತಿನಿತ್ಯ ಬೆಳಗಬೇಕು, ಪ್ರಕಾಶಿಸಬೇಕು. ಆ ಮೂಲಕ ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಬೆಳೆಯಬೇಕು. ಇತರ ಭಾಷೆಗಳ ಕುರಿತು ನಮ್ಮ ಮೃದು ಧೋರಣೆಯನ್ನು ಬೇರೆಯುವರು ದುರುಪಯೋಗಪಡಿಸಿಕೊಳ್ಳುವುದು ಕಂಡುಬಂದರೆ ನಾವು ಪ್ರತಿಭಟಿಸೋಣ. ಏಕೆಂದರೆ ಮತ್ತೆ ಹೇಳುತ್ತೇನೆ **"ಸಹನೆ ಕನ್ನಡಿಗರ ದೌರ್ಬಲ್ಯವಲ್ಲ"**. ಕನ್ನಡಿಗರೆಲ್ಲರ ಅಭಿಮಾನ ಪರಿಶ್ರಮವೆಲ್ಲವೂ ನಾಡಿನ ಹಿತಕ್ಕಾಗಿ ಸತ್ಪಾತ್ರಕ್ಕಾಗಿಯೇ ಮೀಸಲಿರಬೇಕು. ಕನ್ನಡಮ್ಮನಿಲ್ಲಿ ಪ್ರತಿ ಕ್ಷಣ ಉಲ್ಲಸಿತಳಾಗಿರಬೇಕು.

ಕವಿರಾಜಮಾರ್ಗದ ಶ್ರೀವಿಜಯ **"ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ನಾಡು ಇತ್ತು"** ಎನ್ನುತ್ತಾರೆ. ಆದರೆ ಇಂದೇನಾಗಿದೆ? ಕನ್ನಡಮ್ಮ ಹರಿದು ಹಂಚಿ ಹೋಗುತ್ತಿದ್ದಾಳೆ. ಹೀಗೆಯೇ ಮುಂದುವರೆದರೆ ಕನ್ನಡ ಭಾಷೆ ಮತ್ತು ಕನ್ನಡ ನಾಡು ಮುಂದಿನ ಪೀಳಿಗೆಯವರ ಕಾಲಕ್ಕೆ ಸಂಪೂರ್ಣ ಮರೆಯಾಗಿಹೋಗಿಬಿಡುತ್ತದೆ. ಇಂಥ ಬಿಕ್ಕಟ್ಟುಗಳ ಬಗ್ಗೆ ನಾವಿಂದು ಚಿಂತಿಸಬೇಕಾಗಿದೆ, ಯೋಜನೆಗಳನ್ನು ರೂಪಿಸಬೇಕಾಗಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿರುವ ನಮ್ಮ ಕನ್ನಡ ಭಾಷೆಯ ಭವ್ಯ ಪರಂಪರೆಯ ಕುರಿತು ನಮಗೆ ಹೆಮ್ಮೆ ಇರಬೇಕು. ಕನ್ನಡಕ್ಕಿರುವ ಬಿಕ್ಕಟ್ಟುಗಳ ಬಗ್ಗೆ ಚಿಂತಿಸಬೇಕು. ಕನ್ನಡಕ್ಕಿರುವ ಶಕ್ತಿಯ ಕುರಿತು ನಮಗೆ ಅರಿವೇ ಇಲ್ಲ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಲಭಿಸಿರುವ ಅವಕಾಶವನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿದೆ. ಈ ದಿಶೆಯಲ್ಲಿ ನಮ್ಮ ಸಂಕುಚಿತತೆಯನ್ನು ಬದಿಗಿಟ್ಟು ಸಮಗ್ರವಾಗಿ ಎಲ್ಲಾ ಕನ್ನಡಿಗರು ಕನ್ನಡದ ತೇರನೆಳೆಯಲು ಕೈ ಜೋಡಿಸಬೇಕಾಗಿದೆ. ತೇರನೆಳೆಯುವಾಗ ಕೆಲವೇ ಕೈಗಳು ತಮ್ಮ ಶಕ್ತಿಯನ್ನು ವಿನಿಯೋಗಿಸುತ್ತವೆ. ಹಲವು ಕೈಗಳು ತೋರಿಕೆಯ ಕೈಗಳಾಗಿರುತ್ತವೆಯಾದರೂ ಈ ತೋರಿಕೆಯೂ ಸಹ ಕನ್ನಡಮ್ಮನ ಸಂಭ್ರಮಕ್ಕೆ ನೆರವಾಗುತ್ತದೆ. ಕನ್ನಡದ ತೇರಿನ ಸಾಗುವಿಕೆಗೆ ನಾವುಗಳೆಲ್ಲ ಕೈಯಾಗುವುದು ಮುಖ್ಯ. ನಮ್ಮ ಕೈ ಸ್ಪರ್ಷವೇ ಸಾಕು ಕನ್ನಡಮ್ಮನನ್ನು ಪುಳಕಗೊಳಿಸಲು, ಸುಖಿಗೊಳಿಸಲು.

ಬರಗಾಲದ ಒಂದು ದಿನ ಆಂಗ್ಲ ಮಾಧ್ಯಮದಲ್ಲಿ ಓದುತ್ತಿರುವ ಮಗುವೊಂದು **"ರೇನ್ ರೇನ್ ಗೋ ಅವೇ"** ಎಂದು ಹೇಳುತ್ತಿದ್ದರೆ ಇಂಥಹ ಬರಗಾಲದಲ್ಲಿ **'ಮಳೆ ನೀ ಸುರಿಯಬೇಡ ಹೋಗು ಹೋಗು'** ಎಂದು ಹೇಳುವುದೇ? ಇದರಿಂದ ಎಂಥವರ ಮನಸ್ಸಿಗಾದರೂ ನೋವಾಗುತ್ತದೆ. ಆದರೆ ಅದೇ ಕನ್ನಡದ ಮಗು ಮಳೆ ಸುರಿಯುವಾಗ ಆನಂದವಾಗಿ ಮಳೆಯ ಹನಿಗಳ ಜೊತೆಗೆ ನರ್ತನ ಮಾಡುತ್ತಾ, ಆಟವಾಡುತ್ತಲೇ **"ಹುಯ್ಯೋ ಹುಯ್ಯೋ ಮಳೆರಾಯ", "ಮಳೆ ಬಂತು ಮಳೆ ಕೊಡೆ ಹಿಡಿದು ನಡೆ"** ಎನ್ನುತ್ತದೆಯಲ್ಲ ಇದು ಕನ್ನಡ ಭಾಷೆಯ ಶಕ್ತಿ. ಕನ್ನಡ ಮಗುವಿನ ಸಕಾರಾತ್ಮಕ, ಗುಣಾತ್ಮಕ ಚಿಂತನೆಯ ಕ್ರಮ. ಏಕೆಂದರೆ ಆ ಮಗುವಿನ ಕನ್ನಡಮ್ಮ ಕಲಿಸಿದ ಬದುಕಿನ ಪಾಠವದು.

ಹೀಗೆ ಯೋಚಿಸುತ್ತಿದ್ದರೆ ಥಟ್ಟನೆ ನೆನಪಿಗೆ ಬರೋದು ಕನ್ನಡ ಜನಪದದ ಕವಿಯೊಬ್ಬ ರಚಿಸಿರುವ **"ಗೋವಿನ ಹಾಡು"**. ಇದು ಎಂಥ ಉದಾತ್ತತೆಯನ್ನು ಹೊಂದಿದೆ. 'ಸತ್ಯಕ್ಕೆ ಸಾವಿಲ್ಲ' ಎಂಬುವುದನ್ನು ಈ ಕನ್ನಡದ ಕಥನ ಕಾವ್ಯ ಬಿಂಬಿಸುತ್ತದೆ. ಬಹುಶಃ ಬೇರಾವ ಭಾಷೆಯಲ್ಲಿಯೂ ಇಂತಹ ಜನಪದರ ಹಾಡು ರಚನೆಯಾಗಿಲ್ಲವೆಂದು ನಾನಂದುಕೊಂಡಿರುವೆ. ಹಾಗೆ ನಾವು ನಮ್ಮತನದೊಂದಿಗೆ ಇನ್ನೊಬ್ಬರ ಬದುಕಿನ ಬಗೆಗೂ ಚಿಂತಿಸೋಣ. ಇಂದು ಕನ್ನಡವನ್ನು ಕನ್ನಡಿಗರಿಂದಲೇ ಕಾಪಾಡಿಕೊಳ್ಳಬೇಕಾಗಿರು ವುದರಿಂದ ನಾವು ಆಂಗ್ಲ ಮತ್ತಿತರ ಭಾಷೆ ಮತ್ತು ಭಾಷಿಕರ ಬಗ್ಗೆ ಜಾಗರೂಕರಾಗಿರ

ಬೇಕಾಗಿದೆ. ನಮ್ಮ ಕನ್ನಡದ ಅಮ್ಮನನ್ನು ನಮ್ಮೊಂದಿಗೆ ಬದುಕಿಸಿಕೊಳ್ಳುವ ಮತ್ತು ಆಕೆಯೊಂದಿಗೆ ನಿತ್ಯವೂ ಸುಖಿಯಾಗಿ, ಅವಳ ಮಡಿಲ ಮಕ್ಕಳಾಗಿ ನಾವು ನಲಿಯು ವಂತಾಗಬೇಕಿದೆ. ಆ ಪ್ರಯತ್ನ ಇಂಥ ರಾಜ್ಯೋತ್ಸವದ ದಿನದಂದೇ ಪ್ರಯತ್ನಿಸೋಣ. ಏಕೆಂದರೆ ಈ ದಿನ ಕನ್ನಡಮ್ಮನ ಜನ್ಮದಿನವಲ್ಲವೇ?

ನನಗಿಂದು ಮತ್ತೆ ನೆನಪಾಗುತ್ತಿದೆ, ಜಿ.ಪಿ. ರಾಜರತ್ನಂರವರು ಹೇಳುವಂತೆ, **"ನರಕಕ್ ಇಳ್ಸಿ, ನಾಲ್ಗೆ ಸೀಳ್ಸಿ ಬಾಯ್ ಒಲೆಸಾಕಿದ್ರೂನೆ, ಮೂಗ್ನಲ್ ಕನ್ನಡ ಪದವಾಡ್ತೇನಿ ನನ್ ಮನಸ್ನ ನೀ ಕಾಣೆ"** ಎಂತಹ ಆತಂಕಕಾರಿ ಸ್ಥಿತಿಯಲ್ಲಿಯೂ ನಮ್ಮ ಕನ್ನಡತನವನ್ನು ನಾವು ಬಿಡಬಾರದು. ಕುವೆಂಪು ಅವರಂತೂ ಕನ್ನಡದ ಜೊತೆ ಅವಿನಾಭಾವತೆಯನ್ನು ಕಾಣುತ್ತಾರೆ **"ಕನ್ನಡವೆನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು"** ಕನ್ನಡದ ಕೆಲಸವೆಂದರೆ ಅದು ಕೆಲಸವೆಂದು ಭಾವಿಸದೇ ನಮ್ಮ ಕಾಯಕವೆಂದು ಪೂಜಿಸಿಕೊಳ್ಳುವ ಮೂಲಕ ಅದು ನಮ್ಮ ಸಂಭ್ರಮವೆಂದುಕೊಳ್ಳಬೇಕೆನ್ನುತ್ತಾರೆ. ಜೊತೆಗೆ ಕನ್ನಡ ಕನ್ನಡಿಗರಿಗಾಗಿ, ಕನ್ನಡಿಗ ಕನ್ನಡಕ್ಕಾಗಿ, ಕನ್ನಡ ಮತ್ತು ಕನ್ನಡಿಗರು ಕರ್ನಾಟಕಕ್ಕಾಗಿ ಸಂಪರ್ಕ ಸೇತುವೆಯಾಗಬೇಕು. ಪರಸ್ಪರರು ದ್ವೀಪವಾಗದೇ ದೀಪವಾಗಬೇಕು ಆಗ ಮಾತ್ರ ಚಂಪಾರವರ ಕಳಕಳಿ **"ಕನ್ನಡ ಕನ್ನಡ ಬನ್ನಿ ನನ್ನ ಸಂಗಡ"** ಎಂಬಂತೆ ಕನ್ನಡಕ್ಕೆ ಕನ್ನಡ ನಾಡಿಗೆ ಯಾವುದೇ ಸಂದರ್ಭದಲ್ಲಿ ಸಂಕಟ, ಬಿಕ್ಕಟ್ಟು ಎದುರಾದಾಗ ನಾವೆಲ್ಲಾ ಒಂದಾಗಬಹುದು, ಒಬ್ಬರ ಸಂಗಡ ಒಬ್ಬರು ಕೈಜೋಡಿಸಬೇಕಾಗುತ್ತದೆ. ನಮ್ಮೀ ಕೈ ಜೋಡಿಸುವಿಕೆ ಕನ್ನಡದ ಅಮ್ಮನಿಗೊಂದು ಪ್ರೀತಿಯ ಮಮತೆಯ ಬಂಧ, ಬಾಂಧವ್ಯದ ಬೆಸುಗೆ.

ಕೊನೆಯಲ್ಲಿ ಮತ್ತೆ ಮತ್ತೆ ನೆನಪಾಗುವ ಕೆಲ ಸಾಲುಗಳು, ಗೋಪಾಲಕೃಷ್ಣ ಅಡಿಗರ **"ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ"** ಎಂಬಂತೆ, ಕನ್ನಡವು ಒಂದು ಭಾಷೆಯಾಗಿ ನಮಗೆ ಬದುಕನ್ನು ಕೊಟ್ಟಿದೆ. ಆದರೆ ಬದುಕಿನ ಭಾಷೆಯನ್ನು ಬಿಟ್ಟು ನಾವು ಬೇರೆಡೆ ವಾಲಿರುವುದು, ವಾಲುತ್ತಿರುವುದು ಎಂತಹ ನಿಯತ್ತು? ಇದಕ್ಕೆ ನಮ್ಮಲ್ಲಿ ಉತ್ತರವಿಲ್ಲ. **"ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯಶಿವ, ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವವರನು ಕೂಡಿಸಿ ಒಲಿಸು, ಹೊಟ್ಟೆಯ ಕಿಚ್ಚಿಗೆ ಕಣ್ಣೀರು ಸುರಿಸು, ಒಟ್ಟಿಗೆ ಬಾಳಲಿ ತೆರೆದಲೆ ಹರಸು"** ಎಂದ ಕುವೆಂಪು ಆಶಯದಂತೆ ಕನ್ನಡಿಗರ ಜಾಗೃತ ಮನಸ್ಸುಗಳನ್ನು ಒಗ್ಗೂಡಿಸಿ ಕನ್ನಡದ ತೇರನ್ನು ಎಳೆಯಬೇಕಾಗಿದೆ. ನನ್ನ ಭಾಷೆ, ನನ್ನ ಜನ, ನನ್ನ ದೇಶ ಎನ್ನದ ಮನುಷ್ಯ ಮನುಷ್ಯನೇ ಅಲ್ಲ ಎಂಬುದು ನೊಂದ ಕನ್ನಡಿಗನ ಮನದ ಅಳಲು. ಕನ್ನಡವನ್ನು ಕಟ್ಟುವುದೆಂದರೆ, ಪ್ರೀತಿಸುವುದೆಂದರೆ ಕನ್ನಡಿಗರ ಮನಸ್ಸುಗಳನ್ನು ಕಟ್ಟಿದಂತೆ, ಕನ್ನಡ ನಾಡನ್ನು ಕಟ್ಟಿದಂತೆ, ಈ ದೇಶವನ್ನು ಕಟ್ಟಿದಂತೆ ಅಂಥ ಇಚ್ಛಾಶಕ್ತಿ ನಮ್ಮದಾಗಬೇಕು. ಇದೆಲ್ಲವನ್ನವಲೋಕಿಸಿದಾಗ ಕೊನೆಗೆ

ನೆನಪಾಗುವುದು ಜಿ.ಎಸ್. ಶಿವರುದ್ರಪ್ಪನವರ ಮಾತು **"ಪ್ರೀತಿ ಇಲ್ಲದ ಮೇಲೆ ಹೂ ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ಮಳೆ ಸುರಿಯೀತು ಹೇಗೆ...?"** ಈ ಎಲ್ಲ ಒಗ್ಗೂಡುವಿಕೆಗೂ, ಒಳಗೊಳ್ಳುವಿಕೆಗೂ, ಪ್ರಗತಿಗೂ ಪ್ರೀತಿಯೊಂದೇ ಆಧಾರ. ಅಂತಹ ಪ್ರೀತಿಯನ್ನು ಕನ್ನಡದ ಮೇಲೆ, ಕನ್ನಡ ನಾಡಿನ ಮೇಲೆ ಬೆಳೆಸಿಕೊಳ್ಳೋಣ, ಆ ಮೂಲಕ ನುಡಿಯನ್ನು ಕಟ್ಟಿ ಬೆಳೆಸೋಣ ನಾಡನ್ನು ಬೆಳಗಿಸೋಣ. ಹಾಗಾದಾಗಲೇ ಆಂಗ್ಲವಷ್ಟೇ ಅಲ್ಲ ಪರಭಾಷೆ ಮತ್ತು ಪರಭಾಷಿಕರಿಂದ ಕನ್ನಡದ ಮೇಲಿನ ಬಿಕ್ಕಟ್ಟಿನ ನಿವಾರಣೆಗೆ ಸರಿಯಾದ ಮಾರ್ಗ ಸಿಗುತ್ತದೆ. ಈ ಎಲ್ಲವೂಗಳು ಕೇವಲ ನುಡಿಯಾಗದೇ ನುಡಿಯೊಳಗಣ ನಡೆಯಾಗಬೇಕಾಗುತ್ತದೆ. ಆಗಲೇ ನಮ್ಮೆಲ್ಲರ ಕನ್ನಡದ ಅಮ್ಮ ನಮ್ಮನ್ನು ಮೆಚ್ಚಿ ಅಹುದಹುದೆನ್ನುತ್ತಾಳೆ.

ಈ ನಾಡಿನಲ್ಲಿ ಕನ್ನಡ ಕಟ್ಟುವಿಕೆಯ ಕಾಯಕವನ್ನು ಹನ್ನೆರಡನೇ ಶತಮಾನದಲ್ಲಿ ವಚನಕಾರರು ಕನ್ನಡ ಭಾಷೆಯಲ್ಲಿಯೇ ವಚನಗಳನ್ನು ರಚಿಸುವ ಮೂಲಕ ಮಾಡಿದ್ದಾರೆ. ಬಹಳ ಅದ್ಭುತವಾಗಿ ಅನುಭಾವಿಕ ನೆಲೆಯಲ್ಲಿ ತಮ್ಮ ವಚನಗಳ ತಯಾರಿಕೆಯಲ್ಲಿ ಕನ್ನಡ ಭಾಷೆಯನ್ನು ಬಳಸಿದ್ದಾರೆ. ಅಂದಿನ ಕಾಲದಲ್ಲಿ ದೇವರೊಂದಿಗೆ ಮಾತನಾಡ ಬೇಕಾದರೆ ಸಂಸ್ಕೃತ ಭಾಷೆಯನ್ನೇ ಬಳಸಬೇಕೆಂಬ ನಂಬಿಕೆಯೊಂದಿತ್ತು. ಅಂಥ ನಂಬಿಕೆಯನ್ನು ಕಿತ್ತೊಗೆದು ಕನ್ನಡ ಭಾಷೆಯಲ್ಲಿ ದೇವರೊಂದಿಗೆ ಸಂವಾದಿಸಿದರು. ಆ ದೇವನಿಗೇ ಕನ್ನಡವನ್ನು ಕಲಿಸುವ ಮೂಲಕ ಸಂಸ್ಕೃತದಂತೆ ಕನ್ನಡವನ್ನು ದೇವ ಭಾಷೆಯನ್ನಾಗಿ ಮಾಡಿ, ಕನ್ನಡ ಭಾಷೆಯನ್ನು ಉತ್ತುಂಗಕ್ಕೇರಿಸಿದ್ದರು. ಈ ನಾಡಿನಲ್ಲಿ ವಚನ ಚಳುವಳಿಯೊಂದು ದೊಡ್ಡ ಕ್ರಾಂತಿ ಮಾಡುವುದರ ಜೊತೆ ಕನ್ನಡವನ್ನು ವಿಶ್ವಮಟ್ಟಕ್ಕೆ ಎತ್ತರಿಸಿ, ಕನ್ನಡಿಗರ ದಯೆಯ ಧರ್ಮವನ್ನು ವಿಶ್ವಧರ್ಮವನ್ನಾಗಿಸುವಲ್ಲಿ ಶ್ರಮಿಸಿದ ವಚನಕಾರರ ಪರಿಶ್ರಮವೆಲ್ಲ ಎಂದೆಂದಿಗೂ ಸತ್ಪಾತ್ರಕ್ಕೆ ಸಲ್ಲಬೇಕಾಗಿದೆ. ಈ ಎಲ್ಲವನ್ನೊಳ ಗೊಂಡ ಕನ್ನಡಮ್ಮನ ಮಡಿಲೆಂದು ಬರಡಲ್ಲ. ಅದು ಸಂಭ್ರಮಗಳ ಆಗರ. ಆ ಅಮ್ಮನ ಸಂಭ್ರಮದ ಮಡಿಲಿನ ಸುಖಿ ಕ್ಷಣವನ್ನು ನಮ್ಮದಾಗಿಸಿಕೊಳ್ಳಬೇಕಷ್ಟೇ.

□

ಎನ್ನ ಕಾಯವ ಬಸವಣ್ಣನಳವಡಿಸಿಕೊಂಡ.
ಎನ್ನ ಮನವ ಚನ್ನಬಸವಣ್ಣನಳವಡಿಸಿಕೊಂಡ.
ಎನ್ನ ಭಾವವ ಮಡಿವಾಳಯ್ಯನಳವಡಿಸಿಕೊಂಡ._
ಇಂತೀ ಮೂವರು ಒಂದೊಂದನಳವಡಿಸಿಕೊಂಡ ಕಾರಣ
ಗುಹೇಶ್ವರಾ, ನಿಮ್ಮ ಶರಣರೆಂಬ ತ್ರಿಮೂರ್ತಿಗಳಿಗೆ
ನಮೋ ನಮೋ ಎನುತಿರ್ದೆನು.

**– ಅಲ್ಲಮಪ್ರಭುದೇವರು**

[redacted]

# ಅವಧೂತರ ಲೋಕ

**ಡಾ. ಎಸ್. ಎಂ. ಗಿರಿಜಾಪತಿ**

**ಕ**ನ್ನಡ ನಾಡನ್ನು ಒಳಗೊಂಡಂತೆ ಭಾರತವು ಭಕ್ತಿಪಂಥದ ಮೂಲಕ ತನ್ನ ಸಮಾಜೋದ್ಧಾರ್ಮಿಕ ಸಂಸ್ಕೃತಿಯ ಬಹುಮುಖಗಳನ್ನು ಪೋಷಿಸಿಕೊಂಡ ನೆಲ, ವೈದಿಕ, ಚಾರ್ವಾಕರ ಸಿದ್ಧಾಂತಗಳನ್ನು ಒಳಗೊಂಡಂತೆ ಅವೈದಿಕ ಅದರಲ್ಲಿ ಮುಖ್ಯವಾಗಿ ಶೈವ, ಬೌದ್ಧ, ಜೈನ ದರ್ಶನಗಳು, ವೈಷ್ಣವದ ಭಾಗವತ ಪಂಥಗಳ ಪ್ರಭಾವ ದೇಶದ ಉದ್ದಗಲಕ್ಕೂ ವ್ಯಾಪಿಸಿಕೊಂಡಿದೆ, ಮಧ್ಯಕಾಲೀನ ಅವಧಿಯಲ್ಲಿ ಇದು ಮತ್ತಷ್ಟು ಭಕ್ತಿಪಂಥದ ತೀವ್ರ ಪ್ರಭಾವಕ್ಕೆ ಒಳಗಾಗಿ ಭಿನ್ನ ಮಾರ್ಗಗಳನ್ನು ಸೃಷ್ಟಿಸಿಕೊಂಡಿತು. ಈ ಪ್ರಭಾವ ಮತ್ತು ಮಾರ್ಗಗಳನ್ನು ಎರಡು ರೀತಿಯಲ್ಲಿ ಗ್ರಹಿಸಬಹುದು. ಮೊದಲನೆಯದಾಗಿ ಶಿಷ್ಟಮಾರ್ಗದಲ್ಲಿ ನಡೆದವರು ಸನಾತನ ಧರ್ಮ, ಧಾರ್ಮಿಕ ಸಂಸ್ಕೃತಿ, ಸಂಪ್ರದಾಯ, ಪರಂಪರೆಗಳ ಪುನರುಜ್ಜೀವನಗೊಳಿಸಲು ನಡೆಸಿದ ಪ್ರಯತ್ನಗಳು ಮತ್ತು ಆ ಮೂಲಕ ಸಾಂಸ್ಥಿಕ ಧರ್ಮಗಳು ತಮ್ಮ ಮೂಲಭೂತ ವಾದಗಳನ್ನು, ಕಠಿಣವಾದ ಧಾರ್ಮಿಕ ಸಂಹಿತೆಗಳನ್ನು ತಕ್ಕಮಟ್ಟಿಗೆ ಸರಳಗೊಳಿಸಿ ಜನರ ಮೇಲೆ ತಮ್ಮ ಪ್ರಭಾವಗಳನ್ನು ಬೀರಲು ನಡೆಸಿದ ಪ್ರಯತ್ನ. ಇದರಲ್ಲಿ ವೈದಿಕ, ಶೈವ, ವೈಷ್ಣವ ಮತ್ತು ಜೈನ ಮುಂತಾದ ಧರ್ಮಗಳ ಸರಳೀಕರಣದ ಪ್ರಯತ್ನಗಳು ನಡೆದು ಹೊಸ ಇತಿಹಾಸ ಸೃಷ್ಟಿಸಿದವು.

ಮತ್ತೊಂದು ಮಾರ್ಗ ಅದು ಜನಪದಮಾರ್ಗದ್ದು, ಇದು ಸಾಹಿತ್ಯ ಸೃಷ್ಟಿಗಿಂತ ಬಾಳಿ ಬದುಕಿದ್ದೇ ಸಾಹಿತ್ಯವೆಂಬಂತೆ ಕಾಣಿಸುವ ಸಿದ್ಧ ಸಾಧಕರು ಸವೆಸಿದ ಹಾದಿ, ಅವರನ್ನು ಜನಪದ ಅನುಭಾವಿಗಳೆಂದು, ಆಧ್ಯಾತ್ಮದ ದಿವ್ಯತ್ವವನ್ನು ಮನಗಂಡವರೆಂದು ಹೆಸರಿಸ ಬಹುದು. ಆದರೆ ಅವರೆಲ್ಲ ಏಕರೂಪದ ಸಾಧಕರಲ್ಲ, ಇವರಲ್ಲಿ ಸನ್ಯಾಸ ಧರ್ಮ ಪರಿಪಾಲಕರೂ ಇರುವಂತೆ, ಗೃಹಸ್ಥರೂ ಇದ್ದಾರೆ. ಜೊತೆಗೆ ದೇಶಪರ್ಯಟನೆ ಯಲ್ಲಿ ತೊಡಗಿರುವ ನಿತ್ಯ ಸಂಚಾರಿಗಳೂ ಇದ್ದಾರೆ. ಹಾಗಾಗಿ ಇಲ್ಲಿನ ಪ್ರತಿಯೊಬ್ಬ ಸಾಧಕರಿಗೂ ಅವರವರದೇ ಆದ ಸಾಧನಾ ಮಾರ್ಗಗಳಿವೆ, ಭಿನ್ನ ಮಾರ್ಗಗಳನ್ನು ಆಯ್ಕೆ ಮಾಡಿಕೊಂಡವರ ಸಂಖ್ಯೆಯೂ ಅಷ್ಟೇ ಬೃಹತ್ ಪ್ರಮಾಣದಲ್ಲಿ ಇದೆ, ಇವರ ಪ್ರಕಾರ ಧರ್ಮವೆಂದರೆ ನೈತಿಕ ನಡವಳಿಕೆಗಳು, ಮನುಷ್ಯ ಮನುಷ್ಯರ ನಡುವಣ ಸಂಬಂಧ, ಸಂವೇದನೆಗಳು. ಎಲ್ಲರೂ ಎಲ್ಲರಿಗಾಗಿ ಎನ್ನುವ ಸಮನ್ವಯತೆಯ, ಸಮಚಿತ್ತದ ಆಶಯಗಳಿಂದ ಕೂಡಿರುತ್ತವೆ. ಜೊತಗೆ ಪ್ರತಿಯೊಬ್ಬ ಮನುಷ್ಯನು ತನ್ನ ಜೀವನದ

ಸಹಜ ಮತ್ತು ಸರಳ ಆಪೇಕ್ಷಗಳಾದ ಹಸಿವು, ತೃಷೆಗಳನ್ನು ಪ್ರಾಮಾಣಿಕವಾಗಿ ಪಡೆದುಕೊಳ್ಳುವ ನಿಲುವಳಿಗಳಿಂದ ಕೂಡಿರುತ್ತವೆ. ಯಾವುದೇ ಮಡಿ, ಮೈಲಿಗೆ, ಕುಲ, ಜಾತಿಗಳ ಸೂತಕಗಳ ಬಗ್ಗೆ ಇವರಲ್ಲಿ ಆಸ್ಪದಗಳಿಲ್ಲ, ಆದರೆ ಹೆಣ್ಣಿನ ಬಗ್ಗೆ ದೇವಿ, ತಾಯಿ ಎಂಬ ಭಾವಗಳಿರುವಂತೆ ಮಾಯೆ ಎಂಬ ಅತೀತ ಕಲ್ಪನೆಗಳಿವೆ. ತತ್ವಗಳೆಂಬ ಪರಿಕಲ್ಪನೆ ಮುಖ್ಯವಾಗಿ ಕಂಡುಬರುತ್ತದೆ. ಹಾಗಾಗಿ ಈ ಸಾಧಕರಲ್ಲಿ ಯಾರೂ ಸಹ ಯಾವುದೇ ಸಾಂಸ್ಥಿಕ ಮತ ಧರ್ಮಗಳ ಮುಖವಾಣಿಗಳಂತೆ ಮತ ಸಿದ್ಧಾಂತ ಶಾಸ್ತ್ರಗಳ ಬೋಧನೆ ಮಾಡಿದವರಲ್ಲ, ಹಾಗೆಯೇ ಯಾವುದೇ ಮಠ, ಪೀಠಗಳನ್ನು ಕಟ್ಟುವ ಹಂಬಲಗಳನ್ನು ತಳೆದವರೂ ಅಲ್ಲ, ಬದಲಿಗೆ ಅವುಗಳಲ್ಲಿನ ಸತ್ಯಾಸತ್ಯಗಳನ್ನು ಶೋಧನೆ ಮಾಡಿ ತಮ್ಮದೇ ಆದ ಸ್ವತಂತ್ರ ನಿಲುವುಗಳನ್ನು ಪ್ರತಿಪಾದಿಸಿದ ನಿಗೂಢ ಜ್ಞಾನಮಾರ್ಗಿಗಳು. ಆ ಜ್ಞಾನವೆನ್ನುವುದು ಯೋಗದ ವಿವಿಧ ಸಾಧನೆಗಳಿಂದ ಸಂವರ್ಧನೆಗೊಂಡಿರುತ್ತದೆ. ರಾಜಯೋಗ, ಹಠಯೋಗ, ಶಿವಯೋಗ ಇತ್ಯಾದಿ ಸಾಧನಾ ಮಾರ್ಗಗಳನ್ನು ಅನುಸರಿಸುವುದಿದೆ. ಇವರಲ್ಲಿನ ಬಹುಮುಖ್ಯ ಉದ್ದೇಶ ದೇಹದ ಹಂಗುಗಳನ್ನು ಮೀರುವುದು, ದೇಹವನ್ನು ನಿರ್ಲಕ್ಷಿಸಿ ಆತ್ಮವನ್ನು ಅನುಲಕ್ಷಿಸುವುದು.

ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ ?
ಬೇಟದ ಮರುಳಗೆ ಲಜ್ಜೆ ಮುನ್ನುಂಟೆ
ನಿಮ್ಮನರಿದ ಶರಣಂಗೆ ಪೂಜೆಯ ಹಂಬಲ ದಂದುಗವೇಕೆ ?
ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೆ ?

ಗುಹೇಶ್ವರ ಲಿಂಗಕ್ಕೆ ಕುರುಹು ಮುನ್ನುಂಟೇ ? ಎನ್ನುವ ಅಲ್ಲಮನ ನುಡಿಗಳಂತೆ ಕುರುಹುಗಳ ಬೆಂಬತ್ತಿದವರಾಗಿ ಅವಧೂತರು ಕಾಣಿಸಲಾರರು. ಸಾಧ್ಯವಾದಷ್ಟು ಜನರಿಂದ ದೂರ ಉಳಿಯಲು ಬಯಸುವ ಏಕಾಂತವಾಸಿಗಳು, ಜನವಸತಿಗಳಿಂದ ದೂರವಿರುವ ಬೆಟ್ಟ ಗುಡ್ಡಗಳಲ್ಲಿನ ಗವಿಗಳಲ್ಲಿ, ಪಾಳುಬಿದ್ದಿರುವ ದೇಗುಲಗಳಲ್ಲಿ ವಾಸಮಾಡುವುದಿದೆ. ಜನ ಸಾಮಾನ್ಯರ ನಡುವೆ ತಿಕ್ಕಲು ತಿಕ್ಕಲು ವರ್ತನೆಗಳ ಮೂಲಕ ಜನತೆಯ, ಸಮಾಜದ ಮೌಢ್ಯಗಳನ್ನು ಅಲ್ಲಿನ ನಮ್ಮ ತಿಕ್ಕಲುತನದ ನಡವಳಿಕೆಗಳನ್ನು ತಿದ್ದುವ ಶುದ್ಧಾತ್ಮರಾಗಿ ಬಾಳಿದವರು. ಹಾಗಾದರೆ ಅವಧೂತ ಎಂದರೆ ಯಾರು? ಅವರ ಚಿಂತನೆಗಳು ಮತ್ತು ಜೀವಿತ ಕ್ರಮಗಳೇನು ಎನ್ನುವುದರತ್ತ ನಮ್ಮ ದೃಷ್ಟಿ ಹಾಯಿಸಬೇಕಿದೆ.

'ಅವಧೂತ' ಪ್ರಧಾನವಾಗಿ ಸಾಧಕರಾದವರು ತಮ್ಮ ಸಿದ್ಧಿಯ ಮೂಲಕ ಪರಿಪಕ್ವಗೊಳಿಸಿಕೊಂಡ ಮನಸ್ಥಿತಿ, ಅದೊಂದು ಪರಮ ಧ್ಯಾನಾಸಕ್ತ ಸ್ಥಿತಿ, ಯೋಗದ ತುರೀಯ ಅವಸ್ಥೆಗಳನ್ನು ಸಿದ್ಧಿಸಿಕೊಂಡ ಸ್ಥಿತಿ, ಅದನ್ನು ಪರಮಹಂಸ ಸ್ಥಿತಿಯೆಂದು ಕರೆದುಕೊಳ್ಳಬಹುದು, ಈ ಅವಧೂತ ಸ್ಥಿತಿ ಕುರಿತಂತೆ ಶ್ರೀ ದತ್ತ ಚರಿತೆಯಲ್ಲಿ ಅಕ್ಷರತ್ವಾತ್ – ಸಾವಿಲ್ಲದ ತತ್ವಗಳನ್ನು ತಿಳಿದವನು, ವರೇಣ್ಯತ್ವಾತ್– ಅತ್ಯಂತ ಶ್ರೇಷ್ಠ ಮತ್ತು ಸ್ಮರಣೀಯ, ಧೂತಪಾಪೇಶ್ವರತ್ವಾತ್ – ದೃಷ್ಟಿ ಮಾತ್ರದಿಂದ ತನ್ನ ಎದುರಿಗೆ ಬಂದವರ ಪಾಪಗಳನ್ನು

ಕಳೆಯಬಲ್ಲ ಸಮರ್ಥರು, ತತ್ತ್ವ ಮಸ್ಯತ್ತ್ವಾತ್ – ತತ್ ಸ್ವರೂಪನಾದ ಬ್ರಹ್ಮನನ್ನು ಬಲ್ಲವರೆಂದು ವಿವರಿಸಲಾಗಿದೆ. ಭಾಷಿಕ ದೃಷ್ಟಿಯಿಂದ ಇದು ಸಂಸ್ಕೃತ ಪದ ಪ್ರಾಪಂಚಿಕ ಸುಖಾಪೇಕ್ಷೆಗಳಿಂದ ಮುಕ್ತರಾಗಿ ಆಧ್ಯಾತ್ಮದ ಪರಮೋನ್ನತಿಯಲ್ಲಿ ತಮ್ಮ ಇರವನ್ನು ಕಂಡವರು, ಸಂತರು ಎಂದು ಇವರನ್ನು ಗುರುತಿಸಲಾಗುತ್ತದೆ. ಯೋಗದ ವಿವಿಧ ಮಾರ್ಗಗಳಾದ ರಾಜಯೋಗ, ಹಠಯೋಗ, ಸಿದ್ಧಯೋಗ ಮುಂತಾದವುಗಳ ಮೇರುವನ್ನು ತಲುಪಿದವರು, ಯೋಗ, ಸಮಾಧಿಸ್ಥಿತಿ, ಪ್ರಾಣಾಯಾಮದಂತಹ ಸಾಧನೆಗಳಲ್ಲಿ ನಿಷ್ಣಾತರು. ತಮ್ಮ ಶರೀರದ ಮೇಲೂ ಸಹ ವ್ಯಾಮೋಹವಿಲ್ಲದ ನಿರ್ಲಿಪ್ತರು, ಬಹುತೇಕ ಬಟ್ಟೆಗಳನ್ನು ತೊಡುವಲ್ಲಿ ಸಹ ನಿರಾಸಕ್ತರಾಗಿರುತ್ತಾರೆ.

ವ್ಯಾಕರಣದ ಪರಿಭಾಷೆಯಲ್ಲಿ ಅವಧೂತ ನಾಮ ಮತ್ತು ಕ್ರಿಯಾವಿಶೇಷಣ ಸೂಚಿ, ಕದಡಿದ, ಹೊರದೂಡಿದ, ತ್ಯಜಿಸಿದ, ತಿರಸ್ಕೃತವಾದ, ಪರಿಪೂರ್ಣ ತತ್ವವೇತ್ತರು, ಭಾವಜಗತ್ತಿನ ಗೋಜಲುಗಳಿಂದ ಮುಕ್ತರಾದವರು, ಚಿದಂಬರ ರಹಸ್ಯಗಳ ಅನ್ವೇಷಕರು, ಕೆಲ ತಾಂತ್ರಿಕ ಶಕ್ತಿಗಳನ್ನು ಆವಾಹನೆ ಮಾಡಿಕೊಂಡವರೆಂದು ಹೆಸರಿಸಿದೆ.

ಅವಧೂತ ಈ ಪದಕ್ಕೆ ಕೊಡವಿದವರು, ಕೊಡವಿಕೊಂಡವರು ಎನ್ನುವ ಸಾಮಾನ್ಯ ಅರ್ಥವಿದೆ, ಕುದುರೆ ಮೈಕೊಡವಿಕೊಂಡು ಸ್ವಚ್ಛಂದವಾಗಿ, ಸ್ವತಂತ್ರ್ಯವಾಗಿ ನಿಂತಂತೆ ಅಥವಾ ಓಡುವಂತೆ. ಹಾಗಾಗಿ ಇಲ್ಲಿ ಕೊಡವು ಎಂದರೆ ತಮ್ಮ ಮೇಲೆ ಹೇರಲಾಗಿರುವ ಅಥವಾ ಹೊರಬೇಕಾಗಿರುವ ಭಾರವನ್ನು ಬಿಸಾಡಿದವರು, ಆ ಭಾರವೇ ಈ ಲೋಕದ ಲೌಕಿಕ ಆಸೆಗಳಿಂದ ಕೂಡಿದ ಸಾಮಾನ್ಯ ಜೀವನ ಕ್ರಮ, ಆಸೆಗಳ ವರ್ತುಲದ ಈ ಕ್ರಮಗಳ ಭಾರವನ್ನು ಕೊಡವಿ ಮುಕ್ತರಾಗಿ ನಿಂತಿರುವವರು, ಮುನ್ನಡೆಯುವವರು ಎಂದು ಪರಿಭಾವಿಸಬಹುದು. ಈ ಪಂಚಭೂತಾತ್ಮಕ ಸೃಷ್ಟಿಯಲ್ಲಿ ಪ್ರಾಕೃತಿಕ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಎಲ್ಲ ಒಡನಾಟಗಳಿಂದ ಹೊರಗುಳಿದ ನಿತ್ಯಮುಕ್ತರು, ಸಾಂಪ್ರದಾಯಿಕ ಸಮಾಜದ ಚೌಕಟ್ಟುಗಳನ್ನು ಒಲ್ಲದ, ಜೀವಭಾವದಲ್ಲಿ ದೇವಭಾವಗಳನ್ನು ನೆಲೆಗೊಳಿಸಿಕೊಂಡ ಆಧ್ಯಾತ್ಮ ಜಿಜ್ಞಾಸುಗಳು, ಮಕ್ಕಳಂತೆ ವರ್ತನೆವುಳ್ಳವರು, ಅಲ್ಲಮ ಪ್ರಭು ಹೇಳುವಂತೆ ದೇಹಭಾವವಳೀದಲ್ಲದೆ ಜೀವಭಾವವಳಿಯದು . ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು ಎಂದೆಲ್ಲ ಕುರುಹುಗೆಟ್ಟು ಅರುಹು ವಶಮಾಡಿಕೊಳ್ಳುತ್ತಾ ತಾತ್ವಿಕ ಎಚ್ಚರದತ್ತ ಸಾಗುವವರು, ಹಾಗಾಗಿ ಜಗತ್ತಿನ ಆದಿಸ್ವರೂಪದ ಚೈತನ್ಯದಲ್ಲಿ ಲೀನವಾಗುವುದೇ ಇವರ ಸಾಧನೆಯ ಪ್ರಧಾನೋದ್ದೇಶ, ಆ ಚೈತನ್ಯಕ್ಕೆ ಇವರ ಪ್ರಕಾರ ಯಾವ ಹೆಸರುಗಳೂ ಇಲ್ಲ, ಅಥವಾ ಯಾವುದೇ ಹೆಸರಿನಿಂದ ನಾವು ಕರೆದರೂ ಅದಕ್ಕೆ ಅವಾವು ಅಂಟಲಾರವು. ಉದಾ. ಬ್ರಹ್ಮ, ವಿಷ್ಣು, ಶಿವ, ಜಿನ, ಬುದ್ಧ, ಅಲ್ಲ ಇತ್ಯಾದಿ., ಅನನ್ಯವಾದ ಮತ್ತು ಅನಂತವಾದ ವಿಶ್ವಾತ್ಮನಲ್ಲಿ ಲೀನವಾಗುವವರು. ಸ್ವಾನಂದದ ಬ್ರಹ್ಮಾನು ಭೂತಿಯಲ್ಲಿ ತನ್ಮಯರಾಗಿರುವ ಸಿದ್ಧಿ ಪುರುಷರು, ಹಾಗಾಗಿ ಇವರಲ್ಲಿ ಬಾಹ್ಯ ಜಗತ್ತಿನ ಪ್ರಜ್ಞೆಗಳು ಅಷ್ಟಾಗಿ ಇರುವುದಿಲ್ಲ. ಹಾಗಾದರೆ ಅವಧೂತ ಎನ್ನುವುದನ್ನು

ಒಂದು ಪಂಥವಾಗಿ ಕಾಣಬಹುದೇ ಎಂಬ ಪ್ರಶ್ನೆಯಾಗಿ ಕಾಡುತ್ತದೆ, ಆದರೆ ಇದೊಂದು ಪಂಥವಲ್ಲ, ಸಾಂಸ್ಥಿಕ ಧರ್ಮಗಳು ಪ್ರತಿಪಾದಿಸುವ ಚತುರ್ವಿಧ ಪುರುಷಾರ್ಥಗಳ ಅನುಸರಣೆಗಳು ಇಲ್ಲಿಲ್ಲ, ಮೋಕ್ಷವೆಂಬುದು ಇಲ್ಲಿ ವ್ಯಂಗ್ಯದ ವಸ್ತುವಾಗುತ್ತದೆ. ಅವಧೂತರಲ್ಲಿ ನಾಲ್ಕು ಬಗೆಯ ಸಾಧಕರನ್ನು ಗುರುತಿಸಿದೆ;

1. ಗಾರ್ಹಾಸ್ಥ ಅವಧೂತ–ಗೃಹಸ್ಥಾಶ್ರಮಿಯಾಗಿದ್ದುಕೊಂಡು ಬ್ರಹ್ಮಾನಂದದ ಮೂಲಕ ಅವಧೂತರಾದವರು
2. ಶೈವಾವಧೂತ – ಇಲ್ಲಿ ಶೈವನೆಂದರೆ ಶಿವೋಪಾಸಕ ಎಂಬ ಸೀಮಿತ ಅರ್ಥವಿಲ್ಲ, ಬದಲಿಗೆ ಶುದ್ಧ ಮಾರ್ಗಿ ಎಂದರ್ಥವಿದೆ, ಅಂದರೆ ಸುಸಂಸ್ಕೃತ ಯತಿ ಮಾರ್ಗದಲ್ಲಿ ಸಾಗಿ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದುವ ಸನ್ಯಾಸ ಯೋಗಿ. ಇವರು ಕರ್ಮಾಧಿಕಾರಗಳಿಂದ ಮುಕ್ತರಾಗಿರುತ್ತಾರೆ.
3. ಬ್ರಹ್ಮಾವಧೂತ –ಜನ್ಮತಃ ಈ ಲಕ್ಷಣಗಳನ್ನು ಹೊಂದಿದವರು, ಬೆಳೆದಂತೆ ಬ್ರಹ್ಮೋಪಾಸಕರಾಗಿ ಸಾಧನೆ ಮಾಡಿಕೊಳ್ಳುವವರು, ಸಂತ ಮಾರ್ಗಿಗಳು
4. ಹಂಸಾವಧೂತ ಅಥವಾ ವೀರಾವಧೂತ – ಯಾವುದೇ ಲಾಂಛನ, ಬಂಧನಗಳಿಲ್ಲದ ನಿರ್ಲಿಪ್ತ ಭಾವೋನ್ನತಿಯ ಸಾಧಕರು. ಬಿಳಿಯ ಬಟ್ಟೆಗಳನ್ನು ಧರಿಸುವರು, ಒಂದು ಕಡೆ ನೆಲೆ ನಿಲ್ಲದೆ ನಿರಂತರವಾಗಿ ದೇಶಪರ್ಯಟನೆಯಲ್ಲಿ ಆಸಕ್ತಿ ಹೊಂದಿರುವ ಯೋಗಿಗಳು.

ಅವಧೂತರಲ್ಲಿ ಸಹ ಕೆಲ ಒಳ ಪಂಗಡಗಳಿವೆ, ಯಂತ್ರ, ಮಂತ್ರ, ತಂತ್ರ ದಿವ್ಯ ಮತ್ತು ಅತಿಮಾನುಷ ಶಕ್ತಿಗಳ ಸಾಧಕರು ಇದ್ದಾರೆ. ಈ ಅವಧೂತರಲ್ಲಿ ಅದ್ವೈತಿಗಳು ಹೆಚ್ಚಾಗಿ ಕಂಡು ಬರುತ್ತಾರೆ, ಹಾಗಾಗಿ ಅದ್ವೈತ ಸಿದ್ಧಾಂತದ ಆಚಾರ್ಯರಾದ ಶಂಕರಾಚಾರ್ಯರು ಸೇರಿದಂತೆ ವಿವಿಧ ದಾರ್ಶನಿಕರು, ತತ್ವವೇತ್ತರು ಸಹ ಇವರ ಲಕ್ಷಣಗಳ ಬಗ್ಗೆ ವಿವರಿಸಿದ್ದಾರೆ. ಜಡ, ಅಂಧ, ಮೂಕ, ಬಧಿರ, ಪಿಶಾಚ, ಉನ್ಮತ್ತ ಎಂದು ಪಟ್ಟಿಮಾಡಿ ಶಾಸ್ತ್ರೀಯ ವಾಗಿ ಇವರ ಲಕ್ಷಣಗಳನ್ನು ಗುರುತಿಸುವುದೂ ಇದೆ. ಅವುಗಳನ್ನು ನಾನು ಇಲ್ಲಿ ಸಂಗ್ರಾಹ್ಯ ರೂಪದಲ್ಲಿ ಪ್ರಸ್ತಾಪಿಸಿದ್ದೇನೆ.

1. ಅವಧೂತರು ಈ ಲೋಕದಲ್ಲಿನ ಬಾಹ್ಯ ವ್ಯಾಪಾರಗಳನ್ನೆಲ್ಲ ತ್ಯಜಿಸಿದ, ವಿವೇಕದ ಜಾಗೃತಿಯ ಮೂಲಕ ಚತುಷ್ಟಯ ಸಂಪನ್ನನಾಗಿ ಯಮ, ನಿಯಮ, ಆಸನ ಮತ್ತು ಪ್ರಾಣಾಯಾಮದ ಯೊಗಸಾಧನೆಗಳನ್ನು ಸಾಧಿಸಿಕೊಂಡ ಸಿದ್ಧಪುರುಷನಾಗಿರುತ್ತಾರೆ. ಇಲ್ಲಿನ ಸಪ್ತಭೂಮಿಕೆಗಳೆನಿಸಿದ ಸುಖೇಚ್ಛೆ, ಆತ್ಮ ವಿಚಾರ, ನಿಸ್ಸಂಗಗಳನ್ನು ದಾಟಿ ವಾಸನಾ ಕ್ಷಯ ಸ್ಥಿತಿಗಳಲ್ಲಿ ವಿಹರಿಸುತ್ತಿರುತ್ತಾರೆ.

2. ಪರಬ್ರಹ್ಮನೇ ತಾನಾಗುವಲ್ಲಿ ಪರಮ ಹಂಸ ಸ್ಥಿತಿಯ ನಿಜಾನಂದಲ್ಲಿ ತುರೀಯ ಮತ್ತು ತುರೀಯಾತೀತ ಹಂತಗಳನ್ನು ದಾಟುವಲ್ಲಿ ಉತ್ಸುಕನಾಗಿರುತ್ತಾರೆ.

3. ಜಾತಿ, ಮತ, ಕುಲ, ಗೋತ್ರ ಮಡಿ, ಮೈಲಿಗೆಗಳ ಪರಿಕಲ್ಪನೆಗಳು ಅವಧೂತರ ಬಳಿಯಲ್ಲಿ ಸುಳಿಯಲಾರವು, ಅನ್ನದಿಂದ ಮಲ, ಮಲದಿಂದ ಅನ್ನವೆಂಬ ಸಮಭಾವ ಇವರಲ್ಲಿ ಜಾಗೃತವಾಗಿರುತ್ತದೆ.

4. ಅವಧೂತರು ಆಶ್ರಯಗಳನ್ನು ಬೇಡುವ ಸಂಪ್ರದಾಯದವರಲ್ಲ, ಇವರಿಗೆ ಭೂಮಿಯೇ ಹಾಸಿಗೆಯಾಗಿದ್ದರೆ, ಆಕಾಶವೇ ಹೊದಿಕೆಯಾಗಿರುತ್ತದೆ. ಹುಚ್ಚರಂತೆ ವಿಲಕ್ಷಣ ಉಡುಪು, ತಮ್ಮೊಂದಿಗೆ ಯಾರಿಗೂ ಬೇಡವಾದ ತ್ಯಾಜ್ಯವಸ್ತುಗಳನ್ನು ಇಟ್ಟುಕೊಳ್ಳುವುದು, ಅವುಗಳ ಮೂಲಕವೇ ಜನಕ್ಕೆ ಬೇಕಾದ ವಸ್ತುಗಳನ್ನು ಚಮತ್ಕಾರಿ ರೀತಿಯಲ್ಲಿ ಸೃಷ್ಟಿಸಿ ತೋರುತ್ತಾರೆ. ಇವು ಸಾಮಾನ್ಯರಿಗೆ ಪವಾಡಗಳಂತೆ, ಲೀಲೆಗಳಂತೆ ಕಾಣುವುದಿದೆ.

5. ಯಾವುದೇ ಪರಿಕರಗಳ ಅಗತ್ಯವಿರುವುದಿಲ್ಲ, ಬೊಗಸೆಯಿಂದಲೇ ನೀರು ಕುಡಿದು, ಊಟವನ್ನು ಸಹ ಬೊಗಸೆಯಲ್ಲಿಯೇ ಪಡೆದು ಪೂರೈಸಿಕೊಳ್ಳುವ ಯೋಗಿಗಳೂ ಇದ್ದಾರೆ.

6. ಶುಭ್ರತೆಯ ಬಗ್ಗೆ ಗಮನವಿರುವುದಿಲ್ಲ, ಊಟಮಾಡಿ ಕೈ ತೊಳೆಯುವ ಗೋಜಿಗೂ ಹೋಗದೆ, ತೊಟ್ಟಿದ್ದ ಅಷ್ಟಿಷ್ಟು ಬಟ್ಟೆಗೆ ಒರೆಸಿಕೊಂಡು ಬಿಡುತ್ತಾರೆ. ಹಾಗಾಗಿ ಇವರು ಬಾಲ, ಉನ್ಮತ್ತ ಮತ್ತುಜ ಪಿಶಾಚ ರೀತಿಗಳಲ್ಲಿ ಕಾಣಿಸಿಕೊಳ್ಳುತ್ತಾ ಸಮಾಜಕ್ಕೆ ಅರ್ಥವಾಗದೆ ದೂರ ಉಳಿಯುತ್ತಾರೆ.

7. ತನ್ನ ಸುತ್ತಲಿನವರು ತನ್ನ ಬಗ್ಗೆ ಏನೆಂದು ಯೋಚಿಸುತ್ತಾರೆನ್ನುವ ಕಲ್ಪನೆಗಳಿರುವುದಿಲ್ಲ, ತಮ್ಮಷ್ಟಕ್ಕೆ ತಾವು ನಗುವ, ಸಂತಸ ಸಂಭ್ರಮ ಪಡುವ ಎಳೆಯ ಮಗುವಿನ ಗುಣ ಲಕ್ಷಣಗಳಿರುತ್ತವೆ.

8. ಬಾಹ್ಯದಲ್ಲಿ ಅತ್ಯಂತ ತಿರಸ್ಕಾರಕ್ಕೆ ಒಳಗಾದವರಂತೆ ಕಾಣುತ್ತಾ ಅಂತರಂಗದಲ್ಲಿ ಮಾತ್ರ ಸದಾ ಪ್ರಣವ ಪಂಚಾಕ್ಷರಿ ಮಂತ್ರ ಧ್ವನಿಸುತ್ತಾ ತನ್ಮಯತೆಯನ್ನು ಅನುಭವಿಸುತ್ತಿರುತ್ತಾರೆ. ಹಾಗಾಗಿ ಹೊರಗಿನ ಜನ ಕೂಗಿ ಕರೆದಾಗ ಇವರು ಓಗೊಡುವುದು ಅತ್ಯಂತ ಕಡಿಮೆ.

9. ಬ್ರಹ್ಮಧ್ಯಾನದಲ್ಲಿ ಲೀನವಾಗಿರುವ ಪರಬ್ರಹ್ಮದ ಅನ್ವೇಷಕ, ಆರಾಧಕ ಹಾಗಾಗಿ ಸಹಜಾನಂದದಲ್ಲಿ ಮುಳುಗಿರುವ ಚಿನ್ಮಯ ಚಿದಾನಂದನಂತೆ ಕಂಡು ಬರುತ್ತಾನೆ.

10. ಈತನ ಸಿದ್ಧ ಸಾಧನೆಗೆ ಜಗತ್ತಿನ ಎಲ್ಲ ಕೋರಿಕೆಗಳು ವಶವರ್ತಿಯಾಗಿರಬಲ್ಲವು, ಹಾಗೆಯೇ ಅಣಿಮಾದಿ ಅಷ್ಟಸಿದ್ಧಿಗಳು, ಭೂತಗಣಗಳು ಈತನ ಸೇವೆಗೆ ಬದ್ಧವಾಗಿ ಕಾದು ಕುಳಿತಿರುತ್ತವೆ.

11. ಅವಧೂತರನ್ನು ಒಲಿಸಿಕೊಳ್ಳುವುದು ಕಷ್ಟ, ಆದರೆ ಒಮ್ಮೆ ಇವರ ದೃಷ್ಟಿಗೆ ಒಳಗಾದರೆ ಅವರೇ ಹುಡುಕಿಕೊಂಡು ಬರುವುದೂ ಇದೆ.

12. ಇವರಲ್ಲಿ ರಾಗದ್ವೇಷಾದಿಗಳೂ ಇರುವುದಿಲ್ಲ. ಹಾಗಾಗಿ ಬಿಜಾಪುರ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳು ದ್ವೇಷವಿಲ್ಲದವರು ನಿಜವಾದ ಅವಧೂತರೆಂದು ಹೇಳಿದ್ದಾರೆ.

13. ತಮಗೆ ತಿಳಿದಿದ್ದನ್ನು ತಮಗೆ ತಿಳಿದ ಭಾಷೆಯಲ್ಲಿ ಹೇಳುವ ಇವರು ಅರಿವಿನ ಅನುಸಂಧಾನದತ್ತ ಮುಖ ಮಾಡಿದವರು, ಹಾಗಾಗಿ ಇವರ ಪ್ರಕಾರ ಕತ್ತಲು ಮತ್ತು ಬೆಳಕು ಬೇರೆ ಬೇರೆ ಅಲ್ಲ,

14. ಅವಧೂತರು ಸ್ವಯಂಭೂ ಎಂಬಂತೆ ಕಂಡು ಬಂದರೂ ಇವರಿಗೆ ಗುರುವಿನ ಅಪ್ಪಣೆ ಮತ್ತು ಸಂಸ್ಕಾರ ಬಹಳ ಮುಖ್ಯವೆನಿಸುತ್ತದೆ.

15. ಇವರಲ್ಲಿ ಸಾಮಾನ್ಯವಾಗಿ ಶಕ್ತಿ ಆರಾಧಕರೂ ಇರುತ್ತಾರೆ ಉದಾ : ದೇವಿಪುರಾಣವನ್ನು ರಚನೆಮಾಡಿದ ಚಿದಾನಂದಾವಧೂತರನ್ನು ಇಲ್ಲಿ ಸ್ಮರಿಸಬಹುದು.

ಒಟ್ಟಾರೆ ಅವಧೂತರೆಂದರೆ ನಡೆದದ್ದೇ ಹಾದಿ, ನುಡಿದದ್ದೇ ತತ್ವ, ಹೇಳಿದ್ದೇ ಸಂಪ್ರದಾಯ, ತರ್ಕಕ್ಕೆ ನಿಲುಕದ ಸನ್ನಿವೇಶಗಳು ಇವರಲ್ಲಿ ಕಾಣಸಿಗುತ್ತವೆ. ಇವರ ಬೋಧನೆಗಳು ತುಂಬ ಸರಳವಾಗಿರುತ್ತವೆ, ಸರಳ ಮಾರ್ಗದ ಮೂಲಕವೇ ಲೋಕದ ಬಿಡುಗಡೆಗೆ ಕಾರಣವಾಗಬಲ್ಲ ಜ್ಞಾನ ಇವರಲ್ಲಿ ಕಂಡು ಬರುತ್ತದೆ, ಉದಾಹರಣೆಗೆ ನಾವು ಝೆನ್ ಕಥೆಗಳನ್ನು ಸ್ಮರಿಸಬಹುದು.

ತಮಿಳು ನಾಡಿನಲ್ಲಿ ಆಗಿ ಹೋದ ಸದಾಶಿವಬ್ರಹ್ಮೇಂದ್ರರೆಂಬ ಅವಧೂತರ ಬಳಿಗೆ ಅದೊಮ್ಮೆ ಅಲ್ಲಿನ ನವಾಬನೊಬ್ಬ ಬಂದಿದ್ದನಂತೆ ಇವರು ಸಂತಸದಿಂದ ಇರುವುದನ್ನು ಕಂಡು ತಾನು ಸಹ ಸಂತೋಷವಾಗಿರಲು ಏನು ಮಾಡಬೇಕೆಂದು ಕೇಳಿದನಂತೆ, ಆಗ ಅವರು ನಗುತ್ತಾ ಈಗ ನಿನ್ನ ಮನಸ್ಸಿಗೆ ಏನು ಮಾಡಬೇಕೆನಿಸಿದೆಯೋ ಅದನ್ನು ಮಾಡಬೇಡ ಎಂದು ಹೇಳಿ ಅಲ್ಲಿಂದ ಹೊರಟು ಹೋದರಂತೆ. ಅದರಂತೆ ನವಾಬ ತನಗೀಗ ಅರಮನೆಗೆ ಹೊರಡಬೇಕೆನಿಸಿದ್ದನ್ನು ನೆನೆದ, ಆದರೆ ಹಾಗೆ ಹೋಗ ಬಾರದೆಂದು ಅಂದುಕೊಂಡು ಅಲ್ಲಿಯೇ ಕುಳಿತುಕೊಂಡ, ನಂತರ ಯಾರನ್ನಾದರೂ ಮಾತನಾಡಿಸಬೇಕೆಂಬ ಬಯಕೆ ಮನದೊಳಗೆ ಮೂಡಿ ಬಂದರೂ ಮಾತನಾಡದೆ ಮೌನವಾಗಿ ಉಳಿದ, ಕೆಲ ಹೊತ್ತಿನ ನಂತರ ಏನನ್ನಾದರೂ ತಿನ್ನಬೇಕೆಂಬ ಆಸೆ ಉಂಟಾದರೂ ತಿನ್ನಲಿಲ್ಲ, ಹೀಗೆ ಕ್ರಮೇಣ ತನ್ನಲ್ಲಿ ಹುಟ್ಟುತ್ತಿದ್ದ ಆ ಕ್ಷಣದ ಅನಿಸಿಕೆ, ಆಲೋಚನೆಗಳನ್ನೆಲ್ಲ ಮುಂದುವರಿಸಿದ್ದರಿಂದ ಆತನ ಮನಸ್ಸು ಬಯಕೆಗಳಿಂದ ಮುಕ್ತಗೊಂಡು ಕೊನೆಗೆ ಆತನೂ ಸಹ ಅವಧೂತನಾದ ಎಂದು ಚರಿತ್ರೆಯಲ್ಲಿ ಮಾಹಿತಿಗಳಿವೆ. ಈ ಬಗೆಯ ನಿದರ್ಶನಗಳು ಈ ಪರಂಪರೆಯ ಮಹತ್ವ ಮತ್ತು ಪರಿಣಾಮಗಳನ್ನು ನಮ್ಮ ಮುಂದೆ ಪ್ರಚುರ ಪಡಿಸುತ್ತವೆ.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಉತ್ತಮ ಸಂಸ್ಕಾರ ಬೆಳೆಸಿಕೊಳ್ಳಬೇಕು

ಎಲ್ಲರೂ ಉತ್ತಮ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್4ರಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದಿಂದ ನೂತನವಾಗಿ ಮೈಸೂರು ವಿಜಯನಗರದಲ್ಲಿ ನಿರ್ಮಿಸಿದ ವಿದ್ಯಾರ್ಥಿನಿಲಯದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಸಮಾಜದಲ್ಲಿನ ಬಡವರು, ಮಧ್ಯಮ ವರ್ಗದವರ ಮಕ್ಕಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯ ತೆರೆದಿರುವುದು ಸಂತೋಷದ ಸಂಗತಿ ಮತ್ತು ಪುಣ್ಯದ ಕೆಲಸ. ಸಮಾಜದ ಬೆಳವಣಿಗೆಗೆ ಎಲ್ಲರೂ ಕೈಜೋಡಿಸಬೇಕು. ಸಮಾಜ ಒಗ್ಗಟ್ಟಾಗಿದ್ದರೆ ಏನಾದರೂ ಸಾಧಿಸಬಹುದು ಎಂದು ಹೇಳಿದರು.

ಸೋಲೂರು ಶ್ರೀ ವಿಖ್ಯಾತಾನಂದ ಸ್ವಾಮಿಗಳು, ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ ಮಾತನಾಡಿದರು. ಸಂಘದ ಅಧ್ಯಕ್ಷರಾದ ಶ್ರೀ ಎಂ.ಕೆ. ಪೋತರಾಜ್ಅಧ್ಯಕ್ಷತೆ ವಹಿಸಿದ್ದರು. ಡಾ. ಎಂ. ಶ್ರೀ ಜೆ.ಪಿ. ಸುಧಾಕರ್, ಶ್ರೀ ಮಾಂಬಳ್ಳಿ ಕೆ. ಪಾಪೇಗೌಡ, ಶ್ರೀ ಟಿ. ಶಿವಕುಮಾರ್, ಶ್ರೀ ರಾಜಶೇಖರ ಕದಂಬ, ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಮೊದಲಾದವರು ಉಪಸ್ಥಿತರಿದ್ದರು.

## ವಿಸ್ತಾರ ಸುದ್ದಿವಾಹಿನಿ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲಿ

ವಿಸ್ತಾರ ಸುದ್ದಿವಾಹಿನಿ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲಿ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 6ರಂದು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಹಿರಿಯ ಪತ್ರಕರ್ತರಾದ ಶ್ರೀ ಹರಿಪ್ರಕಾಶ್ ಕೋಣೆಮನೆ ನೇತೃತ್ವದ ವಿಸ್ತಾರ ನ್ಯೂಸ್ ಚಾನೆಲ್ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ವಿಸ್ತಾರ ಸುದ್ದಿವಾಹಿನಿ ಸಕಾರಾತ್ಮಕ ಬದಲಾವಣೆಗೆ ಮುನ್ನುಡಿ ಬರೆಯಬೇಕು. ಇಂದು ದೃಶ್ಯ ಮಾಧ್ಯಮ ಜಗತ್ತಿನಾದ್ಯಂತ ವಿಸ್ತಾರವಾಗಿ ಬೆಳೆದಿದೆ. ಜನರ ನಿರೀಕ್ಷೆಗೂ ಮೀರಿ ಹೊಸ ಹೊಸ ಚಾನೆಲ್‌ಗಳು ಆರಂಭವಾಗುತ್ತಿವೆ. ದೃಶ್ಯ ಮಾಧ್ಯಮಗಳು ಹಾಗೂ ಮುದ್ರಣ ಮಾಧ್ಯಮಗಳು ಜನರ ವಿಶ್ವಾಸ ಗಳಿಸುವ, ಸಮಾಜದ ಏಳಿಗೆಗೆ ಕಾರಣವಾಗುವ ಸುದ್ದಿಗಳನ್ನು ಪ್ರಸಾರ ಮಾಡಬೇಕು. ನಮ್ಮ ದೇಶದ ಪರಂಪರೆ ಅದ್ಭುತವಾಗಿದೆ. ಸಂಗೀತ, ನೃತ್ಯ, ಕಲೆಗಳು ಸಿರಿವಂತಿಕೆಯಿಂದ ಕೂಡಿವೆ. ಇಂತಹ ಸಿರಿವಂತಿಕೆಯನ್ನು

ಮಾಧ್ಯಮಗಳು ಜನರಿಗೆ ತಲುಪಿಸಬೇಕು. ಆಕರ್ಷಕ ದೃಶ್ಯಗಳು, ಸುದ್ದಿಗಳು ಸಾಮಾನ್ಯ ಜನರ ಮೇಲೆ ಪರಿಣಾಮ ಬೀರುತ್ತದೆ. ಯಾವುದೇ ಮಾಧ್ಯಮವು ಜನರ ಮನಸ್ಸಿನಲ್ಲಿ ಸಕಾರಾತ್ಮಕ ಮನೋಭಾವ ಮೂಡಿಸುವ, ಬದುಕಿನ ವಿಕಾಸಕ್ಕೆ ಕಾರಣವಾಗುವಂತಹ ಸುದ್ದಿಗಳನ್ನು ಪ್ರಸಾರ ಮಾಡಬೇಕು. ಇದು ದೇಶದ ಜನಸಮುದಾಯದ ಆರೋಗ್ಯಕರ ಬದಲಾವಣೆಗೆ ಕಾರಣವಾಗುತ್ತದೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪೂಜ್ಯರು ಹಾಗೂ ಗಣ್ಯರುಗಳಿಗೆ 'ಕಾಯಕ ಯೋಗಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು, ಶ್ರೀ ರಾಮಚಂದ್ರಾಪುರ ಪ್ರಧಾನ ಮಠದ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಗಳು, ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿ ಮಾತನಾಡಿದರು. ಪ್ರಧಾನ ಸಂಪಾದಕರಾದ ಶ್ರೀ ಹರಿಪ್ರಕಾಶ್‌ಕೋಣೆಮನೆ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಚ್.ವಿ. ಧರ್ಮೇಶ್, ನಿರ್ದೇಶಕರಾದ ಶ್ರೀ ಶ್ರೀನಿವಾಸ್‌ಹೆಬ್ಬಾರ್ ಉಪಸ್ಥಿತರಿದ್ದರು.

**ಡಾ. ಸಿ. ಸೋಮಶೇಖರವರದು ಮಾದರಿ ವ್ಯಕ್ತಿತ್ವ**

ಡಾ. ಸಿ. ಸೋಮಶೇಖರ ವ್ಯಕ್ತಿತ್ವ ಅನೇಕರಿಗೆ ಮಾದರಿಯಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 4ರಂದು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರರವರ ಆತ್ಮಕಥನ 'ನೀನೊಲಿದ ಬದುಕು' ಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಸಹಜತೆ, ಸರಳತೆ ಮತ್ತು ಪ್ರಾಮಾಣಿಕತೆಯಿಂದ ಬದುಕನ್ನು ಶ್ರೀಮಂತಗೊಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸೋಮಶೇಖರರವರು ಎಲ್ಲರಿಗೂ ಮಾದರಿ. ಅಧಿಕಾರವಿರಲಿ. ಇಲ್ಲದಿರಲಿ ಜನಸೇವೆಗೆ ಸದಾ ತುಡಿಯುತ್ತಿರುತ್ತಾರೆ. ಭಗವಂತ ಅವರಿಗೆ ಇನ್ನು ಹೆಚ್ಚಿನ ಸೇವೆ ಮಾಡುವ ಶಕ್ತಿಯನ್ನು ನೀಡಲಿ ಎಂದು ಹಾರೈಸಿದರು.

ಕೃತಿ ಲೋಕಾರ್ಪಣೆಗೊಳಿಸಿದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿಯವರು ಅತ್ಮಕಥನ ಎಂದರೆ ಸತ್ಯದ ದರ್ಶನ ಮಾಡಿಸುವುದು. ಆದರೆ ಹೆಚ್ಚಿನ ಆತ್ಮಕಥೆಗಳಲ್ಲಿ ಸತ್ಯ ಮುಚ್ಚಿಹೋಗಿರುತ್ತದೆ. ಈ ನಿಟ್ಟಿನಲ್ಲಿ ಡಾ. ಸಿ. ಸೋಮಶೇಖರ ತಮ್ಮ ಜೀವನದಲ್ಲಿ ಪಡೆದ ಸಾಕ್ಷಾತ್ಕಾರವನ್ನು ಆತ್ಮಕಥನದ ಮೂಲಕ ತಿಳಿಸಿದ್ದಾರೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಹಿರಿಯ ಸಾಹಿತಿಗಳಾದ ಡಾ. ಚಂದ್ರಶೇಖರ ಕಂಬಾರರವರು ಕಾರ್ಯಕ್ರಮ ಉದ್ಘಾಟಿಸಿದರು. ನಿವೃತ್ತ ನ್ಯಾಯಾಧೀಶರಾದ ಡಾ. ಶಿವರಾಜ್‌ಪಾಟೀಲ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಚಿವರುಗಳಾದ ಶ್ರೀ ವಿ. ಸೋಮಣ್ಣ, ಶ್ರೀ ವಿ. ಸುನೀಲ್‌ಕುಮಾರ್, ಸಪ್ನ ಬುಕ್‌ಹೌಸ್‌ನ ಶ್ರೀ ನಿತಿನ್‌ಷಾ, ಶ್ರೀಮತಿ ಸರ್ವಮಂಗಳ ಸೋಮಶೇಖರ ಉಪಸ್ಥಿತರಿದ್ದರು.

## ಎಲ್ಲವನ್ನೂ ಸಾಧ್ಯವಾಗಿಸುವ ಡಾ. ಪ್ರಭಾಕರ ಕೋರೆ

ಡಾ. ಪ್ರಭಾಕರ ಕೋರೆಯವರು ಎಂತಹ ಅಸಾಧ್ಯವಾದ ಕೆಲಸಗಳನ್ನು ಅವರ ಕತೃತ್ವ ಶಕ್ತಿಯಿಂದ ಸಾಧ್ಯವಾಗಿಸಬಲ್ಲವರು ಎಂದು ಪರಮಪೂಜ್ಯ ಜಗದ್ಗುರುಗಳವರು ಬೆಳಗಾವಿ ನಾಗನೂರು ಶ್ರೀ ರುದ್ರಾಕ್ಷಿ ಮಠದಲ್ಲಿ ಏರ್ಪಡಿಸಿದ್ದ ಡಾ. ಪ್ರಭಾಕರ ಕೋರೆಯವರ ಅಮೃತ ಮಹೋತ್ಸವದ ಅಭಿನಂದನಾ ಸಮಾರಂಭ ಹಾಗೂ ಮಠಾಧೀಶರ ಬೃಹತ್ ಚಿಂತನಾ ಸಮಾವೇಶದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಸತತವಾಗಿ 38 ವರ್ಷಗಳ ಕಾಲ ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಕೋರೆಯವರು ಮುಂದುವರೆಯುತ್ತಿರುವುದು ಅವರ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ. ಯಾವುದೇ ಒಂದು ಜಾತಿ, ವರ್ಗಕ್ಕೆ ಸೀಮಿತವಾಗದೇ ಜಾತ್ಯತೀತವಾಗಿ ಎಲ್ಲರಿಗೂ ಸಮಾನ ಅವಕಾಶಗಳನ್ನು ನಾಡಿನ ಮಠಗಳು ಮತ್ತು ಸಂಘ-ಸಂಸ್ಥೆಗಳು ನೀಡಿವೆ. ಇದು ಅತ್ಯಂತ ಹೆಮ್ಮೆಯ ವಿಷಯ ಎಂದು ಹೇಳಿದರು.

ಸಾಹಿತಿಗಳಾದ ಡಾ. ಗೊ.ರು. ಚನ್ನಬಸಪ್ಪನವರು ಭಕ್ತರು ಗುರುಗಳನ್ನು ಗೌರವಿಸುವುದು ಸಾಮಾನ್ಯ. ಆದರೆ ಗುರುಗಳೆಲ್ಲರೂ ಒಟ್ಟುಗೂಡಿ ಭಕ್ತನನ್ನು ಗೌರವಿಸಿ, ಸನ್ಮಾನಿಸುವುದು ವಿಶೇಷ. ಲೋಕ ಸೇವಕರ ಸಾಲಿನಲ್ಲಿ ಡಾ. ಕೋರೆಯವರು ಮೊದಲಿಗರಾಗಿ ಕಾಣುತ್ತಾರೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರು ಕೆಎಲ್ಇ ಸಂಸ್ಥೆಯ ಮೂಲಕ ಅಪಾರವಾದ ಯಶಸ್ಸು ಸಾಧಿಸಿದ್ದಾರೆ ಎಂದರು.

ಪ್ರೊ. ಬಿ.ಎಸ್. ಗವಿಮಠರವರ 'ಕನ್ನಡರತ್ನ ಡಾ. ಪ್ರಭಾಕರ ಕೋರೆ' ಕೃತಿ ಬಿಡುಗಡೆಗೊಳಿಸಲಾಯಿತು. ಸಿರಿಗೆರೆ ಶ್ರೀ ತರಳಬಾಳು ಜಗದ್ಗುರುಗಳು, ಹುಬ್ಬಳ್ಳಿ ಶ್ರೀ ಮೂರುಸಾವಿರಮಠದ ಜಗದ್ಗುರುಗಳು, ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳು, ಮುಂಡರಗಿ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದ ಜಗದ್ಗುರುಗಳು, ನಿಡಸೋಸಿ ಶ್ರೀ ಸಿದ್ಧಸಂಸ್ಥಾನ ಮಠದ ಜಗದ್ಗುರುಗಳು ಆಶೀರ್ವಚನ ನೀಡಿದರು. ಶ್ರೀ ಗೊ.ರು. ಚನ್ನಬಸಪ್ಪ ಉದ್ಘಾಟಿಸಿದರು. ಡಾ. ಪ್ರಭಾಕರ್ ಕೋರೆಯವರುಗಳು ಮಾತನಾಡಿದರು. ಇಂಚಲ ಶ್ರೀಗಳು ಸೇರಿದಂತೆ ನಾಡಿನ ವಿವಿಧ ಮಠಗಳ ಪೂಜ್ಯರುಗಳು ಉಪಸ್ಥಿತರಿದ್ದರು. ಕೆಎಲ್ಇ ಸಂಗೀತ ಶಾಲೆಯ ಬಳಗದವರು ಪ್ರಾರ್ಥಿಸಿದರು. ಶ್ರೀ ಮಹಾಂತೇಶ ಕವಟಗಿಮಠ ಸ್ವಾಗತಿಸಿದರು.

## ವಚನ ಸಾಹಿತ್ಯ ಜಗತ್ತಿನಲ್ಲೇ ಅಪೂರ್ವವಾದುದು

ವಚನ ಸಾಹಿತ್ಯ ಜಗತ್ತಿನಲ್ಲೇ ಅಪೂರ್ವವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 10ರಂದು ಬೆಳಗಾವಿ ಜಿಲ್ಲಾ ಕದಳಿ ಮಹಿಳಾ ಪ್ರಥಮ ಸಮಾವೇಶದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮನುಷ್ಯನ ವೈಚಾರಿಕ ಪ್ರಜ್ಞೆ, ಬುದ್ಧಿಮತ್ತೆ ಮತ್ತು ವಿಚಾರವಂತಿಕೆಯನ್ನು ವಚನಗಳು ಹೆಚ್ಚಿಸುತ್ತವೆ. ವೈಯಕ್ತಿಕ ಬದುಕಿನ ಆತ್ಮವಿಮರ್ಶೆಗೆ ವಚನಗಳು ಮಾರ್ಗದರ್ಶಕವಾಗಿವೆ. ಸರ್ವರಿಗೂ ಸಮಾನವಾದ

ಸ್ವಾತಂತ್ರ್ಯವನ್ನು ನೀಡಿ, ಮುಕ್ತವಾದ ಚರ್ಚೆಗೆ ಅವಕಾಶವನ್ನು ಶರಣರು ನೀಡಿದ್ದರು. ಬದುಕಿನ ಎಲ್ಲ ಸಂಗತಿಗಳು ವಚನಗಳಲ್ಲಿ ನಿರೂಪಿತವಾಗಿವೆ ಎಂದು ತಿಳಿಸಿದರು.

ಶ್ರೀಮತಿ ವಿದ್ಯಾ ಮಗದುಮ್‌ರವರಿಗೆ ಕದಳಿಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀಮತಿ ನೀಲಗಂಗಾ ಚರಂತಿಮಠರವರ 'ಮುಕ್ತಾಂಗನೆ ಮಹಾಕಾವ್ಯ' ಕೃತಿ ಬಿಡುಗಡೆಗೊಳಿಸಲಾಯಿತು. ಗದಗ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಸಾಹಿತಿಗಳಾದ ಡಾ. ಗೊ.ರು. ಚನ್ನಬಸಪ್ಪನವರು ಉದ್ಘಾಟಿಸಿದರು. ಶ್ರೀಮತಿ ಸುಶೀಲಾ ಸೋಮಶೇಖರ ಮಾತನಾಡಿದರು. ಶ್ರೀಮತಿ ನಯನಾ ಗಿರಿಗೌಡರ ಪ್ರಾರ್ಥಿಸಿದರು. ಶ್ರೀಮತಿ ಪ್ರೇಮಕ್ಕ ಅಂಗಡಿ ಸ್ವಾಗತಿಸಿದರು. ಶ್ರೀ ಅಶೋಕ ಮಳಗಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ರಾಜೇಶ್ವರಿ ಕವಟಗಿಮಠ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ವಿದ್ಯಾ ನೀಲಪ್ಪನವರ ವಂದಿಸಿದರು. ಶ್ರೀಮತಿ ಗೌರಮ್ಮ ಕರ್ಕಿ ಕಾರ್ಯಕ್ರಮ ನಿರೂಪಿಸಿದರು.

**ನಿವೃತ್ತಿ ನಂತರವೂ ಪ್ರೊ. ಹೇಮಂತಕುಮಾರ್ ಮಾರ್ಗದರ್ಶನ ಅಗತ್ಯ**

ಪ್ರೊ. ಜಿ. ಹೇಮಂತಕುಮಾರ್‌ರವರು ನಿವೃತ್ತಿಯ ನಂತರವೂ ಶೈಕ್ಷಣಿಕ–ಸಾಮಾಜಿಕ ಕಾರ್ಯಗಳಲ್ಲಿ ಸದಾ ಸಕ್ರಿಯರಾಗಿರಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 14ರಂದು ಮೈಸೂರು ವಿವಿಯ ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಿದ್ದ ಪ್ರೊ. ಜಿ. ಹೇಮಂತಕುಮಾರ್‌ರವರ ಅಭಿನಂದನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಹೇಮಂತಕುಮಾರ್‌ರವರು ಜ್ಞಾನ ಪಿಪಾಸುಗಳು. ಆಧ್ಯಾತ್ಮದಲ್ಲಿ ಶ್ರದ್ಧೆಯನ್ನು ಹೊಂದಿದ್ದಾರೆ. ವಿವಿಯಿಂದ ಗುಣಾತ್ಮಕ ಶಿಕ್ಷಣ ನೀಡಲು ಶ್ರಮಿಸಿದ್ದಾರೆ ಎಂದು ಹೇಳಿದರು.

ಪ್ರೊ. ಜಿ. ಹೇಮಂತಕುಮಾರ್‌ರವರು ಜೆಎಸ್‌ಎಸ್ ಸಂಸ್ಥೆಯಲ್ಲಿ ಪ್ರೌಢಶಾಲಾ ಶಿಕ್ಷಕನಾಗಿ ವೃತ್ತಿ ಜೀವನ ಆರಂಭಿಸಿದೆ. ಮೈಸೂರು ವಿವಿಯಲ್ಲಿ ಓದಿ, ಇಲ್ಲಿಯೇ ಉಪನ್ಯಾಸಕನಾಗಿ, ಪ್ರಾಧ್ಯಾಪಕನಾಗಿ ನಂತರ ಕುಲಪತಿಯಾಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. ಉತ್ತಮವಾದ ಕೆಲಸಗಳನ್ನು ಮಾಡಿರುವ ಸಮಾಧಾನವಿದೆ ಎಂದರು.

ಕಾರ್ಯಕ್ರಮದಲ್ಲಿ 'ಹೇಮಂತ' ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಲಾಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಶ್ರೀ ಟಿ.ಎಸ್. ನಾಗಾಭರಣ ಅಭಿನಂದನಾ ನುಡಿಗಳನ್ನಾಡಿದರು. ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪ, ಪ್ರೊ. ಎನ್.ಎಸ್. ರಾಮೇಗೌಡ, ಪ್ರೊ. ಎಸ್.ಆರ್. ನಿರಂಜನ ಮಾತನಾಡಿದರು. ಪ್ರೊ. ಎಸ್.ಎನ್. ಹೆಗಡೆ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಸಿ. ನಾಗಣ್ಣ ಸ್ವಾಗತಿಸಿದರು. ಪ್ರೊ. ಎನ್.ಎಂ. ತಳವಾರ್ ಅಭಿನಂದನಾ ಪತ್ರ ವಾಚಿಸಿದರು. ಡಾ. ನಿಂಗರಾಜು ಮತ್ತು ತಂಡದವರು ನಾಡಗೀತೆ ಹಾಡಿದರು. ಲಲಿತಕಲಾ ಕಾಲೇಜು ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಪ್ರೊ. ಎಸ್. ಶ್ರೀಕಂಠಸ್ವಾಮಿ ವಂದಿಸಿದರು. ಡಾ. ಜೆ. ಲೋಹಿತ್ ಕಾರ್ಯಕ್ರಮ ನಿರೂಪಿಸಿದರು.

**ಜಗತ್ತಿನ ಎದುರು ದೇಶದ ಸಂಸ್ಕೃತಿಯ ಅನಾವರಣವಾಗಬೇಕಿದೆ**

ಯುವ ಜನರಿಂದ ಜಗತ್ತಿನ ಎದುರು ದೇಶದ ಸಂಸ್ಕೃತಿಯ ಅನಾವರಣವಾಗಬೇಕಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 15ರಂದು ಯಳಂದೂರು ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಆಯೋಜಿಸಿದ್ದ ರಾಜೇಂದ್ರ ಶ್ರೀಗಳವರ 107ನೇ ಜಯಂತಿ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶಿವದೀಕ್ಷೆ–ಲಿಂಗದೀಕ್ಷೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಯುವ ಸಮೂಹ ದೇಶಭಕ್ತಿಯನ್ನು ಬೆಳೆಸಿಕೊಳ್ಳಬೇಕು. ಪ್ರಾಚೀನ ಸಂಸ್ಕೃತಿಯನ್ನು ರಕ್ಷಿಸುವ ವಾರಸುದಾರರನ್ನಾಗಿ ಮಕ್ಕಳನ್ನು ಬೆಳೆಸುವ ಕಾರ್ಯವಾಗಬೇಕು. ಮಕ್ಕಳು ಪುಣ್ಯಪುರುಷರನ್ನು ಆದರ್ಶವಾಗಿಟ್ಟುಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ರಾಜೇಂದ್ರ ಶ್ರೀಗಳವರ ಜೀವನ ನಮಗೆಲ್ಲ ಉತ್ತಮ ಸಂದೇಶವಾಗಿದೆ. ಅವರ ತ್ಯಾಗ ಅಪಾರವಾದುದು. ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದರು. ಪೂಜ್ಯರು ಬಡವರ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದರು ಎಂದರು.

ಸಚಿವರಾದ ಶ್ರೀ ವಿ. ಸೋಮಣ್ಣನವರು ಸಾವಿರಾರು ವರ್ಷಗಳ ಇತಿಹಾಸವಿರುವ ಸುತ್ತೂರು ಮಠ ವಿಶ್ವದೆಲ್ಲೆಡೆ ಕೀರ್ತಿ ಗಳಿಸಿದೆ. ಸಮಾಜಕ್ಕೆ ರಾಜೇಂದ್ರ ಶ್ರೀಗಳ ಕೊಡುಗೆ ಅಪಾರ. ನಾಡಿನ ಮಠಗಳು ಪರಂಪರೆಯನ್ನು ಸಾರುವ ಮತ್ತು ಸಂಸ್ಕೃತಿಯನ್ನು ಕಲಿಸುವ ಕೇಂದ್ರಗಳು ಎಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಶ್ರೀ ಡಿ.ಎಸ್. ರಮೇಶ್‌ರವರು ಇಂದು ನಾವು ಸ್ಪರ್ಧಾ ಜಗತ್ತಿನಲ್ಲಿದ್ದೇವೆ. ಈ ಹೋರಾಟದ ಜೀವನದಲ್ಲಿ ಎಲ್ಲಿ ನೋಡಿದರೂ ಅಧರ್ಮದ ಕಾರ್ಯಗಳು ಹೆಚ್ಚುತ್ತಿವೆ. ಧರ್ಮದ ಸಂಸ್ಥಾಪನೆಗಾಗಿ ಮಠಾಧೀಶರುಗಳು, ಮಹನೀಯರು ನಮ್ಮನ್ನು ಧರ್ಮದ ಕಡೆಗೆ ಕರೆದುಕೊಂಡು ಹೋಗುತ್ತಿದ್ದಾರೆ. ದಯವೇ ಧರ್ಮದ ಮೂಲವಯ್ಯ ಎಂದು ಬಸವಣ್ಣನವರು ಹೇಳಿರುವ ರೀತಿ ಧರ್ಮವನ್ನು ಸರಳವಾಗಿ ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಕಾತ್ಯಾಯಿನಿ, ಡಿವೈಎಸ್‌ಪಿ ಶ್ರೀ ಸುಂದರ್‌ರಾಜ್ ಉಪಸ್ಥಿತರಿದ್ದರು. ಕೆಸ್ತೂರು ಶ್ರೀಗಳು ಪ್ರಾರ್ಥಿಸಿದರು. ಹರವೆ ಶ್ರೀಗಳು ಸ್ವಾಗತಿಸಿದರು. ಮುಡಿಗುಂಡ ಶ್ರೀಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಗರ ಕಲ್ಮಠ ಶ್ರೀಗಳು ಪ್ರತಿಭಾ ಪುರಸ್ಕೃತರ ಪಟ್ಟಿಯನ್ನು ಓದಿದರು. ಗೌಡಳ್ಳಿ ಶ್ರೀಗಳು ವಂದಿಸಿದರು. ಕುಂದೂರು ಮಠದ ಶ್ರೀಗಳು ಕಾರ್ಯಕ್ರಮ ನಿರೂಪಿಸಿದರು.

**ಹಿರಿಯರಿಗೆ ಪ್ರೀತಿ–ವಾತ್ಸಲ್ಯಗಳು ಅವಶ್ಯ**

ಹಿರಿಯ ಜೀವಗಳಿಗೆ ಮಕ್ಕಳು ಮತ್ತು ಮೊಮ್ಮಕ್ಕಳ ಪ್ರೀತಿ–ವಾತ್ಸಲ್ಯಗಳು ಅವಶ್ಯ

ಎಂದು ಪರಮಪೂಜ್ಯ ಜಗದ್ಗುರುಗಳವರು ಮೈಸೂರು ಕಲಾಮಂದಿರದಲ್ಲಿ ನವೆಂಬರ್ 16ರಂದು ಅಖಿಲ ಭಾರತ ಹಿರಿಯ ನಾಗರಿಕರ ಒಕ್ಕೂಟದ ವತಿಯಿಂದ ಆಯೋಜಿಸಿದ್ದ 20ನೇ ರಾಷ್ಟ್ರೀಯ ಹಿರಿಯ ನಾಗರಿಕರ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ದೇಶದಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿರುವುದು ವಿಷಾದಕರ ಸಂಗತಿ. ಕೆಲವರು ಹಣ ಇದೆ ಎಂದು ಅವರ ವಯಸ್ಸಾದ ಪೋಷಕರನ್ನು ಹಣ ತೆತ್ತು ವೃದ್ಧಾಶ್ರಮಗಳಿಗೆ ಸೇರಿಸುತ್ತಾರೆ. ವಯಸ್ಸಾದ ಹಿರಿಯ ಜೀವಗಳಿಗೆ ಬೇಕಿರುವುದು ಮಕ್ಕಳು, ಮೊಮ್ಮಕಳ ಪ್ರೀತಿ ಮತ್ತು ವಾತ್ಸಲ್ಯವೇ ಹೊರತು ದೂರದ ಊರಿನಿಂದ ಕಳುಹಿಸುವ ಹಣವಲ್ಲ. ಮೈಸೂರು ನಗರವನ್ನು ನಿವೃತ್ತರ ಸ್ವರ್ಗ ಎಂದು ಹೇಳಲಾಗುತ್ತದೆ. ಇಲ್ಲಿ ಯಾವುದೇ ರೀತಿಯ ಅಶಾಂತಿ ಉಂಟುಮಾಡುವ ಘಟನೆಗಳು ಸಂಭವಿಸುವುದಿಲ್ಲ. ಅಂತಹ ಸ್ಥಳದಲ್ಲಿ ರಾಜ್ಯಮಟ್ಟದ ಸಮ್ಮೇಳನ ಆಯೋಜಿಸಿರುವುದು ಸಂತೋಷದ ಸಂಗತಿ ಎಂದರು.

ಬೆಳಗಾವಿಯ ವಿಜಯ್ ಹೆಲ್ತ್ ಇನ್ಸ್ಟ್ಯೂಷನ್‌ನ ಡಾ. ರವಿ ಪಾಟೀಲ್, ಸಮ್ಮೇಳನದ ರಾಷ್ಟೀಯ ಅಧ್ಯಕರಾದ ಶ್ರೀ ಪ್ರಿನ್ಸಿಪಾಲ್‌ವಿಶ್ವಾಸ್‌ರಾವ್ ಭಡಾನೆ ಮಾತನಾಡಿದರು. ಒಕ್ಕೂಟದ ಅಧ್ಯಕ್ಷ ಶ್ರೀ ಡಿ. ರವೀಂದ್ರನಾಥ್, ಶ್ರೀ ಶ್ರೀಹರಿ ಶಿಧಾಯೆ, ಶ್ರೀ ಮಲ್ಲಪ್ಪ ಮುದಕವಿ ಮುಂತಾದವರು ಉಪಸ್ಥಿತರಿದ್ದರು. ಡಾ. ಮನೋಮಣಿ ಪ್ರಾರ್ಥಿಸಿದರು. ಶ್ರೀ ಪ್ರಭು ಮತ್ತು ತಂಡದವರು ನಾಡಗೀತೆ ಹಾಡಿದರು. ಶ್ರೀ ಎನ್. ಓಬಯ್ಯ ಸ್ವಾಗತಿಸಿದರು. ಶ್ರೀ ಎ.ವೈ. ಬೆಂಡಿಗೇರಿ ವಂದಿಸಿದರು.

**ಕನ್ನಡವನ್ನೇ ಹೆಚ್ಚು ಬಳಸಿ**

ಪ್ರತಿಯೊಬ್ಬ ಕನ್ನಡಿಗರೂ ಕಡ್ಡಾಯವಾಗಿ ಕನ್ನಡದಲ್ಲಿ ಮಾತನಾಡುವ, ಬರೆಯುವುದು ಹಾಗೂ ಓದುವುದನ್ನು ರೂಢಿಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 17ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಆವರಣದಲ್ಲಿ ಭುವನೇಶ್ವರಿ ಪುತ್ತಳಿಯ ಅನಾವರಣದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಕಿಟ್ಟೆಲ್‌ರ ಕನ್ನಡ ಪ್ರೀತಿ ಕನ್ನಡಿಗರಿಗೆ ಪ್ರೇರಕವಾಗಬೇಕು. ಕನ್ನಡದ ಅನೇಕ ಹಸ್ತಪ್ರತಿಗಳು ಇನ್ನೂ ಮುದ್ರಣವಾಗದೇ ಉಳಿದಿದ್ದು, ಅವುಗಳನ್ನು ಮುದ್ರಿಸುವ ಕಾರ್ಯವಾಗಬೇಕು. ಪರಿಷತ್ತು ಈ ನಿಟ್ಟಿನಲ್ಲಿ ಹೆಚ್ಚು ಗಮನಹರಿಸಬೇಕು ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಕನ್ನಡದ ಹಿರಿಮೆ ಮತ್ತು ಕನ್ನಡಿಗರ ಸಾಧನೆಯನ್ನು ಪ್ರಚಾರ ಮಾಡುವಲ್ಲಿ ನಾವು ಹಿಂದೆ ಇದ್ದೇವೆ. ಏಕೀಕರಣಕ್ಕೆ ದುಡಿದ ಅನೇಕ ಮಹನೀಯರನ್ನು ಇಂದು ನಾವು ಮರೆತಿದ್ದೇವೆ. ಅಂತಹ ಸಾಧಕರನ್ನು ನೆನೆಯುವುದರ ಜತೆಗೆ ಮುಂದಿನ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕು ಎಂದರು.

ಗೌ.ನ್ಯಾ. ಶ್ರೀ ಶಿವರಾಜ್ ವಿ. ಪಾಟೀಲ್‌ರವರು, ಶ್ರೀಮತಿ ಸಂಧ್ಯಾ ಎಸ್. ಪೈ, ಶ್ರೀ ಎಂ.ಜಿ. ಹಿರೇಮಠ, ಶ್ರೀಮತಿ ಆಲ್ಮತ್ ಕಿಟ್ಟೆಲ್‌ರವರುಗಳು ಮಾತನಾಡಿದರು.

ಶ್ರೀ ನೇ.ಭ. ರಾಮಲಿಂಗಶೆಟ್ಟಿ ಸ್ವಾಗತಿಸಿದರು. ಡಾ. ಮಹೇಶ್ ಜೋಷಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೆ. ಮಹಾಲಿಂಗಯ್ಯ ವಂದಿಸಿದರು.

## ಭೀಷ್ಮ ಮಾನವ ಬದುಕಿನ ಪ್ರತೀಕ

ಭೀಷ್ಮ ಮಾನವ ಬದುಕಿನ ಪ್ರತೀಕ ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪ ಮೊಯ್ಲಿಯವರು ನವೆಂಬರ್ 20ರಂದು ಮೈಸೂರು ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಕೃಷ್ಣ ತಿಪ್ಪೂರುರವರ 'ಭೀಷ್ಮ' ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಾ ತಿಳಿಸಿದರು. ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಮನುಷ್ಯನ ಬದುಕಿಗೆ ಪಾಠ ಕಲಿಸುತ್ತವೆ. ಆದಿಕವಿ ಪಂಪ ಹತ್ತನೇ ಶತಮಾನದಲ್ಲೇ ಮನುಷ್ಯ ಜಾತಿ ತಾನೊಂದೇ ವಲಂ ಎಂದು ಹೇಳಿದ್ದಾನೆ. ಮಹಾಭಾರತದ ಭೀಷ್ಮನ ಬದುಕಿನ ವಿಷಮ ಸ್ಥಿತಿಯನ್ನು 'ಭೀಷ್ಮ' ಕೃತಿಯಲ್ಲಿ ಅದ್ಭುತವಾಗಿ ಅನಾವರಣಗೊಳಿಸಲಾಗಿದೆ ಎಂದು ಹೇಳಿದರು.

ಮಾಜಿ ಶಾಸಕರಾದ ಶ್ರೀ ವಾಸು, ಡಾ. ಪದ್ಮಾ ಶೇಖರ್, ಪ್ರೊ. ಬಿ.ಸಿ. ಚಿಲ್ಕರಾಗಿ. ಪ್ರೊ. ನೀ. ಗಿರಿಗೌಡ ಮಾತನಾಡಿದರು. ಡಾ. ಗೋವಿಂದ ಶೆಟ್ಟಿ, ಶ್ರೀ ಡಿ.ಎನ್. ಲೋಕಪ್ಪ ಉಪಸ್ಥಿತರಿದ್ದರು. ವಿದುಷಿ ಶಶಿಕಲಾ ಚಂದ್ರಶೇಖರ್ ಪ್ರಾರ್ಥಿಸಿದರು. ಪ್ರೊ. ಎಸ್. ಕೃಷ್ಣಮೂರ್ತಿ ಸ್ವಾಗತಿಸಿದರು. ಪ್ರೊ. ಎಂ. ನೀಲಗಿರಿ ತಳವಾರ್ ಕೃತಿ ಕುರಿತು ಮಾತನಾಡಿದರು. ಪ್ರೊ. ಸಾಲುಂಡಿ ಬಸಪ್ಪ ಕಾರ್ಯಕ್ರಮ ನಿರೂಪಿಸಿದರು.

## ಸುತ್ತೂರಿನಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಪುಣ್ಯವಂತರು

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಪುಣ್ಯವಂತರು ಎಂದು ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕರಾದ ಶ್ರೀ ಎನ್.ಆರ್. ನಾರಾಯಣ ಮೂರ್ತಿಯವರು ನವೆಂಬರ್ 21ರಂದು ಪ್ರಾರ್ಥನಾ ಸಭೆಯಲ್ಲಿ ಜೆಎಸ್‌ಎಸ್ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಸುತ್ತೂರು ಮಠವು ಜಾತಿ, ಮತ, ಭೇದವಿಲ್ಲದೆ ಸರ್ವಜನಾಂಗದ ಶಾಂತಿಯ ತೋಟದಂತೆ ವಿವಿಧ ಜಿಲ್ಲೆ, ರಾಜ್ಯಗಳಿಂದ ಬಂದಿರುವಂತಹ ಬಡ ಮಕ್ಕಳಿಗೆ ವಸತಿ, ಶಿಕ್ಷಣ ಮತ್ತು ಸಂಸ್ಕಾರವನ್ನು ಕೊಟ್ಟು ಮಕ್ಕಳನ್ನು ಸಮಾಜದ ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತಿದೆ. ದೇಶ ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಗುಣಾತ್ಮಕ ಶಿಕ್ಷಣವನ್ನು ನೀಡುವ ಮೂಲಕ ಶ್ರೀಮಠವು ಸಮಾಜಕ್ಕೆ ಅನನ್ಯ ಕೊಡುಗೆಗಳನ್ನು ನೀಡುತ್ತಿದೆ. ಸತತ ಪರಿಶ್ರಮದಿಂದ ಶಿಕ್ಷಣವನ್ನು ಪಡೆದು ದೇಶಕ್ಕೆ ಏನಾದರೂ ಕೊಡುಗೆ ನೀಡುವಂತಹ ಪ್ರಜ್ಞಾವಂತ ಪ್ರಜೆಗಳಾಗಬೇಕು ಎಂದು ಮಕ್ಕಳಿಗೆ ಹೇಳಿದರು.

ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಸುಧಾ ಮೂರ್ತಿಯವರು, 'ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ, ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ' ಎಂಬ ವಚನದಂತೆ ವಿದ್ಯಾರ್ಥಿಗಳು ಗುರಿ ಮತ್ತು ಉದ್ದೇಶಗಳನ್ನು

ಈಡೇರಿಸಿಕೊಳ್ಳಬೇಕಾದರೆ, ಸತತ ಓದು ಹೇಗೆ ಮುಖ್ಯವೋ ಹಾಗೆಯೇ ಏಕಾಗ್ರತೆಯೂ ಕೂಡ ಬಹಳ ಮುಖ್ಯವಾಗಿರುತ್ತದೆ. ಗುರು–ಹಿರಿಯರನ್ನು ಪ್ರೀತಿ ಗೌರವದಿಂದ ಕಾಣಬೇಕು. ಇಂದಿನ ಸಮಾಜಕ್ಕೆ ಅವರ ಸಲಹೆ ಮತ್ತು ಮಾರ್ಗದರ್ಶನ ಅತ್ಯವಶ್ಯಕವಾಗಿದೆ ಎಂದರು.

ಪರಮಪೂಜ್ಯ ಜಗದ್ಗುರುಗಳವರು ಶ್ರೀ ನಾರಾಯಣಮೂರ್ತಿ ಹಾಗೂ ಶ್ರೀಮತಿ ಸುಧಾ ಮೂರ್ತಿರವರು ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿದ್ದು, ಜನಸಾಮಾನ್ಯರಂತೆ ಜೀವನ ನಡೆಸುತ್ತಿದ್ದಾರೆ. ಇನ್ಫೋಸಿಸ್ ಸಂಸ್ಥೆಯನ್ನು ಸ್ಥಾಪಿಸುವ ಸಂದರ್ಭದಲ್ಲಿ ಚಿನ್ನದ ಒಡವೆಗಳನ್ನು ಮಾರಿ ಸಣ್ಣದಾಗಿ ಸಂಸ್ಥೆಯನ್ನು ಕಟ್ಟಿದರು. ಇಂದು ಈ ಸಂಸ್ಥೆಯು ಬೃಹದಾಕಾರವಾಗಿ ಬೆಳೆದು, ಪ್ರಪಂಚದ ಪ್ರತಿಷ್ಠಿತ ಕಂಪೆನಿಗಳಲ್ಲಿ ಒಂದಾಗಿದೆ. ಸಂಸ್ಥೆಯಲ್ಲಿ ಮೂರು ಲಕ್ಷ ಜನರಿಗೆ ಉದ್ಯೋಗವನ್ನು ನೀಡಿ, ಅವರುಗಳನ್ನು ಕುಟುಂಬದ ಸದಸ್ಯರಂತೆ ಕಾಣುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಗಳ ಮುಖ್ಯಸ್ಥರುಗಳು ಹಾಗೂ ಇತರರು ಉಪಸ್ಥಿತರಿದ್ದರು. ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

### ಆತ್ಮಾವಲೋಕನ ಮತ್ತು ಚಿಂತನೆಯ ಅಗತ್ಯವಿದೆ

ಪೂರ್ವಿಕರಲ್ಲಿದ್ದ ದೈವಭಕ್ತಿ ಇಂದಿನವರಲ್ಲಿ ಕಾಣುತ್ತಿಲ್ಲ. ಆದ್ದರಿಂದ ಆತ್ಮಾವಲೋಕನ ಮತ್ತು ಚಿಂತನೆಯ ಅಗತ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 24ರಂದು ಮದ್ದೂರು ತಾಲ್ಲೂಕು ಚಂದೂಪುರದ ಶ್ರೀ ರೇಣುಕಾಶ್ರಮದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳವರ ದ್ವಿತೀಯ ವರ್ಷದ ಸಂಸ್ಮರಣೆ ಮತ್ತು ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮನುಷ್ಯ ಸಮಾಜದಲ್ಲಿ ಎಷ್ಟು ಒಳ್ಳೆಯ ಕಾರ್ಯ ಮಾಡಿದ್ದಾನೆ ಎಂಬುದು ಮುಖ್ಯವಾಗುತ್ತದೆಯೇ ಹೊರತು, ಎಷ್ಟು ದಿನ ಬದುಕಿದ್ದಾನೆ ಎಂಬುದು ಮುಖ್ಯವಲ್ಲ. ಭಗವಂತನ ಆಶೀರ್ವಾದ ಇರುವವರೆಗೂ ಮನುಷ್ಯ ಮತ್ತು ಪ್ರಾಣಿಪಕ್ಷಿಗಳು ಬದುಕುತ್ತವೆ ಎಂದು ಹೇಳಿದರು.

ಕನಕಪುರ ದೇಗುಲಮಠ ಮತ್ತು ಮರಳೇಗವಿಮಠಗಳ ಶ್ರೀಗಳು, ಶಾಸಕರಾದ ಶ್ರೀ ಡಿ.ಸಿ. ತಮ್ಮಣ್ಣ ಮಾತನಾಡಿದರು. ತೋಪಿನಮಠ, ಹೊನ್ನಲಗೆರೆ, ಕವಲೇದುರ್ಗ, ಚಂದ್ರವನ ಆಶ್ರಮ, ಪೂರಿಗಾಲಿ, ರಾಜಾಪುರ, ಗುರುವಿನಪುರ ಮಠಗಳ ಶ್ರೀಗಳು, ಶ್ರೀ ಕದಲೂರು ಉದಯ್, ಶ್ರೀ ಪ್ರಶಾಂತ್‌ಕಲ್ಲೂರು ಮೊದಲಾದವರು ಉಪಸ್ಥಿತರಿದ್ದರು.

### ಕ್ರೀಡೆಯಲ್ಲಿ ಸೋಲು ಮತ್ತು ಗೆಲುವುಗಳನ್ನು ಸಮನಾಗಿ ಸ್ವೀಕರಿಸಬೇಕು

ಕ್ರೀಡೆಯಲ್ಲಿ ಸೋಲು ಮತ್ತು ಗೆಲುವುಗಳನ್ನು ಸಮನಾಗಿ ಸ್ವೀಕರಿಸಬೇಕು ಎಂದು ಕ್ರೀಡಾಪಟುಗಳಿಗೆ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ. ಕೆ.ಸಿ. ನಾರಾಯಣಗೌಡರು ನವೆಂಬರ್ 28ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆಯ ಅಂಗವಾಗಿ

ಆಯೋಜಿಸಿದ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡುತ್ತಾ ಕ್ರೀಡೆಗಳನ್ನು ಪ್ರೋತ್ಸಾಹಿಸುತ್ತಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಕಾರ್ಯ ನಿಜಕ್ಕೂ ಶ್ಲಾಘನೀಯವಾಗಿದೆ. ಸಂಸ್ಥೆಯು ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಒತ್ತು ನೀಡುತ್ತಾ ಬರುತ್ತಿದೆ ಎಂದರು.

ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರಾಜ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮಾತನಾಡಿದರು. ಜೆಎಸ್‌ಎಸ್‌ನ ವಿವಿಧ ಸಂಸ್ಥೆಗಳಿಂದ ಆಗಮಿಸಿದ್ದ ಕ್ರೀಡಾ ತಂಡಗಳು ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿ, ಪಥಸಂಚಲನ ನಡೆಸಿದವು. 3 ದಿನಗಳ ಕ್ರೀಡಾಕೂಟದಲ್ಲಿ ಸುಮಾರು 3316 ವಿದ್ಯಾರ್ಥಿಗಳು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀ ಜಯರಾಜೇಂದ್ರರು, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಎಸ್.ಪಿ. ಉದಯಶಂಕರ್, ಶ್ರೀ ಗುಂಡಪ್ಪಗೌಡರು, ಶ್ರೀ ಪಿ. ವಿಶ್ವನಾಥ್, ಶ್ರೀ ಎಸ್.ಸಿ. ಬಸವರಾಜು ಹಾಗೂ ಸಂಸ್ಥೆಗಳ ಮುಖ್ಯಸ್ಥರುಗಳು ಉಪಸ್ಥಿತರಿದ್ದರು. ಸುತ್ತೂರು ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಲೋಕೇಶಪ್ಪ ಸ್ವಾಗತಿಸಿದರು. ಶ್ರೀ ಹೆಚ್.ಎಸ್. ಗಂಗಾಧರಸ್ವಾಮಿ ವಂದಿಸಿದರು. ಶ್ರೀ ಡಿ.ಎಂ. ಸಿದ್ದಲಿಂಗಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ರಾಜೇಂದ್ರ ಶ್ರೀಗಳವರ ಪುಣ್ಯಾರಾಧನೆ**

ಶ್ರೀ ಸುತ್ತೂರು ಕ್ಷೇತ್ರದಲ್ಲಿ ನವೆಂಬರ್ 28ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 36ನೆಯ ಪುಣ್ಯಾರಾಧನೆಯ ಅಂಗವಾಗಿ ಪ್ರಾತಃಕಾಲ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಹಾಗೂ ರಾಜೇಂದ್ರ ಶ್ರೀಗಳವರ ಗದ್ದುಗೆಯಲ್ಲಿ ರುದ್ರಾಭಿಷೇಕ, ಅಷ್ಟೋತ್ತರ ಪ್ರಾಕಾರೋತ್ಸವಗಳು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದವು.

2023ರ ಜನವರಿ 18ರಿಂದ 23ರವರೆಗೆ ಶ್ರೀಕ್ಷೇತ್ರದಲ್ಲಿ ಜರುಗುವ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ದಾಸೋಹ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಭಾಗೃಹ ಹಾಗೂ ಎಲ್ಲ ಮಂಟಪಗಳ ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

ವಿವಿಧ ಸಮಿತಿಗಳ ಸಂಚಾಲಕರು, ಸುತ್ತಮುತ್ತಲ ಗ್ರಾಮಗಳ ಮುಖಂಡರು ಹಾಗೂ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಜಾತ್ರಾಮಹೋತ್ಸವದ ಪೂರ್ವಭಾವಿ ಸಮಾಲೋಚನಾ ಸಭೆ ನಡೆಯಿತು. ಈ ಸಂದರ್ಭದಲ್ಲಿ ವಾಟಾಳು, ಬೆಟ್ಟದಪುರ, ಚಿಕ್ಕತುಪ್ಪೂರು, ಮಾದಹಳ್ಳಿ, ಕುದೇರು, ಚುಂಚನಹಳ್ಳಿ, ನಂಜನಗೂಡು, ರಾಗಿಬೊಮ್ಮನಹಳ್ಳಿ

ಮಠಗಳ ಶ್ರೀಗಳವರು, ಹರಗುರು ಚರಮೂರ್ತಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು. ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು. ಶ್ರೀ ಸುಬ್ಬಪ್ಪ ಸ್ವಾಗತಿಸಿದರು. ಶ್ರೀ ಹೆಚ್.ಎಲ್ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

**ಸುಂದರ ಬದುಕು**

ಮನುಷ್ಯ ದ್ವೇಷ ಕ್ರೌರ್ಯದ ಭಾವನೆಗಳನ್ನು ಮರೆತು ಪ್ರೀತಿ, ಸ್ನೇಹ, ಕರುಣೆಯಿಂದ ಬಾಳಿದರೆ ಬದುಕು ಸುಂದರವಾಗಿರುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 25ರಂದು ಚಿಕ್ಕಮಗಳೂರಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ 'ವಚನ ಚಳುವಳಿ – ಅರಿವು ಅನುಸರಣೆ' ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದ ಸನ್ಮಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. 12ನೇ ಶತಮಾನದ ಶರಣರ ಸಂದೇಶಗಳನ್ನು ನಾಡಿನ ಜನರಿಗೆ ತಲುಪಿಸಿ, ಬದುಕಿನಲ್ಲಿ ಅಳವಡಿಸಿಕೊಳ್ಳಲು ಪ್ರೇರೆಪಿಸುವುದು ಪರಿಷತ್ತಿನ ಉದ್ದೇಶವಾಗಿದೆ. ಚಿಕ್ಕಮಗಳೂರು ಎಲ್ಲ ರೀತಿಯಿಂದಲೂ ಶ್ರೀಮಂತವಾದ ಜಿಲ್ಲೆ. ಮಲೆನಾಡಿನ ಇಂತಹ ಸ್ಥಳದಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ಸಂತಸದ ಸಂಗತಿ. 1900ರಲ್ಲಿ ನಡೆದ ಸಮ್ಮೇಳನದ ನೆನಪುಗಳು ಜನರ ಮನಸ್ಸಿನಲ್ಲಿ ಇನ್ನೂ ಹಚ್ಚಹಸಿರಾಗಿ ಉಳಿದಿವೆ ಎಂದರು.

ಶ್ರೀ ಸಿ.ಎನ್.ಆಕ್ಮಲ್, ಪ್ರೊ. ಮಲೆಯೂರು ಗುರುಸ್ವಾಮಿ, ಶ್ರೀ ಬಿ. ತಿಪ್ಪೇರುದ್ರಪ್ಪ, ಶ್ರೀ ಚಟ್ನಹಳ್ಳಿ ಮಹೇಶ್, ಶ್ರೀ ರವಿ ಕ್ಯಾತನಬೀಡು ಮೊದಲಾದವರುಗಳು ಉಪಸ್ಥಿತರಿದ್ದರು. ಶ್ರೀ ಮಂಜುನಾಥ್‌ಹುಲಿಕೆರೆ ಸ್ವಾಗತಿಸಿದರು. ಶ್ರೀ ಸಿದ್ಧಯ್ಯ ವಂದಿಸಿದರು. ಶ್ರೀ ವಿರೂಪಾಕ್ಷಪ್ಪ ಕಾರ್ಯಕ್ರಮ ನಿರೂಪಿಸಿದರು.

**ಸಾತ್ವಿಕ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ**

ಸಾತ್ವಿಕವಾದ ಆಹಾರವನ್ನು ಸೇವಿಸುವುದರ ಮೂಲಕ ಆರೋಗ್ಯವನ್ನು ಉತ್ತಮವಾಗಿರಿಸಿ ಕೊಳ್ಳಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್30ರಂದು ಮೈಸೂರು ಸುಯೋಗ್‌ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಲೇಖಕರಾದ ಡಾ. ಎಸ್.ಪಿ. ಯೋಗಣ್ಣನವರ 'ಆರೋಗ್ಯ ಮಿತ್ರ' ಕೃತಿ ಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ಖ್ಯಾತ ಹೃದ್ರೋಗ ತಜ್ಞರಾದ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು. ಪ್ರೊ. ಸಿ. ನಾಗಣ್ಣ ಡಾ. ಯೋಗಣ್ಣನವರ ಸಮಗ್ರ ವೈದ್ಯ ಸಾಹಿತ್ಯದ ಕುರಿತು ಮಾತನಾಡಿದರು. ಡಾ. ತಿರುಮಲಾಚಾರ್‌ಅಧ್ಯಕ್ಷತೆ ವಹಿಸಿದ್ದರು. ಡಾ. ಎಸ್.ಪಿ. ಯೋಗಣ್ಣ ಸ್ವಾಗತಿಸಿದರು. ಶ್ರೀ ಡಿ.ಎನ್.ಲೋಕಪ್ಪ ವಂದಿಸಿದರು. ಶ್ರೀ ಎಂ. ಚಂದ್ರಶೇಖರ್‌ಕಾರ್ಯಕ್ರಮ ನಿರೂಪಿಸಿದರು.

**ಮನುಷ್ಯ ಸದಾ ಹರಿಯುವ ನದಿಯಂತಿರಬೇಕು**

ಮನುಷ್ಯ ನಿಂತ ನೀರಿನಂತೆ ಆಗದೇ, ಸದಾ ಹರಿಯುವ ನದಿಯಂತೆ ಇರಬೇಕು. ಹಾಗಾದಾಗ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 3ರಂದು ಚಾಮರಾಜನಗರದ ಜೆಎಸ್‌ಎಸ್‌ಮಹಿಳಾ ಕಾಲೇಜಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಏರ್ಪಡಿಸಿದ್ದ ಪ್ರಶಸ್ತಿ–ಪುರಸ್ಕಾರ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಸಮಾಜಸೇವೆಯಲ್ಲಿ ತೊಡಗಿಸಿಕೊಂಡವರಿಗೆ ರಾಜೇಂದ್ರ ಶ್ರೀಗಳ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಶ್ಲಾಘನೀಯ ಎಂದರು.

ದೀನಬಂಧು ಟ್ರಸ್ಟ್‌ನ ಪ್ರೊ. ಜಿ.ಎಸ್.ಜಯದೇವರವರಿಗೆ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸೇವಾ ಪ್ರಶಸ್ತಿ, ಗುಂಡ್ಲುಪೇಟೆ ತಾಲ್ಲೂಕು ಹೊಂಗಹಳ್ಳಿ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಮಹದೇಶ್ವರಸ್ವಾಮಿಯವರಿಗೆ ಶ್ರೀ ಕೆ.ಸಿ. ಚಿಕ್ಕವೀರಯ್ಯ ಶಿಕ್ಷಕ ಪ್ರಶಸ್ತಿ, ಮರಿಯಾಲ ಶ್ರೀ ಮುರುಘರಾಜೇಂದ್ರಸ್ವಾಮಿ ಪ್ರೌಢಶಾಲೆಯ ವಿದ್ಯಾರ್ಥಿನಿ ಕು. ಸ್ಫೂರ್ತಿಯವರಿಗೆ ಶ್ರೀ ಕೆ.ಸಿ. ಶಿವಪ್ಪ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಶಂಕರ ದೇವನೂರು, ಪ್ರೊ. ಜಿ.ಎಸ್. ಜಯದೇವ, ಶ್ರೀ ಕೆ.ಸಿ. ಶಿವಪ್ಪ ಮಾತನಾಡಿದರು. ಪ್ರೊ. ಮಲೆಯೂರು ಗುರುಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ದುಗ್ಗಹಟ್ಟಿ ಸ್ವಾಗತಿಸಿದರು. ಶಾಂತಲಾ ಕಲಾವಿದರು ಪ್ರಾರ್ಥಿಸಿದರು. ಶ್ರೀ ಬಿ.ಕೆ. ರವಿಕುಮಾರ್‌ಪ್ರಶಸ್ತಿ ವಾಚನ ಮಾಡಿದರು. ಶ್ರೀ ಎಂ. ವೀರಭದ್ರಸ್ವಾಮಿ ವಂದಿಸಿದರು. ಶ್ರೀ ವಿನಯ್‌ಕಾರ್ಯಕ್ರಮ ನಿರೂಪಿಸಿದರು.

**ಉತ್ತಮ ಆಡಳಿತ ವ್ಯವಸ್ಥೆಯಿಂದ ಬಲಿಷ್ಠ ಸಮಾಜ ನಿರ್ಮಾಣ**

ಉತ್ತಮ ಆಡಳಿತ ವ್ಯವಸ್ಥೆಯಿಂದ ಬಲಿಷ್ಠ ಸಮಾಜ ನಿರ್ಮಾಣ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್3ರಂದು ಮಾನಸಗಂಗೋತ್ರಿಯಲ್ಲಿ ಕರ್ನಾಟಕ ಸರ್ಕಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ 'ಉನ್ನತ ಶಿಕ್ಷಣದಲ್ಲಿ ಸುಶಾಸನ : ಪರಿಕಲ್ಪನೆ ಮತ್ತು ಅನುಷ್ಠಾನ' ಕುರಿತ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ತಿಳಿಸಿದರು. ಉತ್ತಮ ಆಡಳಿತ ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸಲು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರವು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಮೈಸೂರಿನ ಅಂದಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಉತ್ತಮ – ಆಡಳಿತಕ್ಕೆ ಸೂಕ್ತ ಉದಾಹರಣೆ. ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಹೆಚ್ಚಾಗುತ್ತಿವೆ. ಅದಕ್ಕೆ ತಕ್ಕಂತೆ ಅವುಗಳ ಶಿಕ್ಷಣದ ಗುಣಮಟ್ಟವೂ ಹೆಚ್ಚಾಗಬೇಕು ಎಂದು ಹೇಳಿದರು.

ಸಚಿವರಾದ ಡಾ. ಸಿ.ಎನ್.ಅಶ್ವಥ್‌ನಾರಾಯಣ್‌ರವರು ವಿಶ್ವವಿದ್ಯಾಲಯಗಳಲ್ಲಿ ಪಾರದರ್ಶಕತೆ, ಕಾರ್ಯಕ್ಷಮತೆಗಳಿಗಿಂತ ಮುಖ್ಯವಾಗಿ ಮನಸ್ಸುಗಳ ಸಮನ್ವಯತೆ ಅಗತ್ಯವಿದೆ. ಆಗ ಸುಶಾಸನ ಏರ್ಪಟ್ಟು, ವಿದ್ಯಾರ್ಥಿಗಳಿಗೆ ವಿಶ್ವದರ್ಜೆಯ ಗುಣಮಟ್ಟದ ಶಿಕ್ಷಣ ಲಭಿಸಲು ಸಾಧ್ಯ ಎಂದರು.

ಶಾಸಕರಾದ ಎಲ್. ನಾಗೇಂದ್ರ ಉಪಸ್ಥಿತರಿದ್ದರು. ಕುಲಪತಿಗಳಾದ ಪ್ರೊ. ಹೆಚ್.ರಾಜಶೇಖರ್ ಸ್ವಾಗತಿಸಿದರು. ಪ್ರೊ. ಯಶವಂತ ಡೋಂಗ್ರೆ ಮತ್ತು ಪ್ರೊ. ಎಸ್.ಎನ್.ಹೆಗಡೆ ಸುಶಾಸನ ಕುರಿತು ಮಾತನಾಡಿದರು. ಲಲಿತಕಲಾ ಕಾಲೇಜು ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ ವಂದಿಸಿದರು.

**ವಿದ್ಯಾರ್ಥಿಗಳಲ್ಲಿ ರಂಗಾಸಕ್ತಿ ಬೆಳೆಸಲು ರಂಗೋತ್ಸವ**

ವಿದ್ಯಾರ್ಥಿಗಳಲ್ಲಿ ರಂಗಾಸಕ್ತಿಯನ್ನು ಬೆಳೆಸುವ ಸದುದ್ದೇಶದಿಂದ ಕಲಾಮಂಟಪದ ವತಿಯಿಂದ ರಂಗೋತ್ಸವವನ್ನು ಆಯೋಜಿಸಲಾಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್1ರಂದು ಚಾಮರಾಜನಗರದಲ್ಲಿ ಜೆಎಸ್‌ಎಸ್ ಕಲಾ ಮಂಟಪ ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಜೆಎಸ್‌ಎಸ್ ರಂಗೋತ್ಸವದ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಕಲಾಮಂಟಪ ಇಂದಿನ ವಿದ್ಯಮಾನಗಳಿಗೆ ತಕ್ಕಂತೆ ಹೊಸ ಆವಿಷ್ಕಾರಗಳನ್ನು ಬಳಸಿಕೊಂಡು ಪ್ರಯೋಗಗಳನ್ನು ನಡೆಸುತ್ತಿದೆ. ಅದರ ಅಂಗವಾಗಿ ಪ್ರತಿ ವರ್ಷ ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ರಂಗಾಸಕ್ತಿಯನ್ನು ಬೆಳೆಸುವ ಸದುದ್ದೇಶದಿಂದ ಮಕ್ಕಳಿಗೆ ನಾಟಕವನ್ನು ಕಲಿಸಿ, ಅವರಲ್ಲಿ ಅಭಿನಯ ಕಲೆಯನ್ನು ಬೆಳೆಸುವ ಕೆಲಸವನ್ನು ಮಾಡುತ್ತಿದೆ. ಸಿನಿಮಾ ಧಾರಾವಾಹಿ ಮುಂತಾದ ಆಕರ್ಷಣೆಗಳಿಂದ ಸೃಜನಶೀಲವಾದ ರಂಗಾಸಕ್ತಿ ಕಡಿಮೆಯಾಗಬಾರದೆಂದು ಈ ರಂಗೋತ್ಸವವನ್ನು ಹಲವು ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಶ್ರೀ ಡಿ.ಎಸ್. ರಮೇಶ್‌ರವರು ಪ್ರತಿಯೊಂದು ಕಲೆಗೂ ತನ್ನದೇ ಆದ ಶಕ್ತಿ ಇರುತ್ತದೆ. ರಂಗಭೂಮಿಯ ಶಕ್ತಿ ತುಂಬಾ ದೊಡ್ಡದು. ಚಿಕ್ಕ ವಯಸ್ಸಿನಲ್ಲಿ ತಾಯಿಯ ಜೊತೆ ನೋಡಿದ ಸತ್ಯ ಹರಿಶ್ಚಂದ್ರ ನಾಟಕದಿಂದ ಪ್ರಭಾವಿತರಾಗಿ ಮೋಹನದಾಸ ಕರಮಚಂದ ಗಾಂಧಿಯವರು ಮಹಾತ್ಮ ಗಾಂಧೀಜಿಯಾದರು. ಬದುಕಿನಲ್ಲಿ ಬದಲಾವಣೆಯನ್ನು ತರುವಂತಹ ಯಾವುದಾದರೂ ಶಕ್ತಿ ಇದ್ದರೆ ಅದು ರಂಗಭೂಮಿ ಮಾತ್ರ ಎಂದರು.

ಇದೇ ಸಂದರ್ಭದಲ್ಲಿ ಡಾ. ಎಚ್. ಎನ್. ಮುರುಳೀಧರರವರಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀಮತಿ ಪ್ರಿಯದರ್ಶಿನಿ ಈಶ್ವರ ಸಾಣೆಕೊಪ್ಪರವರನ್ನು ಕದಳಿ ಮಹಿಳಾ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು. ಹರವೆ ಶ್ರೀಗಳು ಉಪಸ್ಥಿತರಿದ್ದರು. ರಂಗಾಯಣದ ಮಾಜಿ ನಿರ್ದೇಶಕರಾದ ಶ್ರೀ ಎಚ್. ಜನಾರ್ಧನರವರು ಸಮಾರೋಪ ಭಾಷಣ ಮಾಡಿದರು. ಕು. ನಿತ್ಯಶ್ರೀ ಮತ್ತು ತಂಡದವರು ಪ್ರಾರ್ಥಿಸಿದರು.

ಶ್ರೀ ಚಂದ್ರಶೇಖರಾಚಾರ್ ಹೆಗ್ಗೋತಾರ ವರದಿಯನ್ನು ಮಂಡಿಸಿದರು. ಶ್ರೀ ಎ.ಎಂ. ಮಹಾದೇವಸ್ವಾಮಿ ಸ್ವಾಗತಿಸಿದರು. ಡಾ. ಎ.ಆರ್. ಸುಷ್ಮಾ ವಂದಿಸಿದರು. ಶ್ರೀಮತಿ ಕೆ.ಎಸ್. ಅರುಣಶ್ರೀ ಕಾರ್ಯಕ್ರಮ ನಿರೂಪಿಸಿದರು.

**ಜ್ಞಾನ ಪಡೆಯಲು ನಿಷ್ಠುರ ಸಾಧನೆ ಅತ್ಯವಶ್ಯಕ**

ಜ್ಞಾನ ಪಡೆಯಲು ನಿಷ್ಠುರ ಸಾಧನೆ ಅತ್ಯವಶ್ಯಕ ಎಂದು ಸಾಹಿತಿಗಳು ಹಾಗೂ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ದೊಡ್ಡರಂಗೇಗೌಡರು ಡಿಸೆಂಬರ್ 7ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ 14ನೇ ಪದವೀಧರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಮಾನವನ ಭೌತಿಕ ವಿಕಸನಕ್ಕೆ ತಿಳುವಳಿಕೆ ಮುಖ್ಯ. ಓದು ಮಾನವನ ವ್ಯಕ್ತಿತ್ವದಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಜ್ಞಾನ ವಿಸ್ತಾರವಾದದ್ದು ಹಾಗೂ ಅಪಾರವಾದದ್ದು. ಜ್ಞಾನಿಯಾದವನು ಏನು ಬೇಕಾದರೂ ಸಾಧಿಸಬಲ್ಲ. ಬುದ್ಧ, ಮಹಾತ್ಮ ಗಾಂಧೀಜಿ ಅಂಬೇಡ್ಕರ್, ಸರ್ವಜ್ಞ, ಬಸವಣ್ಣನವರು ಜ್ಞಾನದ ನೈಜ ಅನ್ವೇಷಕರು. ಅವರ ಅನುಸಂಧಾನ ಜ್ಞಾನ ದೀವಿಗೆಯಾಗಿದೆ ಎಂದು ಹೇಳಿದರು.

ವನ್ಯಜೀವಿ ತಜ್ಞರಾದ ಡಾ. ಕೆ. ಉಲ್ಲಾಸ ಕಾರಂತರವರು ನಿಸರ್ಗ ರಕ್ಷಣೆ ಎಂದರೆ ಇಡೀ ಸೃಷ್ಟಿಯ ರಕ್ಷಣೆ. ನಿಸರ್ಗದಲ್ಲಿ ಮನುಷ್ಯ ಜಾತಿ ಮಾತ್ರವಲ್ಲದೆ ಇತರ ಪ್ರಾಣಿಗಳಿಗೂ ಬದುಕುವ ಹಕ್ಕಿದೆ. ವನ್ಯಜೀವಿ ಸಂರಕ್ಷಣೆ ಕಾನೂನಿನ ಮೂಲಕ ಪ್ರಾಣಿಗಳ ಸಂರಕ್ಷಣೆ ಯಾಗುತ್ತಿದೆ. ತಂತ್ರಜ್ಞಾನಗಳ ಆವಿಷ್ಕಾರದಿಂದಾಗಿಯೂ ನಿಸರ್ಗದ ಸಂರಕ್ಷಣೆಯಾಗುತ್ತಿದೆ ಎಂದು ಹೇಳಿದರು.

2020–21ನೇ ಸಾಲಿನ ಶೈಕ್ಷಣಿಕ ವರ್ಷದ ಒಟ್ಟು 656 ವಿದ್ಯಾರ್ಥಿನಿಯರಿಗೆ ಪದವಿ ಪ್ರದಾನ ಮಾಡಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಪ್ರತಿಜ್ಞಾವಿಧಿ ಬೋಧಿಸಿದರು. ಕು. ಭ್ರಮರ ಉಡುಪ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ಎಚ್.ಬಿ. ಸುರೇಶ್ ಸ್ವಾಗತಿಸಿದರು. ಡಾ. ರೇಚಣ್ಣ ವಂದಿಸಿದರು. ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

**ಜನಸಾಮಾನ್ಯರಿಗೂ ಉತ್ತಮ ಚಿಕಿತ್ಸೆ ದೊರಕಬೇಕು**

ಜನಸಾಮಾನ್ಯರಿಗೂ ಅವರದೇ ಆಯ್ಕೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭಿಸುವಂತಾಗಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 5ರಂದು ರಾಷ್ಟ್ರೋತ್ಥಾನ ಪರಿಷತ್ತು ವತಿಯಿಂದ ಬೆಂಗಳೂರು ರಾಜರಾಜೇಶ್ವರಿನಗರದಲ್ಲಿ ನೂತನವಾಗಿ ನಿರ್ಮಿಸಿರುವ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮನುಷ್ಯನ ಎಲ್ಲಾ ಸಾಧನೆಗೂ ಪೂರಕವಾಗಿ ಆರೋಗ್ಯ ಸ್ಥಿರತೆ ಮುಖ್ಯ. ಕೈಗೆಟಕುವ ದರದಲ್ಲಿ ಬಡವರು, ಮಧ್ಯಮ ವರ್ಗದ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ದೊರಕಿಸಿಕೊಂಡುವ ದಿಕ್ಕಿನತ್ತ ಹೆಜ್ಜೆ ಇಟ್ಟಿರುವ ರಾಷ್ಟ್ರೋತ್ಥಾನ ಪರಿಷತ್ತಿನ ಆಸ್ಪತ್ರೆಯ ಕಾರ್ಯವೈಖರಿ ಮಾದರಿಯಾಗಲಿದೆ ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ನೂರಾರು ವ್ಯಕ್ತಿತ್ವಗಳನ್ನು ಸಾಮಾಜಿಕ ಬದ್ಧತೆಯೊಂದಿಗೆ ರೂಪಿಸಿದ ಶ್ರೀ ಮೈ.ಚ. ಜಯದೇವರ ಸ್ಮರಣಾರ್ಥ ಆರಂಭಿಸಿದ ಈ ವಿಶೇಷ ಪರಿಕಲ್ಪನೆಯ ಆಸ್ಪತ್ರೆ, ಆರೋಗ್ಯಪೂರ್ಣ ವ್ಯವಸ್ಥೆಗೆ ಪೂರಕವಾಗಿರಲಿದೆ ಎಂದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಸುಧಾ ಮೂರ್ತಿ, ನಾರಾಯಣ ಹೆಲ್ತ್ ಅಧ್ಯಕ್ಷರಾದ ಡಾ. ದೇವಿಪ್ರಸಾದ್ ಶೆಟ್ಟಿ, ರಾಷ್ಟ್ರೋತ್ಥಾನ ಆಸ್ಪತ್ರೆಯ ಅಧ್ಯಕ್ಷರಾದ ಶ್ರೀ ಸುಧೀರ್ ಪೈ, ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಂ.ಪಿ. ಕುಮಾರ್, ನಿಮ್ಹಾನ್ಸ್ ವೈದ್ಯರಾದ ಡಾ. ಅಶೋಕ್, ಶ್ರೀ ಎಸ್.ವಿ.ಎಸ್. ಗುಪ್ತಾ, ಡಾ. ಶ್ರೀನಾಥ್, ಡಾ. ಸಂಧ್ಯಾ ರವಿ, ಶ್ರೀ ದಿನೇಶ್ ಹೆಗಡೆ, ಶ್ರೀ ಎ.ಆರ್. ದ್ವಾರಕಾನಾಥ್ ಮೊದಲಾದವರುಗಳು ಉಪಸ್ಥಿತರಿದ್ದರು.

**ಬಸವಣ್ಣನವರ ಆದರ್ಶ ಎಂದೆದಿಗೂ ಪ್ರಸ್ತುತ**

ಬಸವಣ್ಣನವರ ಆದರ್ಶ ಎಂದೆಂದಿಗೂ ಪ್ರಸ್ತುತ ಎಂದು ಪರಮಪೂಜ್ಯ ಜಗದ್ಗುರು ಗಳವರು ಡಿಸೆಂಬರ್ 10ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ ಬಸವ ಬಳಗಗಳ ಒಕ್ಕೂಟದ ರಜತ ಮಹೋತ್ಸವದ 'ಬೆಳ್ಳಿ ಬೆಳಗು' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಬಸವಣ್ಣನವರು ಧಾರ್ಮಿಕ ವಿಚಾರಗಳಲ್ಲಿ ತಾತ್ವಿಕ ಚಿಂತನೆಗೆ ಅವಕಾಶ ನೀಡಿದರು. ಬಸವಣ್ಣನವರ ಆದರ್ಶಗಳು ಮತ್ತು ಕುವೆಂಪುರವರ ಆಲೋಚನೆಯ ವಿಶ್ವಮಾನವ ಪ್ರಜ್ಞೆ ಎಲ್ಲಾ ಕಾಲಕ್ಕೂ ಪ್ರಸ್ತುತವಾಗಿವೆ. ಬಸವಣ್ಣನವರು ಸುಲಭ ಕನ್ನಡದಲ್ಲಿ, ಸರಳವಾಗಿ ಅರ್ಥಗರ್ಭಿತವಾಗಿ ಬದುಕಿನ ಅರ್ಥವನ್ನು ತಿಳಿಸಿಕೊಟ್ಟಿದ್ದಲ್ಲದೇ ಹಾಗೆಯೇ ಬದುಕಿ ತೋರಿಸಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಬಸವಣ್ಣನವರ ಸಮಸಮಾಜ ನಿರ್ಮಾಣದ ಆಶಯಕ್ಕೆ ಬಸವ ತತ್ವಪರಿಪಾಲಕರು ಬದ್ಧರಾಗಬೇಕು. ಬಸವಣ್ಣನವರು ನಂಬಿರುವ ಸಮಾಜವನ್ನು ನಿರ್ಮಾಣ ಮಾಡುವ ಸಂಕಲ್ಪ ಮಾಡಬೇಕಿದೆ. ಪ್ರತಿನಿತ್ಯ ನಾವು ಕೈಗೊಳ್ಳುವ ಆಚಾರ, ವಿಚಾರದಲ್ಲಿ ಬಸವಣ್ಣನ ಚಿಂತನೆ ಮಾಡಿದರೆ, ಸಮಾನತೆ ತಾನಾಗಿಯೇ ಬರಲಿದೆ ಎಂದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಸ್ಮರಣ ಸಂಚಿಕೆ 'ರಜತ ದೀಪ್ತಿ'ಯನ್ನು ಬಿಡುಗಡೆಗೊಳಿಸಿದರು. ಶಾಸಕರಾದ ಶ್ರೀ ಲಿಂಗೇಶ್, ಶ್ರೀ ಎಲ್. ನಾಗೇಂದ್ರ, ಉಪಮೇಯರ್ ಡಾ. ಜಿ. ರೂಪಾ, ಶ್ರೀಮತಿ ಮಂಗಳ ಸೋಮಶೇಖರ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಬದನವಾಳು ಶಿವಕುಮಾರ ಶಾಸ್ತ್ರಿ ಪ್ರಾರ್ಥಿಸಿದರು. ಶ್ರೀ ಎಲ್.ಎಸ್. ಮಹದೇವಸ್ವಾಮಿ ಸ್ವಾಗತಿಸಿದರು. ಶ್ರೀ ಹೆಚ್.ವಿ. ಬಸವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಡಿ.ಎ. ಮಹದೇವಸ್ವಾಮಿ ವಂದಿಸಿದರು. ಶ್ರೀ ಬಿ.ಆರ್. ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು. □

## 2023ನೆಯ ವರ್ಷದ ಬಸವಾದಿ ಶರಣರ ಶರಣೋತ್ಸವಗಳು

| | | | | |
|---|---|---|---|---|
| ಜನವರಿ | 06 | ಶುಕ್ರವಾರ | ಬನದ ಹುಣ್ಣಿಮೆ | ಮೇದಾರ ಕೇತಯ್ಯ |
| ಜನವರಿ | 15 | ರವಿವಾರ | ಮಕರ ಸಂಕ್ರಮಣ | ಸಿದ್ಧರಾಮೇಶ್ವರ |
| ಜನವರಿ | 21 | ಶನಿವಾರ | ಅವರಾತ್ರಿ ಅಮಾವಾಸ್ಯೆ | ಜೇಡರ ದಾಸಿಮಯ್ಯ |
| ಫೆಬ್ರವರಿ | 01 | ಬುಧವಾರ | ಪ್ರತಿ ವರುಷ | ಮರುಳಶಂಕರದೇವ |
| ಫೆಬ್ರವರಿ | 05 | ರವಿವಾರ | ಭಾರತ ಹುಣ್ಣಿಮೆ | ಕಿನ್ನರಿ ಬೊಮ್ಮಯ್ಯ |
| ಫೆಬ್ರವರಿ | 18 | ಶನಿವಾರ | ಮಹಾಶಿವರಾತ್ರಿ | ಡೋಹರ ಕಕ್ಕಯ್ಯ |
| ಮಾರ್ಚ್ | 07 | ಮಂಗಳವಾರ | ಹೋಳಿಹುಣ್ಣಿಮೆ | ಬಿಬ್ಬಿ ಬಾಚಯ್ಯ |
| ಮಾರ್ಚ್ | 22 | ಬುಧವಾರ | ಯುಗಾದಿ ಪಾಡ್ಯ | ಅಲ್ಲಮಪ್ರಭುದೇವರು |
| ಏಪ್ರಿಲ್ | 06 | ಗುರುವಾರ | ದವನದ ಹುಣ್ಣಿಮೆ | ಅಕ್ಕಮಹಾದೇವಿ |
| ಏಪ್ರಿಲ್ | 22 | ಶನಿವಾರ | ಅಕ್ಷಯ ತೃತೀಯ | ಬಸವಣ್ಣನವರು |
| ಮೇ | 05 | ಶುಕ್ರವಾರ | ಆಗಿ ಹುಣ್ಣಿಮೆ | ಶಿವನಾಗಮಯ್ಯ |
| ಮೇ | 19 | ಶುಕ್ರವಾರ | ಬಾದಾಮಿ ಅಮವಾಸ್ಯೆ | ಗೊಲ್ಲಾಳೇಶ್ವರ |
| ಜೂನ್ | 04 | ರವಿವಾರ | ಕಾರಹುಣ್ಣಿಮೆ | ಅಂಬಿಗರ ಚೌಡಯ್ಯ |
| ಜೂನ್ | 18 | ರವಿವಾರ | ಮಣ್ಣೆತ್ತಿನ ಅಮವಾಸ್ಯೆ | ಕುಂಬಾರ ಗುಂಡಯ್ಯ |
| ಜುಲೈ | 03 | ಸೋಮವಾರ | ಕಡ್ಲಿಗಡಬ ಹುಣ್ಣಿಮೆ | ಹಡಪದ ಅಪ್ಪಣ್ಣ |
| ಆಗಸ್ಟ್ | 21 | ಸೋಮವಾರ | 1ನೇ ಶ್ರಾವಣ ಸೋಮ | ಶಂಕರದಾಸಿಮಯ್ಯ |
| ಆಗಸ್ಟ್ | 21 | ಸೋಮವಾರ | ನಾಗಪಂಚಮಿ | ಅಕ್ಕನಾಗಮ್ಮ |
| ಆಗಸ್ಟ್ | 31 | ಗುರುವಾರ | ನೂಲ ಹುಣ್ಣಿಮೆ | ನುಲಿಯ ಚಂದಯ್ಯ |
| ಸೆಪ್ಟೆಂಬರ್ | 19 | ಮಂಗಳವಾರ | ಗಣೇಶ ಚೌತಿ | ಮಡಿವಾಳ ಮಾಚಿದೇವ |
| ಸೆಪ್ಟೆಂಬರ್ | 28 | ಗುರುವಾರ | ಅನಂತ ಹುಣ್ಣಿಮೆ | ಹೂಗಾರ ಮಾದಣ್ಣ |
| ಅಕ್ಟೋಬರ್ | 23 | ಸೋಮವಾರ | ಮಹಾನವಮಿ | ಹರಳಯ್ಯ-ಮಧುವಯ್ಯ |
| ಅಕ್ಟೋಬರ್ | 24 | ಮಂಗಳವಾರ | ವಿಜಯದಶಮಿ | ಕಲ್ಯಾಣಕ್ರಾಂತಿ ವಿಜಯ |
| ಅಕ್ಟೋಬರ್ | 28 | ಶನಿವಾರ | ಶೀಗಿ ಹುಣ್ಣಿಮೆ | ಗಂಗಾಂಬಿಕೆ |
| ನವೆಂಬರ್ | 14 | ಮಂಗಳವಾರ | ದೀಪಾಬಳಿ ಪಾಡ್ಯ | ಚೆನ್ನಬಸವಣ್ಣ |
| ನವೆಂಬರ್ | 27 | ಸೋಮವಾರ | ಗೌರಿಹುಣ್ಣಿಮೆ | ನೀಲಾಂಬಿಕೆ |
| ಡಿಸೆಂಬರ್ | 12 | ಮಂಗಳವಾರ | ಛಟ್ಟಿ ಅಮಾವಾಸ್ಯೆ | ದಾನಮ್ಮದೇವಿ |
| ಡಿಸೆಂಬರ್ | 26 | ಮಂಗಳವಾರ | ಹೊಸ್ತಿಲಹುಣ್ಣಿಮೆ | ಮಾದರ ಚನ್ನಯ್ಯ |

**ಸಂಗ್ರಹ : ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ), ಬೆಳಗಾವಿ**

# ಪ್ರಸಾದ



## ಕೃತಿ-ಸ್ವೀಕೃತಿ

**ಕದಳಿಯ ಬೆರಗು**
**ಚ. ಸರ್ವಮಂಗಳಾ ಅಕ್ಕರ ಬಾಗಿನ**
ಮೀನಾ ಮೈಸೂರು
ಪ್ರ.: ಚಾರುಮತಿ ಪ್ರಕಾಶನ
ಚಾಮರಾಜಪೇಟೆ, ಬೆಂಗಳೂರು
ಪು. 408/- ಬೆಲೆ: 400/-

**ಸತ್ಸಂಗ ಸಂಪದ (ಸದ್ವಿಚಾರಗಳ ಸಂಕಲನ)**
ಡಾ. ಗುರುರಾಜ ಪೋಶೆಟ್ಟಿಹಳ್ಳಿ
ಪ್ರ.: ಪ್ರಣವ ಮೀಡಿಯಾ ಹೌಸ್
ಗಿರಿನಗರ 3ನೇ ಹಂತ, ಬೆಂಗಳೂರು
ಪು. 252/- ಬೆಲೆ: 200/-

**ಅರವತ್ತಮೂರು ಪುರಾತನರು**
ಕೆ.ಬಿ. ಸಿದ್ಧಲಿಂಗಪ್ಪ
ಪ್ರ.: ಸಂಗನಕಲ್ಲು ನಂದಿ ಪ್ರಕಾಶನ, ಬಳ್ಳಾರಿ
ಪು. 136/- ಬೆಲೆ: 100/-

**ಅನುಪಮಯೋಗಿ ಅಲ್ಲೀಪುರ ತಾತ**
ಕೆ.ಬಿ. ಸಿದ್ಧಲಿಂಗಪ್ಪ
ಪ್ರ.: ಸಂಗನಕಲ್ಲು ನಂದಿ ಪ್ರಕಾಶನ, ಬಳ್ಳಾರಿ
ಪು. 98/- ಬೆಲೆ: 50/-

**ಸಿದ್ಧಿಯ ಕೈ ಚಂದ್ರನತ್ತ (ಕಾದಂಬರಿ)**
ಡಾ. ಕೃಷ್ಣಮೂರ್ತಿ ಹನೂರು
ಪ್ರ.: ಅಭಿರುಚಿ ಪ್ರಕಾಶನ
ಸರಸ್ವತಿಪುರಂ, ಮೈಸೂರು
ಪು. 264/- ಬೆಲೆ: 220/-

**ದೇವಮೂಲೆಯ ಮಳೆ (ಕಥಾಸಂಕಲನ)**
ಕೃಷ್ಣಮೂರ್ತಿ ಹನೂರು
ಪ್ರ.: ಪಲ್ಲವ ಪ್ರಕಾಶನ, ಬಳ್ಳಾರಿ
ಪು. 348/- ಬೆಲೆ: 320/-

**ಸತ್ಯದ ಹುಡುಕಾಟ (ಬ್ರಹ್ಮಶ್ರೀ ಸದಾಶಿವ ಯೋಗಿಗಳವರ ಜೀವನ ಚರಿತ್ರೆ)**
ಎಂ.ಕೆ. ವಿರುಪಾಕ್ಷಪ್ಪ
ಪ್ರ.: ಸದಾಶಿವ ಯೋಗ ಪ್ರತಿಷ್ಠಾನ
ಭಾರತ (ರಿ), ಆಧ್ಯಾತ್ಮ ವಿಕಾಸ
ಕೇಂದ್ರ, ಶಿವಾನಂದ ಯೋಗಾಶ್ರಮ
ಹೊಸಪೇಟೆ, ಬಳ್ಳಾರಿ
ಪು. 311/- ಬೆಲೆ: 200/-

**ಯೋಗಿಯ ಭಗವದ್ಗೀತಾ ದರ್ಶನ (ಆಧ್ಯಾತ್ಮ ಗೀತೆ)**
ಸದಾಶಿವಯೋಗಿ ಹಂಪಿ
ಪ್ರ.: ಸದಾಶಿವ ಪ್ರಕಾಶನ, ಹಂಪಿ
ಪು. 80/- ಬೆಲೆ: 100/-

**ಬಿಂದುವಿನಲ್ಲಿ ಸಿಂಧು**
ಡಾ. ಡಿ.ಕೆ. ರಾಜೇಂದ್ರ
ಪ್ರ.: ಪ್ರೇಮ ಪ್ರಕಾಶನ
ಪು. 148/- ಬೆಲೆ: 130/-

**ಧ್ಯಾನಮಯ ತಪಸ್ವಿನಿ ಶ್ರೀಮಾತೆ**
ಡಾ. ಡಿ.ಕೆ. ರಾಜೇಂದ್ರ
ಪ್ರ.: ಪ್ರೇಮ ಪ್ರಕಾಶನ
ಪು. 140/- ಬೆಲೆ: 130/-

**ಚಿಲ್ಲಾಪಿಲ್ಲಿ**
ಡಾ. ಸರಸ್ವತಿ ರಾಜೇಂದ್ರ
ಪ್ರ.: ಮಣಿ ಪ್ರಕಾಶನ
ವಿಜಯನಗರ 3ನೇ ಹಂತ, ಮೈಸೂರು
ಪು. 116/- ಬೆಲೆ: 140/-

**ನಾನೊಂದು ಲೋಲಕ**
ಡಾ. ಸರಸ್ವತಿ ರಾಜೇಂದ್ರ
ಪ್ರ.: ಪುನೀತ ಪ್ರಕಾಶನ
ಕುವೆಂಪುನಗರ, ಮೈಸೂರು
ಪು. 55/- ಬೆಲೆ: 20/-

**ಇಂಗ್ಲಿಷ್ ಫಾರ್ ಕಮ್ಯುನಿಕೇಷನ್**
ಡಾ. ಸಿದ್ಧಲಿಂಗಯ್ಯ ಹೊಲತಲಂ
ಪ್ರ.: ಸ್ಟೂಡೆಂಟ್ ಬುಕ್ ಕಂಪನಿ
ತುಮಕೂರು
ಪು. 148/- ಬೆಲೆ: 150/-

**ಲಿಂಗಪೂಜಾ ಫಲ ಕೈಯ ಮೇಲೆ**
ದೊ.ಬ. ಮೃತ್ಯುಂಜಯಪ್ಪ
ಪ್ರ.: ಶ್ರೀ ಚನ್ನವೀರ ಪ್ರಕಾಶನ
ದೊಡ್ಡಮಠ, ಅಕ್ಕಿಪೇಟೆ, ಬೆಂಗಳೂರು
ಪು. 160.

**ಸ್ವರ್ಗಕ್ಕೊಂದು ಸೋಪಾನ ಸಮಾಜಕ್ಕೊಂದು ದೇಹದಾನ**
ರಾ.ಕೃ. ಶ್ರೀಧರಮೂರ್ತಿ
ಪ್ರ.: ಸುಜನ ಸಮಾಜ
ಮಲ್ಲೇಶ್ವರಂ, ಬೆಂಗಳೂರು
ಪು. 144, ಬೆಲೆ: 200/-

**ಪರಿಸರಮಾಲಿನ್ಯಗಳು ಮತ್ತು ವಾಯುಗುಣ ಬದಲಾವಣೆ**
ಬಿ.ಎಂ.ಟಿ. ರಾಜೀವ್
ಪ್ರ.: ಶ್ರೀಮತಿ ಮಂಜುಳ ಪಿ.ಎಂ. ಕೃಷ್ಣ ಪ್ರಕಾಶನ, ವಿಜಯನಗರ, ಬೆಂಗಳೂರು
ಪು. 187/- ಬೆಲೆ: 250/-

**ಅಮೋಘ! ಅದ್ಭುತ! ಶಿಲ್ಪಕಲೆಯ ಹೊಯ್ಸಳ ರಾಜ ಲಾಂಛನ!**
ಎಸ್. ಮಲ್ಲಿಕಾರ್ಜುನಪ್ಪ
ಪ್ರ.: ಕನ್ನಡಮ್ಮ ಪ್ರಕಾಶನ, ದಾವಣಗೆರೆ
ಪು. 112/- ಬೆಲೆ: 100/-

**ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರಕಟಣೆ ವಚನಗಳ ಅನುಸಂಧಾನ**
ಡಾ. ಅಮರೇಶ ನುಗಡೋಣಿ
ಪ್ರ.: ಡಾ. ಎಚ್.ಡಿ. ಪ್ರಶಾಂತ್
ನಿರ್ದೇಶಕರು, ಪ್ರಸಾರಾಂಗ
ಕನ್ನಡ ಯೂನಿವರ್ಸಿಟಿ, ಹಂಪಿ
ಪು. 120/- ಬೆಲೆ: 100/-

**ರಾಜರತ್ನ–ನಗುವಿನೊಡೆಯ ಅಪ್ಪು**
ಶ್ರೀಧರ ಸಿದ್ಧಣ್ಣ ಆಸಂಗಿಹಾಳ
ಪ್ರ.: ಸುಧಾ ಪಬ್ಲಿಕೇಷನ್
ಸವದತ್ತಿ

## ಲೇಖಕರ ವಿಳಾಸ

**ಪ್ರೊ. ನೀಲಗಿರಿ ಎಂ. ತಳವಾರ್**
ನಂ. 219, 21ನೇ ಕ್ರಾಸ್, 'ಬಿ' ಬ್ಲಾಕ್
ವಿಜಯನಗರ, 3ನೇ ಹಂತ
ಮೈಸೂರು 570017
ಮೊ.: 8971522330

**ಡಾ. ಎಂ.ಎಸ್. ಆಶಾದೇವಿ**
ನಂ. 5/41, 'ಸಮೀರ ಕೃಪ'
1ನೇ ಮುಖ್ಯರಸ್ತೆ, 1ನೇ ಹಂತ
ಕೆ.ಹೆಚ್.ಬಿ. ಕಾಲೋನಿ
ಬಸವೇಶ್ವರನಗರ
ಬೆಂಗಳೂರು–560079
ಮೊ: 9845235045

**ವೆಂಕಟೇಶ ಕೆ. ಜನಾದ್ರಿ**
ಸಹಾಯಕ ಲೆಕ್ಕಾಧಿಕಾರಿ
ಈಕರಸಾ ನಿಗಮ
ಕಲಬುರ್ಗಿ ವಿಭಾಗ–2
ಕಲಬುರ್ಗಿ–585102
ಮೊ: 9945330492

**ಡಾ. ಎನ್.ಎಂ. ಗಿರಿಜಾಪತಿ**
ಪ್ರಾಧ್ಯಾಪಕರು
ಜೆಎಸ್ಎಸ್ ಕಾಲೇಜು
ಗುಂಡ್ಲುಪೇಟೆ.
ಮೊ: 9844582238

ಹಿಂಬದಿ ಪುಟದ ಚಿತ್ರ

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1063ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ವಿವಿಧ ಪ್ರಶಸ್ತಿ ಪುರಸ್ಕೃತ ಗಣ್ಯರನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು (22 ಡಿಸೆಂಬರ್ 2022)




ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರರವರ 'ನೀನೊಲಿದ ಬದುಕು' ಆತ್ಮಕಥನ ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರು ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಬಿಡುಗಡೆಗೊಳಿಸಿದರು. ಶ್ರೀಮತಿ ಸರ್ವಮಂಗಳ ಸೋಮಶೇಖರ, ಶ್ರೀ ನಿತಿನ್ ಷಾ, ಡಾ. ಶಿವರಾಜ್ ವಿ. ಪಾಟೀಲ್, ಶ್ರೀ ವಿ. ಸುನೀಲ್‌ಕುಮಾರ್, ಶ್ರೀ ವಿ. ಸೋಮಣ್ಣ, ಡಾ. ಚಂದ್ರಶೇಖರ ಕಂಬಾರ ಮತ್ತು ಡಾ. ಮಲ್ಲೇಪುರಂ ಜಿ. ವೆಂಕಟೇಶರವರುಗಳಿದ್ದಾರೆ (4 ನವೆಂಬರ್ 2022)



ಬೆಳಗಾವಿ ನಾಗನೂರು ಶ್ರೀ ರುದ್ರಾಕ್ಷಿ ಮಠದಲ್ಲಿ ಏರ್ಪಡಿಸಿದ್ದ ಡಾ. ಪ್ರಭಾಕರ್ ಕೋರೆಯವರ ಅಮೃತ ಮಹೋತ್ಸವದ ಅಭಿನಂದನಾ ಸಮಾರಂಭ ಹಾಗೂ ಮಠಾಧೀಶರ ಬೃಹತ್ ಚಿಂತನಾ ಸಮಾವೇಶದಲ್ಲಿ ಡಾ. ಪ್ರಭಾಕರ್ ಕೋರೆಯವರನ್ನು ಸನ್ಮಾನಿಸಲಾಯಿತು. ಕಾರಂಜಿ, ಹೊಸಪೇಟೆ, ಆನಂದಪುರಂ, ನಿಡಸೋಸಿ, ಗದಗ, ಸುತ್ತೂರು, ಹುಬ್ಬಳ್ಳಿ, ಸಿರಿಗೆರೆ, ನಾಗನೂರು, ಮುಂಡರಗಿ, ಧಾರವಾಡ ಮೊದಲಾದ ಮಠಗಳ ಶ್ರೀಗಳಿದ್ದಾರೆ (11 ನವೆಂಬರ್ 2022)




ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ನಿವೃತ್ತರಾಗಲಿದ್ದ ಪ್ರೊ. ಜಿ. ಹೇಮಂತಕುಮಾರ್ ರವರನ್ನು ಸನ್ಮಾನಿಸಲಾಯಿತು. ಡಾ. ನವೀನ್ ಮೌರ್ಯ, ಡಾ. ಹೆಚ್.ಪಿ. ಜ್ಯೋತಿ, ಪ್ರೊ. ಕೆ.ಎಸ್. ರಂಗಪ್ಪ, ಪ್ರೊ. ಸಿ. ನಾಗಣ್ಣ, ಪ್ರೊ. ಎಸ್.ಎನ್. ಹೆಗಡೆ, ಪ್ರೊ. ಎಸ್.ಆರ್. ನಿರಂಜನ, ಶ್ರೀ ಟಿ.ಎಸ್. ನಾಗಾಭರಣ, ಡಾ. ಎನ್.ಎಸ್. ರಾಮೇಗೌಡ, ಪ್ರೊ. ಎಸ್. ಸತೀಶ್, ಪ್ರೊ. ಎಸ್. ಶ್ರೀಕಂಠಸ್ವಾಮಿಯವರುಗಳಿದ್ದಾರೆ



ಯಳಂದೂರಿನಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ರಾಜೇಂದ್ರ ಶ್ರೀಗಳವರ 107ನೇ ಜಯಂತಿ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶಿವದೀಕ್ಷೆ–ಲಿಂಗದೀಕ್ಷೆ ಕಾರ್ಯಕ್ರಮವನ್ನು ಸಚಿವರಾದ ಶ್ರೀ ವಿ. ಸೋಮಣ್ಣನವರು ಉದ್ಘಾಟಿಸಿದರು. ಹರವೆ, ದಂಡಿಕೆರೆ ಶ್ರೀಗಳು, ಜಿಲ್ಲಾಧಿಕಾರಿಗಳಾದ ಶ್ರೀ ಡಿ.ಎಸ್. ರಮೇಶ್, ಸಿದ್ಧಗಂಗೆ, ಮುಡಿಗುಂಡ ಮತ್ತು ಕುಂದೂರು ಮಠದ ಶ್ರೀಗಳಿದ್ದಾರೆ (15 ನವೆಂಬರ್ 2022)



ಮೈಸೂರು ಸಿದ್ದಾರ್ಥನಗರದ ಕನಕಭವನದಲ್ಲಿ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಲಾಯಿತು. ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮಿಗಳು, ಮಾಜಿ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್, ಮಾಜಿ ಮೇಯರ್ ಶ್ರೀಮತಿ ಪುಷ್ಪಲತ ಜಗನ್ನಾಥ ಮೊದಲಾದವರುಗಳಿದ್ದಾರೆ (14 ನವೆಂಬರ್ 2022)



ಮೈಸೂರು ಶ್ರೀ ಸುತ್ತೂರು ಮಠದ ಆವರಣದಲ್ಲಿ ನಡೆದ ಬಸವ ಬಳಗಗಳ ಒಕ್ಕೂಟದ ರಜತ ಮಹೋತ್ಸವದ 'ಬೆಳ್ಳಿ ಬೆಳಗು' ಕಾರ್ಯಕ್ರಮದಲ್ಲಿ 'ರಜತ ದೀಪ್ತಿ' ಸ್ಮರಣ ಸಂಚಿಕೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಬಿಡುಗಡೆಗೊಳಿಸಿದರು. ಶ್ರೀಮತಿ ಮಂಗಳ ಸೋಮಶೇಖರ್, ಶ್ರೀ ಎಲ್.ಎಸ್. ಮಹದೇವಸ್ವಾಮಿ, ಶ್ರೀ ಎಲ್. ನಾಗೇಂದ್ರ, ಶ್ರೀ ಜಿ. ಲಕ್ಷ್ಮಿಕಾಂತ ರೆಡ್ಡಿ, ಡಾ. ಕೆ.ವಿ. ರಾಜೇಂದ್ರ, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಶಿವಕುಮಾರ್‌ರವರುಗಳಿದ್ದಾರೆ (10 ಡಿಸೆಂಬರ್ 2022)



ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಭುವನೇಶ್ವರಿ ಪುತ್ತಳಿಯನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಯವರು ಅನಾವರಣಗೊಳಿಸಿದರು. ಸಾಹಿತಿಗಳಾದ ಡಾ. ದೊಡ್ಡರಂಗೇಗೌಡ, ಗೌ.ನ್ಯಾ. ಶ್ರೀ ಶಿವರಾಜ್ ವಿ. ಪಾಟೀಲ್ ಮತ್ತು ನಾಡೋಜ ಡಾ. ಮಹೇಶ್ ಜೋಷಿಯವರುಗಳಿದ್ದಾರೆ (17 ನವೆಂಬರ್ 2022)



ಮದ್ದೂರು ತಾಲ್ಲೂಕು ಚಂದೂಪುರದ ಶ್ರೀ ರೇಣುಕಾಶ್ರಮದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳವರ ದ್ವಿತೀಯ ವರ್ಷದ ಸಂಸ್ಮರಣೆ ಮತ್ತು ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಹೊನ್ನಲಗೆರೆ, ಮರಳೇಗವಿಮಠ, ದೇಗುಲಮಠ, ಮುಡುಕುತೊರೆ, ಸೋಸಲೆ ಮತ್ತು ಕವಲೇದುರ್ಗದ ಶ್ರೀಗಳಿದ್ದಾರೆ (24 ನವೆಂಬರ್ 2022)



ಚಿಕ್ಕಮಗಳೂರಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ 'ವಚನ ಚಳುವಳಿ–ಅರಿವು ಅನುಸರಣೆ' ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಶ್ರೀ ಚಂದ್ರಶೇಖರ ನಾರಣಾಪುರ ಹಾಗೂ ಇತರ ಮಹನೀಯರುಗಳನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸನ್ಮಾನಿಸಲಾಯಿತು. ಶ್ರೀ ಕೆ.ಟಿ. ರಾಧಾಕೃಷ್ಣನ್, ಶ್ರೀ ಗುರುಶಾಂತಪ್ಪ, ಶ್ರೀ ರವಿ ಕ್ಯಾತನಬೀಡು, ಪ್ರೊ. ಮಲೆಯೂರು ಗುರುಸ್ವಾಮಿ ಮೊದಲಾದವರುಗಳಿದ್ದಾರೆ (25 ನವೆಂಬರ್ 2022)




ಬೆಳಗಾವಿ ಜಿಲ್ಲಾ ಪ್ರಥಮ ಕದಳಿ ಮಹಿಳಾ ಸಮಾವೇಶವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಗದಗ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ನೀಲಗಂಗಾ ಚರಂತಿಮಠ, ಶ್ರೀ ಅಶೋಕ ಮಳಗಲಿ, ಡಾ. ಗೊ.ರು. ಚನ್ನಬಸಪ್ಪ, ಶ್ರೀಮತಿ ಸುಶೀಲಾ ಸೋಮಶೇಖರ, ಶ್ರೀಮತಿ ವಿದ್ಯಾ ಮಗದುಮ್ ಮತ್ತು ಶ್ರೀಮತಿ ರಾಜೇಶ್ವರಿ ಮ. ಕವಟಗಿಮಠರವರುಗಳಿದ್ದಾರೆ (10 ನವೆಂಬರ್ 2022)



ಮೈಸೂರು ಸುಯೋಗ್ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಲೇಖಕರಾದ ಡಾ. ಎಸ್.ಪಿ. ಯೋಗಣ್ಣನವರ 'ಆರೋಗ್ಯ ಮಿತ್ರ' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ಡಿ.ಎನ್. ಲೋಕಪ್ಪ, ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ, ಡಾ. ಸಿ.ಆರ್. ತಿರುಮಲಾಚಾರ್, ಪ್ರೊ. ಸಿ. ನಾಗಣ್ಣ, ಶ್ರೀ ಎಂ. ಚಂದ್ರಶೇಖರ್‌ರವರುಗಳಿದ್ದಾರೆ (30 ನವೆಂಬರ್ 2022)



ಬೆಂಗಳೂರು ರಾಜರಾಜೇಶ್ವರಿನಗರದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನಿಂದ ಪ್ರಾರಂಭಿಸಿದ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ದೇವಿಪ್ರಸಾದ್ ಶೆಟ್ಟಿ, ಶ್ರೀಮತಿ ಸುಧಾ ಮೂರ್ತಿ, ಶ್ರೀ ದತ್ತಾತ್ರೇಯ ಹೊಸಬಾಳೆ ಮತ್ತು ಡಾ. ಬಿ.ಎಸ್. ಶ್ರೀನಾಥ್ ರವರುಗಳಿದ್ದಾರೆ (5 ಡಿಸೆಂಬರ್ 2022)



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ದೊಡ್ಡರಂಗೇಗೌಡರವರನ್ನು ಸನ್ಮಾನಿಸಲಾಯಿತು. ಶ್ರೀ ಕೆ.ಎಸ್. ಶಿವರಾಂ, ಶ್ರೀ ಎಂ. ಚಂದ್ರಶೇಖರ್, ಶ್ರೀಮತಿ ಲತಾ ಮೋಹನ್, ಡಾ. ಲತಾ ರಾಜಶೇಖರ್, ಶ್ರೀ ಮಡ್ಡೀಕೆರೆ ಗೋಪಾಲ್, ಡಾ. ವೈ.ಡಿ. ರಾಜಣ್ಣ, ಶ್ರೀ ಗುಬ್ಬಿಗೂಡು ರಮೇಶ್‌ರವರುಗಳಿದ್ದಾರೆ (7 ಡಿಸೆಂಬರ್ 2022)



ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ವಿಸ್ತಾರ ಸುದ್ದಿವಾಹಿನಿಯನ್ನು ಪರಮಪೂಜ್ಯ ಜಗದ್ಗುರುಗಳು, ಪೇಜಾವರ ಶ್ರೀಪಾದಂಗಳು, ಶ್ರೀ ಮಾದಾರ ಚೆನ್ನಯ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಹರಿಪ್ರಕಾಶ್ ಕೋಣೆಮನೆ, ಶ್ರೀ ಶ್ರೀನಿವಾಸ್ ಹೆಬ್ಬಾರ್, ಶ್ರೀ ಸಿ.ಟಿ. ರವಿ, ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಶ್ರೀ ಎಚ್.ವಿ. ಧರ್ಮೇಶ್‌ರವರುಗಳಿದ್ದಾರೆ (6 ನವೆಂಬರ್ 2022)




ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 14ನೇ ಪದವೀಧರ ದಿನಾಚರಣೆ. ಡಾ. ರೇಚಣ್ಣ, ಡಾ. ಸಿ.ಜಿ. ಬೆಟಸೂರಮಠ, ಡಾ. ಕೆ. ಉಲ್ಲಾಸ ಕಾರಂತ, ಡಾ. ದೊಡ್ಡರಂಗೇಗೌಡ, ಡಾ. ಹೆಚ್.ಬಿ. ಸುರೇಶ್, ಶ್ರೀ ಎಂ.ಎಂ. ಸ್ವಾಮಿ ಹಾಗೂ ಪ್ರಶಸ್ತಿ ಪುರಸ್ಕೃತ ಪದವೀಧರರುಗಳಿದ್ದಾರೆ (6 ಡಿಸೆಂಬರ್ 2022)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆಯ ಅಂಗವಾಗಿ ಆಯೋಜಿಸಿದ್ದ ಜೆಎಸ್‌ಎಸ್ ಅಂತರ-ಸಂಸ್ಥೆಗಳ ಕ್ರೀಡಾಕೂಟವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಡಾ. ಕೆ.ಸಿ. ನಾರಾಯಣಗೌಡರವರು ಉದ್ಘಾಟಿಸಿದರು. ಶ್ರೀ ಪಿ. ವಿಶ್ವನಾಥ್, ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಗುಂಡಪ್ಪಗೌಡರು ಮೊದಲಾದವರಿದ್ದಾರೆ (28 ನವೆಂಬರ್ 2022)

Registered with the Registrar of Newspapers in India Under No. 50622/86
'Prasada' Bi-Monthly, Vol. 37 Issue No. 6, November-December 2022



ಬಿಡಿ ಪ್ರತಿ: ರೂ. 10

e-mail: prasadamagazine@gmail.com * www.jssonline.org